MR. SPEAKER.— In the revised programme if something has been stated provisionally, it is not final. That is why I do not want to analyse it.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸಭೆಯನ್ನು ಎಷ್ಟು ದಿನ ಬೇಕಾದರೂ ಮಾಡೋಣ, ಆದರೆ ನಮಗೆ ಇಷ್ಟು ದಿನಗಳ ಕಾರ್ಯಕ್ರಮವೆಂದು ಮೊದಲೇ ಸರಿಯಾಗಿ ಗೊತ್ತಾದರೆ ಅನುಕೂಲ. ಬರುವ ಭಾನುವಾರ ಯಾವುದೋ ಕಾಂಗ್ರೆಸ್ ಸದಸ್ಯರ ಮೀಟಿಂಗ್ ಇರುವುದೇ ಇದಕ್ಕೆ ಮೂಲಾಧಾರವೆಂದೂ, ಅದಕ್ಕೆ ಸರಿ ಹೊಂದುವಂತೆ ಮಾಡಿದ್ದಾರೆಂದೂ ವರ್ತಮಾನ. ....

MR. SPEAKER—I am not aware of any meeting of the Congress party. I have not recieved notices of such a meeting. Therefore, I do not take congnizance of it.

Sri S. M. KRISHNA (Maddur).—Yesterday, the Hon'ble Member Sri Shivappa drew the attention of the House and made out a case that a subject which has been agitating the minds of the people of the State, I am referring to the policy of prohibition—should be taken up, and you were pleased to observe that it can be taken up by the Business Advisory Committee. I would not be asking too much from you, but I only suggest that a couple of days could be allotted for a thorough discussion of this policy so that the House could give a bold lead to the Government.

MR. SPEAKER.—If we extend the programme beyond the 15th, it may upset the programme of Sri Huche Gowda.

Sri S. M. KRISHNA.—That was not the point which the Hon'ble Member, Sri Huche Gowda was trying to make, Sir.

MR. SPEAKER.—It means that we have to sit beyond the 15th. I had stated that the matter might be considered by the Business Advisory Committee. It was talked over little in the Business Advisory Committee. It is not possible to bring it before the House as the matter is so fluid and unprecise; whether it should be a official resolution or non-official resolution has got to be considered.

ಶ್ರೀ ಬಿ. ಹುಚ್ಚೇಗೌಡ.—ಈ ಸಾರಿಯ ಅಧಿವೇಶನದಲ್ಲಿ ಖಾಸಗಿ ಕಾರ್ಯಕಲಾಪಗಳಿಗೆ ಅವಕಾಶವೇ ಇಲ್ಲವೇ?

ಅಧ್ಯಕ್ಷರು.— ಅವಕಾಶವಿಲ್ಲ. ನಾನೇನು ಮಾಡಲಿ?

ಶ್ರೀ ಬಿ. ಹುಚ್ಚೇಗೌಡ.—ಖಾಸಗಿ ಕೆಲಸ ಕಾರ್ಯಗಳಿಗೆ ಕೊನೆಯ ಪಕ್ಷ ಒಂದು ದಿನವನ್ನಾದರೂ ಇಡಬೇಕಾಗಿತ್ತು.

———

BOMBAY TENANCY AND AGRICULTURAL LANDS (MYSORE AMENDMENT) BILL, 1962.

(Introduced).

Sri M. V. KRIHSNAPPA (Minister for Revenue).—Sir, I beg to introduce the Bombay Tenancy and Agricultural Lands (Mysore Amendment) Bill, 1962.

MR. SPEAKER.— The Bombay Tenancy and Agricultural Lands (Mysore Amendment) Bill, 1962 is introduced.

Business of the House.

MR. SPEAKER.— (Addressing Sri C. J. Muckannappa) the time allotted to the Mysore Housing Board Bill, 1962, is two hours, out of which we have already spent about 15 minutes. From the indication given by you, you wanted two hours.

———

MYSORE HOUSING BOARD BILL, 1962.

Motion to Consider.

(Debate Continued).

ಶ್ರೀ ಸಿ. ಜೆ. ಮುಕ್ಕಣ್ಣಪ್ಪ—ಇದರಲ್ಲಿ ಏನಿದೆ ಎಂದರೆ ಡೆವಲಪ್‌ಮೆಂಟ್ ಕೌನ್ಸಿಲ್, ಮುನಿಸಿಪಲ್ ಟೌನ್‌ಬೋರ್ಡ್, ತಾಲ್ಲೂಕ್ ಬೋರ್ಡ್ ಇವು ಒಂದಕ್ಕೊಂದು ಸಂಬಂಧ, ಅವರು ಇವರಿಗೆ ಸಂಬಂಧ. ಇವರು ಅವರಿಗೆ ಸಂಬಂಧವಾಗಿ ಒಂದಕ್ಕೊಂದು ಗಂಟುಹಾಕಿದ್ದಾರೆ. ಇದೆಲ್ಲಾ ಸಭೆಯ ಮುಂದೆ ಇಡಬೇಕಾದರೆ ಸ್ವಲ್ಪ ಕಾಲ ಬೇಕು.

MR. SPEAKER.—You have to finish by 2-30 p. m.

Sri C. J. MUCKANNAPPA.—Thank you Sir.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ನಿನ್ನೆ ನಾನು ಈ ಮೈಸೂರು ಹೌಸಿಂಗ್ ಬೋರ್ಡ್ ಬಿಲ್ ಮೇಲೆ ಮಾತನಾಡುತ್ತಾ ಈಗಿರತಕ್ಕದ್ದನ್ನು ಹಾಗೆಯೇ ಬಿಟ್ಟರೆ ನಿಜವಾಗಿ ಒಂದಕ್ಕೊಂದು ಕ್ಲಾಷ್ ಆಗುತ್ತವೆ ಎಂದು ಹೇಳುತ್ತಿದ್ದೆ. ಒಂದು ಕಡೆ ಹೌಸಿಂಗ್ ಕಾರ್ಪೊರೇಷನ್ ಇನ್ನೊಂದು ಕಡೆ ಹೌಸಿಂಗ್ ಬೋರ್ಡ್— ಇವೆರಡಕ್ಕೂ ದ್ವಂದಯುದ್ಧ ನಡೆಯುತ್ತಲೇ ಇರುತ್ತವೆ. ಹಣ ಕೊಡುವವರು ಹೌಸಿಂಗ್ ಬೋರ್ಡಿನವರು. ತಮ್ಮ ಮನಸ್ಸಿಗೆ ಬಂದ ಹಾಗೆ ಹಣವನ್ನು ಖರ್ಚು ಮಾಡುವವರು ಹೌಸಿಂಗ್ ಕಾರ್ಪೊರೇಷನ್ನಿನವರು. Housing Board is different. Housing Corporation comes under different category ಎಂಬುದಾಗಿ ನಾನು ಹೇಳುತ್ತೇನೆ. ನೀವು ಏನೊಂದು ಸ್ಕೀಮನ್ನು ಹಾಕಿಕೊಂಡು ಬಂದಿದ್ದೀರಿ. ಇವತ್ತಿನ ದಿವಸ ಇದಕ್ಕೆ ಒಂದು ಲೋಕಲ್ ಬೋರ್ಡ್ ಅಥವಾ ಲೋಕಲ್ ಅಥಾರಿಟಿಗೆ ಏನು ಅಧಿಕಾರವಿರುತ್ತದೋ ಅಷ್ಟೇ ಅಧಿಕಾರವಿರಬೇಕು. ಇದರಿಂದ ನಾನಾ ತರಗತಿಯ ಗುಂಪುಗಳು, ಪಾರ್ಟಿಗಳು, ಪಕ್ಷಗಳು ಇವೆಲ್ಲಾ ಏಕೆ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ದೇಶದಲ್ಲಿ ಮನೆ ಇಲ್ಲದವರಿಗೆ ಮನೆಕಟ್ಟಿಕೊಡಬೇಕೆಂಬುದು ಮೂಲ ಉದ್ದೇಶ. ಪ್ರಾಪರ್ಟಿ ಲಿಸ್ಟ್ ಸಾಲ ವಗೈರೆ ಎಲ್ಲ ನೋಡಿಕೊಂಡ್ ಕಂಟ್ರಾಕ್ಟ್ ಮಾಡಬೇಕು ಎಂದು ಹೋಗುವುದು ಸರಿಯಲ್ಲ. ಇಂಥಾದ್ದಕ್ಕೆಲ್ಲಾ ಒಂದೇ ಏಜೆನ್ಸಿ ಇರುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ನಾನು ಈ ಸಭೆಯ ಮುಂದೆ ತಮ್ಮ ಮುಖಾಂತರ ಸರ್ಕಾರಕ್ಕೆ ಅರಿಕೆ ಮಾಡಿಕೊಂಡೆ. ಸುಮಾರು 13 ವರ್ಷಗಳಿಂದಲೂ ಕೂಡ ಒಬ್ಬರೇ ಅಧ್ಯಕ್ಷರಿದ್ದಾರೆ. ಅದೂ ಸಹ ತಮಗೆ ಬೇಕಾದವರಿಗೆ ಇಲ್ಲಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಸಾಧಾರಣವಾಗಿ ರೂಪಾಯಿಗೆ 15 ಆಣೆ ಭಾಗ ಇಲ್ಲಿ ಖರ್ಚು ಮಾಡುತ್ತಿರುವುದರಿಂದ ಹೌಸಿಂಗ್ ಕಾರ್ಪೊರೇಷನನ್ನು ಕೂಡಲೇ ರದ್ದು ಮಾಡಬೇಕು ಹೌಸಿಂಗ್ ಬೋರ್ಡ್ ಆಕ್ಟ್ ಕೆಳಗೆ ಹೌಸಿಂಗ್ ಕಾರ್ಪೊರೇಷನ್ನಿನವರು ಎಲ್ಲಾ ಕೆಲಸಗಳನ್ನೂ ನಿರ್ವಾಹ ಮಾಡಬೇಕೆಂದು ನಾನು ಸರ್ಕಾರಕ್ಕೆ ಹೇಳುತ್ತೇನೆ. ಇದರಲ್ಲಿ ನಾಮಿನೇಷನ್ ಚೇರ್‌ಮನ್ ಎಂದು ಹೇಳುತ್ತೀರಿ. ಇವರಿಗೆ ಎಷ್ಟು ಸಂಬಳವನ್ನು ಕೊಡುತ್ತೀರಿ. ಸದಸ್ಯರಿಗೆ ಏನು ಕೊಡುತ್ತೀರಿ, ಅವರ ವ್ಯಾಪ್ತಿಯೇನು, ಅವರು ಸರ್ಕಾರಿ ನೌಕರರು ಎಂದು ಒಂದು ಕಡೆ ಹೇಳಿದ್ದೀರಿ. ಹೌಸಿಂಗ್ ಬೋರ್ಡ್ ಸದಸ್ಯರು ಸರ್ಕಾರಿ ನೌಕರರು ಹೇಗೆ ಆಗುತ್ತಾರೆ, ಅವರು ನಾಮಿನೇಷನ್ ಆದವರೇ ಪಬ್ಲಿಕ್ ಸರ್ವೆಂಟ್ಸ್ ಅಥವಾ ಸರ್ಕಾರೀ ನೌಕರರೇ ಒಂದೂ ತಿಳಿಯದು. ಮಾನ್ಯ ಮಂತ್ರಿಗಳು ಈ ಬಗ್ಗೆ ಉತ್ತರ ಕೊಡುವಾಗ ನನಗೆ ಈ ವಿಷಯದ ಮೇಲೆ ಜವಾಬು ಹೇಳಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಈಗ ಚೇರ್‌ಮನ್ನರಿಗೆ 1,000 ಅಥವಾ 500 ರೂಪಾಯಿಗಳನ್ನು ಸಂಬಳರೂಪವಾಗಿ ಕೊಡುತ್ತಿದ್ದೀರೆಂದು ಕಾಣುತ್ತದೆ. ಮತ್ತೆ ಇನ್ನೊಂದು ಕಡೆ ಪಬ್ಲಿಕ್ ಸರ್ವಿಸ್ ರೂಲಿನ ಮಿತಿಯಲ್ಲಿ ಅವರು ಬರುತ್ತಾರೆಂದು ಹೇಳಿದ್ದೀರಿ. ಹೌಸಿಂಗ್ ಬೋರ್ಡಿನಲ್ಲಿ ನೇಮಕ ಮಾಡಿರುವ ಪ್ರತಿಯೊಬ್ಬನೂ ಆ ಮಿತಿಯಲ್ಲಿಯೇ ಬರುತ್ತಾರೆಂದು ಹೇಳಿದ್ದೀರಿ. ಹೌಸಿಂಗ್ ಬೋರ್ಡಿನಲ್ಲಿ ನೇಮಕ ಮಾಡುವವರೆಲ್ಲರೂ ಇದರಲ್ಲಿಯೇ ಬರುತ್ತಾರೆಂದು ತಿಳಿಸಿದೆ. ಅಧ್ಯಕ್ಷರಿಗೆ ಮೈಸೂರು ಸಿವಿಲ್ ಸರ್ವೀಸ್ ರೂಲ್ಸ್ ಅಪ್ಲೈ ಆಗುತ್ತದೆ. ಅವರಿಗೆ ಡಿ. ಎ., ಟಿ. ಎ. ಮತ್ತು ಮನೆ ಬಾಡಿಗೆ ಎಲ್ಲಾ ಬರುತ್ತವೆ. ಅಲ್ಲದೆ ಕೊನೆಯಲ್ಲಿ ಎಲ್ಲ ಅಧಿಕಾರವನ್ನೂ ಅವರೇ ಇಟ್ಟುಕೊಂಡಿದ್ದಾರೆ. ಈ ಆಕ್ಟ್‌ನಲ್ಲಿ ಇರತಕ್ಕಂಥ ಅಧಿಕಾರಕ್ಕಿಂತಲೂ ಇದರಲ್ಲಿ ಅನ್ಯರ ಅಧಿಕಾರದ ವ್ಯಾಪ್ತಿ ಜಾಸ್ತಿಯಾಗಿದೆ. ಇದನ್ನು ಸರ್ಕಾರದವರು ಕೂಲಂಕುಷವಾಗಿ ಯೋಚನೆ ಮಾಡಬೇಕು. ಇನ್ನು ಮುನಿಸಿಪಾಲಿಟಿಗೆ ಬರತಕ್ಕ ವೆಚ್ಚವನ್ನು ವಿಚಕ್ಷಣೆಯಿಂದ ಪರಿಹರಿಸುವುದಕ್ಕೆ ಒಂದು ಟ್ರಿಬ್ಯೂನಲ್‌ನ್ನು ಇಟ್ಟುಕೊಂಡಿದ್ದಾರೆ. ಆಯಾ ಸಂಸ್ಥಾನದಲ್ಲಿರತಕ್ಕ ಡಿಸ್ಟ್ರಿಕ್ಟ್ ಜಡ್ಜ್ ಇದಕ್ಕೆ ಪ್ರೋತ್ಸಾಹ ಮಾಡುತ್ತಿದ್ದಾರೆ. ಈ ಮಸೂದೆಯಲ್ಲಿ ಸೆಕ್ಷನ್ 17 ರಲ್ಲಿ ಈ ರೀತಿ ಹೇಳಿದೆ.

"Duty of Board to undertake Housing Schemes".—Subject to the provisions of this Act and subject to the control of the State Government, the Board may incur expenditure and undertake works in any area for the framing and execution of such housing schemes as it may consider necessary from time to time, or as may be entrusted to it by the State Government.

ಇದು ನನಗೆ ಅರ್ಥವಾಗುವುದಿಲ್ಲ. ಇದನ್ನು ಬಹಳ ಮೊಗಮ್ಮಾಗಿ ಗಂಭೀರವಾಗಿ ಇಟ್ಟುಕೊಂಡಿದ್ದಾರೆ. ಇದನ್ನು ಅವರು ಪೈಲಟ್ ಮಾಡುವಾಗ ಬಹಳ ಗಂಭೀರವಾಗಿ ಹೇಳಿದರು. ಅರ್ಥವಾಗುತ್ತಿತ್ತು ಎಂಬುದಾಗಿ ಹೇಳುತ್ತೇನೆ. ಇದರ ರೂಪು ರೇಖೆಗಳು ಏನೆಂಬುದೇ ನನಗೆ ಅರ್ಥವಾಗುವುದಿಲ್ಲ. ಒಂದು ಪ್ರಾಪರ್ಟಿಯನ್ನು ಅಕ್ವೈರು ಮಾಡಿಕೊಳ್ಳಬೇಕು ಅಥವಾ ಇನ್ನೊಂದು ಯಾವುದಾದರೂ ಒಂದು ರೀತಿ ಮುನಿಸಿಪಲ್ ಅಥವಾ ಕಾರ್ಪೊರೇಷನ್ನಿಗೆ ಅಗ್ರಿಮೆಂಟ್ ಆದಮೇಲೆ, ಅಲ್ಲಿ ಒಂದು ಹೌಸಿಂಗ್ ಸ್ಕೀಮನ್ನು ಇಂಟ್ರಡ್ಯೂಸ್ ಮಾಡಿ, ಆ ಸ್ಕೀಮನ್ನು ಮಂಜೂರು ಮಾಡಿ ಆಗಲೇ ಕೆಲಸ ಕೈಗೊಳ್ಳಬೇಕು. ಇದರೊಳಗೆ ನನಗೇನು ಅರ್ಥವಾಗಲಿಲ್ಲ. ಇದರಿಂದೇನು ನನಗನ್ನಿಸುತ್ತದೆ ಅಂದರೆ ಇದನ್ನು ಆತುರಾತುರವಾಗಿ ಒಂದು ಘಂಟೆಯಲ್ಲಿ ತೆಗೆದುಕೊಂಡು ಹೋಗುವುದು ಸರಿಯಲ್ಲ. ಸೆಲೆಕ್ಟ್ ಕಮಿಟಿಗೆ ಇದನ್ನು ಕಳುಹಿಸಿ ಇದರಲ್ಲಿರತಕ್ಕ ದೋಷಗಳನ್ನು ನಿವಾರಣೆ ಮಾಡಿದ್ದರೆ ಬಹಳ ಚೆನ್ನಾಗಿತ್ತು. ಆದ್ದರಿಂದ ಇವತ್ತು ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅದರಲ್ಲಿರತಕ್ಕ ಲೋಪದೋಷಗಳನ್ನು ತಿದ್ದುಪಡಿ ಮಾಡಿಕೊಳ್ಳಬೇಕು. ಕ್ಲಾಜು 17 ರಲ್ಲಿ ಮೊಗಮ್ಮಾಗಿ

ಹೇಳಿರುವಂಥಾದ್ದನ್ನು ಚೆನ್ನಾಗಿ ವಿಚಾರ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಕ್ಲಾಜು 25 ಈ ರೀತಿ ಇದೆ.

"Transfer to the Board for purposes of housing scheme of land vested in the Corporation on municipal council, a district board, a taluk development board or a village panchayat."

ಇದೇನು? ಹೌಸಿಂಗ್ ಬೋರ್ಡಿಗೆ ಎಷ್ಟು ದೊಡ್ಡ ಅಧಿಕಾರ? ಇದರ ಕ್ಷೇತ್ರ ಇಡೀ ದೇಶಕ್ಕೆಲ್ಲಾ ಅನ್ವಯವಾಗಿದ್ದರೂ ಮುನಿಸಿಪಾಲಿಟಿ ಆಯಾ ದೇಶಕ್ಕೇ ಅನ್ವಯಿಸುತ್ತದೆ. ಆದರೆ ಸರ್ಕಾರ ಒಪ್ಪಿದರೆ ಅದನ್ನೂ ಸಹ ಆಲೋಚಿಸಲಾಗುತ್ತದೆ. ಇದು ಪುನಃ ವ್ಯವಸ್ಥೆಯಾದರೆ ಚೆನ್ನಾಗಿರುತ್ತದೆ, weak person ಕೈಕೆಳಗೆ ಈ ಅಧಿಕಾರ ಕೊಡುವುದು ಸರಿಯಲ್ಲ.

ಹೌಸಿಂಗ್ ಬೋರ್ಡಿನಲ್ಲಿ ಒಂದು ನಿರ್ಣಯ ಮಾಡಿ ಆ ಅಧಿಕಾರವನ್ನು ಇವರಿಗೆ ಕೊಡಬೇಕೆಂದು ಹೇಳಿದರು. ಇದು ಅನರ್ಥವಾಗುತ್ತದೆ. ಇನ್ನು ಕಾರ್ಪೊರೇಷನ್ ಅಥವಾ ಮುನಿಸಿಪಾಲಿಟಿಗೂ ನಿಮಗೂ ವ್ಯಾಜ್ಯ ಬಂದರೆ ಸರ್ಕಾರ ಕೊನೆಯದಾಗಿ ತೀರ್ಮಾನ ಮಾಡುತ್ತಾರೆ. ಯಾವುದಾದರೂ ಒಂದು ಪ್ರಾಪರ್ಟಿಯನ್ನು ಅಕ್ವೈರು ಮಾಡಿಕೊಳ್ಳಬೇಕೆಂದರೆ ಹೌಸಿಂಗ್ ಬೋರ್ಡ್ ಮಾಡಿಕೊಳ್ಳಬೇಕೋ ಅಥವಾ ಕಾರ್ಪೊರೇಷನ್ ಅಥವಾ ಮುನಿಸಿಪಾಲಿಟಿ ಮಾಡಿಕೊಳ್ಳಬೇಕೋ ಎಂಬೀ ಸಂಶಯ ಬರುತ್ತದೆ. ಇದು ಹಿತ್ತಲಕಡೆ ಅಕ್ವೈರುಮಾಡಿಕೊಂಡು ಮುಂದುಗಡೆ ಬಾಗಿಲಿನಲ್ಲಿ ಬೇಡವೆಂದು ಹೇಳುವಹಾಗಾಗುತ್ತದೆ. ಆಗ ಮುನಿಸಿಪಾಲಿಟಿ, ಕಾರ್ಪೊರೇಷನ್ ಅಥವಾ ಹೌಸಿಂಗ್ ಬೋರ್ಡಿಗೆ ವ್ಯಾಜ್ಯ ಬಂದರೆ ಅದನ್ನು ಬಗೆಹರಿಸುವುದಕ್ಕೆ ಒಂದು ಇಲಾಖೆ ಪ್ರತ್ಯೇಕವಾಗಿರಬೇಕು. ಆದ್ದರಿಂದ ಈ ಕ್ಲಾಜು 25ನ್ನು ಸ್ವಲ್ಪ ಕೂಲಂಕುಷವಾಗಿ ವಿಚಾರಮಾಡಬೇಕು. Army of Officers in the Law Department—ಈ ವಿಚಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಬೇಕು. ಏಕೆಂದರೆ ಅವರು ಇವತ್ತು ಒಂದು ಒಪೀನಿಯನ್ ಕೊಟ್ಟರೆ ನಾಳೆ ಒಂದು ಒಪೀನಿಯನ್ ಕೊಡುತ್ತಾರೆ. ಅದನ್ನು ಸರ್ಕಾರದವರು ಚೆನ್ನಾಗಿ ವಿಚಾರಮಾಡಬೇಕು. ಕ್ಲಾಜು 25-ಸಬ್ ಕ್ಲಾಜು (3) ರಲ್ಲಿ ಇನ್ನೊಂದು ಮಾತನ್ನು ಹೀಗೆ ಹೇಳಿದ್ದಾರೆ. 'where there is any dispute the matter shall be referred to the State Government.' ಇದನ್ನು ಸರ್ಕಾರದವರು ಕೂಲಂಕುಷವಾಗಿ ವಿಮರ್ಶೆ ಮಾಡದ ಹೊರ್ತು ಏನೂ ಪ್ರಯೋಜನವಿಲ್ಲ. ಇಲ್ಲದಿದ್ದರೆ ನಿಮಗೇ ತೊಡಕುಬರುತ್ತದೆ. ಏನೊಂದು ಉದಾತ್ತವಾದ ಧ್ಯೇಯುವನ್ನು ಇಟ್ಟುಕೊಂಡಿದ್ದೀರೋ ಅದನ್ನು ಸಾಧನೆಮಾಡುವುಕ್ಕೆ ತುಂಬಾ ಅಡ್ಡಿ ಆತಂಕಗಳು ಬರುತ್ತವೆ. ಮುನಿಸಿಪಾಲಿಟಿ ಅಥವಾ ಕಾರ್ಪೊರೇಷನ್ ಅವರ ಹತ್ತಿರ ಏನು ಆಸ್ತಿಗಳನ್ನು ತೆಗೆದುಕೊಂಡಿದ್ದೀರೋ ಅದನ್ನು ಸ್ವಲ್ಪ ವಿಮರ್ಶೆಮಾಡಬೇಕೆಂದು ನಾನು ಹೇಳುತ್ತೇನೆ. ಅದನ್ನೇನೂ ನೀವು

ಹೊಸದಾಗಿ ಬದಲಾವಣೆ ಮಾಡಲಿಲ್ಲ. ಹಿಂದಿದ್ದ ಆಕ್ಟ್ ಇದ್ದ ರೀತಿಯೇ ಇದೆ. ಮುನಿಸಿಪಾಲಿಟಿಯುವರಿಗೆ ನಮ್ಮ ಹೌಸಿಂಗ್ ಬೋರ್ಡ್‌ನಿಂದ ದುಡ್ಡು ಕೊಟ್ಟು ಮನೆಗಳನ್ನು ಕಟ್ಟಿದ್ದರೂ ಏನಾದರೂ ವ್ಯಾಜ್ಯಗಳು ಬಂದರೆ ಅವನ್ನು ಬಗೆಹರಿಸುವುದಕ್ಕೆ ಯಾವ ಕಾರಣದಿಂದಲೂ ಹೌಸಿಂಗ್ ಬೋರ್ಡಿನ ಮುಂದೆ ಬರುವುದಕ್ಕೆ ಸಾಧ್ಯವಿಲ್ಲ.

ಇನ್ನು ಹೌಸಿಂಗ್ ಬೋರ್ಡ್ ಆಕ್ಟಿವಿಟೀಸನ್ನು ನೋಡುವುದಾದರೆ ಈಗ ಅದನ್ನು ವಿಸ್ತರಣೆ ಮಾಡಿದ್ದಾರೆ. ಪಂಚಾಯಿತಿಯವರೂ ಮುನಿಸಿಪಾಲಿಟಿಯವರೂ ಮನೆಗಳನ್ನು ಕಟ್ಟುವುದಕ್ಕೆ ಇತ್ತೀಚೆಗೆ ವಿಶೇಷವಾಗಿ ಮುಂದೆ ಬರುತ್ತಿದ್ದಾರೆ. ಈಗ ವಿಸ್ತರಣೆ ಜಾಸ್ತಿಯಾದ ಮೇಲೆ ಹೌಸಿಂಗ್ ಬೋರ್ಡ್ ಜವಾಬ್ದಾರಿ ಜಾಸ್ತಿಯಾಯಿತು. ಇಂತಹ ವ್ಯಾಜ್ಯಗಳು ಬಂದರೆ ಎಷ್ಟರಮಟ್ಟಿಗೆ ಅವುಗಳಲ್ಲಿ ತೊಡಕು ಇರುತ್ತವೆ ಎಂಬುದನ್ನು ತಿಳಿದು ಕೂಲಂಕುಷವಾಗಿ ವಿಮರ್ಶೆ ಮಾಡಬಹುದು.

ಇನ್ನು ಕ್ಲಾಜು 26ರಲ್ಲಿ Compensation in respect of land vested in the Board ಎಂದು ಹೇಳಿದೆ. ಇದರಲ್ಲಿ ನಿಮ್ಮ ನಿಮ್ಮ ವ್ಯಾಜ್ಯ ಬಂದರೆ ಟ್ರಿಬ್ಯೂನಲ್ ಮುಂದೆ ಹೋಗಿ. ಅದಕ್ಕೂ ಒಪ್ಪದೇಹೋದರೆ ಹೈಕೋರ್ಟಿಗೆ ಹೋಗಿ ಎಂದು ಹೇಳುತ್ತಾರೆ. ಇದಕ್ಕಿಂತಲೂ ರಾಜಮಾರ್ಗ ಬೇರೆ ಇಲ್ಲವೇ ಮತ್ತು ನಿಮಗೂ ಕಾರ್ಪೊರೇಷನ್ ಅಥವಾ ಮುನಿಸಿಪಾಲಿಟಿಗೆ ವ್ಯಾಜ್ಯ ಬಾರದೇ ಇರುವ ರೀತಿಯಲ್ಲಿ ದೃಢಪಡಿಸುವುದಕ್ಕೆ ಬೇರೆ ಮಾರ್ಗವಿಲ್ಲವೇ ಎಂಬುದಾಗಿ ನಾನು ಒಂದು ಪ್ರಶ್ನೆಯನ್ನು ಸರ್ಕಾರದವರಲ್ಲಿ ಕೇಳುವವನಾಗಿದ್ದೇನೆ. ಡಿಸ್ಟ್ರಿಕ್ಟ್ ಜಡ್ಜ್‌ರವರಿಂದ ಆದ ತೀರ್ಪಿನಮೇಲೆ ಪುನಃ ಹೈಕೋರ್ಟಿಗೆ ಅಪೀಲು ಹೋಗಬಹುದು ಎಂದು ಇದೆ. ಇವಕ್ಕಿಂತಲೂ ಯಾವುದಾದರೂ ಸರಳ ಮಾರ್ಗವನ್ನು ಕಂಡು ಹಿಡಿದು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಸರಳ ಎಂದರೆ ಇನ್ನು ಹೇಗೆ ಸಿಂಪ್ಲಿಫೈ ಮಾಡಬೇಕು?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೈಸೂರು ಸಂಸ್ಥಾನದಲ್ಲಿ ಗೌರ್ನಮೆಂಟ್ ಪ್ಲೀಡರ್ ಎಂದು ಇದ್ದರು. ಯಾವುದಾದರೂ ಪ್ರಾಪರ್ಟಿಯನ್ನು ಅಕ್ವೈರು ಮಾಡಿಕೊಂಡರೆ ಅವರನ್ನು ಫೀಸ್ ಜಾಸ್ತಿ ಕೇಳಿ ಎಂದು ಹೇಳುವುದು. ಹೀಗೆ ಹೇಳತಕ್ಕದ್ದು ಯಾವ ಡೆವಿಲ್ ಕೈವಾಡ ಇರುತ್ತದೋ ಗೊತ್ತಿಲ್ಲ. ನೀವು ಒಬ್ಬ ಲಾಯರ್. ಮಣ್ಣು ಮಸಿ ಮಾಡುತ್ತಿದ್ದೀರಿ. ನಾನು ಕಣ್ಣಿನಿಂದ ನೋಡಿರುವುದನ್ನು ಹೇಳುತ್ತಿದ್ದೇನೆ. ಹೀಗೆ ಒಬ್ಬ ಪ್ಲೀಡರ್ ಒಂದು ಪ್ರಾಪರ್ಟಿಯನ್ನು ಅಕ್ವೈರು ಮಾಡಿಸಿಕೊಟ್ಟು ನಾಲ್ಕೈದು ಲಕ್ಷ ರೂಪಾಯಿಗಳ ಕಮಿಷನ್ನು ತೆಗೆದುಕೊಂಡರು. ಅಕ್ವಿಸಿಷನ್ ಅವಾರ್ಡ್ ದುಡ್ಡನ್ನು ನೀವು ಜಾಸ್ತಿ ಕೇಳಿ ಎಂದು ಕೋರ್ಟಿನಲ್ಲಿ ಹೇಳಿದರು, ಇವರಿಂದ ಸರ್ಕಾರಕ್ಕೆ ಹೆಚ್ಚು ಲಾಭವುಂಟಾಗುತ್ತದೆನ್ನುವುದು ನಿಜವಲ್ಲ. ಇದರಿಂದ ಹೌಸಿಂಗ್ ಬೋರ್ಡಿಗೂ ಮತ್ತು ಅದರ ಸ್ಕೀಮುಗಳಿಗೂ ಬಹಳ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ತೊಂದರೆಯಾಗಬಹುದು. ಸರ್ಕಾರಕ್ಕೆ ನಿಜವಾಗಿ ಇಕ್ಕಟ್ಟಿನ ಪರಿಸ್ಥಿತಿ ಬರಬಹುದು ಎಂದು ನಾನು ಹೇಳುತ್ತೇನೆ.

ಇನ್ನು ಕ್ಲಾಜ್ 29ಕ್ಕೆ ಹೋದರೆ ಅಲ್ಲಿ ಏನು ಹೇಳಿದ್ದಾರೆ ?

Vesting in the Corporation, Municipal Council, Municipal Committee or other municipal body, District Board·······under housing scheme" ಎಂತ ಹೇಳಿದ್ದಾರೆ. ಇದೆಲ್ಲಾ ಪುನಃ ಗಲಾಟೆಗೆ ಸಿಕ್ಕಿಕೊಳ್ಳುವ ಪ್ರಸಂಗವೇ ಬರುತ್ತೆ. ಒಬ್ಬರು ಒಂದು ರಸ್ತೆ ಇತ್ಯಾದಿ ಮಾಡಿದರೆ ಅದನ್ನು ಮತ್ತೊಬ್ಬರು ಕೆಡಿಸಬಹುದು. ಇಲ್ಲವೇ ಅಲ್ಲಿ ಬೇರೆಯವರಿಗೆ ಓಡಾಡ ಬೇಡಿ ಎಂತ ಹೇಳಬಹುದು. ಆಗ ನಮಗೂ ಅವರಿಗೂ ವ್ಯಾಜ್ಯಹುಟ್ಟಿ ಸಿವಿಲ್ ಕೋರ್ಟಿಗೆ ಹೋಗಿ ಇಂಜಂಕ್ಷನ್ ವಗೈರೆ ಆರ್ಡರ್ ತಂದು ಅನೇಕ ತೊಂದರೆಗಳಾಗತಕ್ಕ ಪರಿಸ್ಥಿತಿ ಉಂಟಾಗುತ್ತದೆ. ಇದು ಸರಿಯಾದ್ದಲ್ಲ.

ಇನ್ನು ಕ್ಲಾಜ್ 30ರಲ್ಲಿ other duties of the Board ಎಂತ ಅದರಲ್ಲಿ ಏನು ಹೇಳಿದ್ದಾರೆಂಬುದನ್ನು ನೋಡಿದರೆ :—

Construction of buildings and the Board may for that purpose do all the things for :—

(*a*) Unification, Simplification and Standardisation of building materials ಎಂತ ಹೇಳಿದ್ದಾರೆ.

SRI D. DEVARAJ URS (Minister for Labour, Housing and Transport).—It is a power given to the Board to vest the property with the respective local bodies.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದನ್ನೂ ನಾನು ಓದಿದ್ದೇನೆ. ಇದಕ್ಕೂ ಅವರು ಹಾಗೆ ಆಬ್‌ಜೆಕ್ಷನ್ ಮಾಡಿದರು. ಹೀಗೆ ಆಬ್‌ಜೆಕ್ಷನ್ ಮಾಡಿದರು ಎಂತ ಹೇಳಲು ಅವಕಾಶವಿದೆ. ಸರ್ಕಾರದವರು ಇಂಥ ಒಂದು ಒಳ್ಳೆಯ ಒಂದು ಸ್ಕೀಮನ್ನು ಜಾರಿಗೆ ತರುವಾಗ ಇಲ್ಲಿ wherever the State Govt. is satisfied.—

(*a*) that any street laid-out or altered by the Board has been duly levelled, paved etc.......

SRI D. DEVARAJ URS.—It is power given to the Board to vest the property with the respective local bodies ಅಷ್ಟೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದನ್ನು ನಾನು ಓದಿದ್ದೇನೆ. ಆದಾಗ್ಯೂ ಅವರು ಇಲ್ಲಿ ಅನೇಕ ವಿಧವಾದ ಆಬ್‌ಜಕ್ಷನ್‌ಗಳನ್ನು ಎತ್ತಲು ಅವಕಾಶವಿದೆ. ಸರ್ಕಾರದವರು ಯಾವತ್ತೂ ಇಂಥ ಒಂದು ಒಳ್ಳೇ ಸ್ಕೀಮನ್ನು ಜಾರಿಗೆ ತರುವಾಗ ಹೀಗೆ ಹೇಸ್ಟಿ-ಮ್ಯಾರೇಜ್ ಮಾಡುವುದು ಬೇಡ. ಈಗಲೂ ಮಾನ್ಯ ಮಂತ್ರಿಗಳು ಈ ವಿಚಾರಗಳನ್ನೆಲ್ಲ ಮತ್ತೊಮ್ಮೆ ಪರಿಶೀಲಿಸಲು ಒಂದು ಸಣ್ಣ ಸಲೆಕ್ಟ್ ಕಮಿಟಿಯನ್ನು ಮಾಡಿ, ಇದನ್ನು ಇನ್ನು ಸ್ವಲ್ಪ ಪರಿಶೀಲನೆ ಮಾಡಿ ಉತ್ತಮ ಪಡಿಸತಕ್ಕದ್ದು ಅಗತ್ಯ ಎಂತ ಹೇಳುತ್ತೇನೆ.

ಇನ್ನು ಕ್ಲಾಜ್ 30 ಕ್ಕೆ ಬಂದರೆ Other duties of the Board- ಈ ವಿಚಾರದಲ್ಲಿ ಸರ್ಕಾರದವರಲ್ಲಿ ಏನಾದರೂ ಇಂಥಾ ಒಂದು ಸ್ಕೀಂ ಇದೆಯೋ ಎಂದು ಕೇಳಬೇಕಾಗಿದೆ. ಈಗ ಸರ್ಕಾರದವರು ಇಲ್ಲಿ ಏನೇನು ಹೇಳಿದ್ದಾರೆಂಬುದನ್ನು ಒಂದೊಂದನ್ನಾಗಿ ಹೇಳುತ್ತೇನೆ-ಮೊಟ್ಟ ಮೊದಲನೆಯದಾಗಿ.-Unification, Simplification and standardisation of building materials ಎಂತ ಹೇಳಿದ್ದಾರೆ. ಈ ವಿಚಾರಗಳನ್ನೆಲ್ಲಾ ಯಾವ ಅಧಿಕಾರಿಗಳು ಹೊಳಹೊಕ್ಕು ಪರಿಶೀಲಿಸಿದ್ದಾರೆ—ಎಂಬುದನ್ನು ಮಾನ್ಯ ಮಂತ್ರಿಗಳು ಮಸೂದೆಯನ್ನು ಮಂಡಿಸತಕ್ಕ ಕಾಲಕ್ಕೆ ಸಭೆಗೆ ವಿವರಿಸಿ ತಿಳಿಸಿದ್ದರೆ ಚೆನ್ನಾಗಿತ್ತು. ಆದರೆ ಅವರೇನು ಹೇಳಲಿಲ್ಲ. ಹಾಗೆ ಅವರು ವಿವರಣೆ ಕೊಟ್ಟಿದ್ದರೆ ನಮಗೆ ಈ ಬಿಲ್ಲು ಚೆನ್ನಾಗಿ ಅರ್ಥವಾಗುತ್ತಿತ್ತು.

ಇನ್ನೂ ಮುಂದೆ ಏನು ಹೇಳಿದ್ದಾರೆಂದರೆ-Organising or undertaking the proudction ಎಂದು ಹೇಳಿದ್ದಾರೆ. ಆದರೆ ಇದರಲ್ಲಿ ಎಷ್ಟು ದುಡ್ಡಿದೆ, ಇದಕ್ಕೆಲ್ಲ ಎಷ್ಟು ದುಡ್ಡು ಬೇಕು, encouring research for discovering chief building materials ಎಂತ ಹೇಳಿದ್ದಾರೆ. ಇದಕ್ಕಾಗಿ ಇವರೂ ಯಾವ ಬೋರ್ಡ್ ಅಥವಾ ಕಂಪನಿಯನ್ನು ನೇಮಕ ಮಾಡಿಕೊಂಡಿದ್ದಾರೆ-ಇವರಿಗೆ ಯಾರು ಈ ವಿಚಾರದಲ್ಲಿ ಅಡ್ವೈಜರುಗಳು, ಯಾರು ಅಂಥ ಎಕ್ಸ್‌ಪರ್ಟುಗಳು ಎಂಬುದನ್ನು ತಿಳಿಸಬೇಕಾಗಿರಲಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಮುಂದಕ್ಕೆ ಅದೆಲ್ಲವನ್ನೂ ಮಾಡೋಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೂರುಗಜ ಬಟ್ಟೆ ಕೊಟ್ಟು ಹೊಲಿಗೆ ಮಾಡು ಎಂತ ಹೇಳಿದರೆ-ಯಾರಿಗೆ-ಎಷ್ಟು ವರ್ಷದವರಿಗೆ—ಅದರಲ್ಲೇನು ನಿಕ್ಕರ್ ಆಗುತ್ತದೋ, ಕಾಲು ಚೀಲ ಆಗುತ್ತದೋ ಟೋಪಿಗೆ ಸಾಕಾಗುತ್ತದೋ, ಎಂಬುದನ್ನು ಆಲೋಚನೆ ಮಾಡುವುದು ಬೇಡವೇ ? ಮಾಡೋಣ ಎಂದರೆ ಯಾವಾಗ ?

Organising or undertaking the production of building materials for the housing scheme ಎಂತ ಹೇಳಿದ್ದಾರಲ್ಲ. ಇವರ ಹೌಸಿಂಗ್ ಬೋರ್ಡ್ ಇಲ್ಲಿಯ ತನಕ ಎಷ್ಟು ವರ್ಷ ಕೆಲಸ ಮಾಡಿದೆ, ಇವರ ಅನುಭವವೇನು, ಅದನ್ನೆಲ್ಲಾ ಅವರು ಸಭೆಗೆ ತಿಳಿಸಬೇಕಾಗಿತ್ತು. ಆದರೆ ಏನನ್ನೂ ಹೇಳದೆ ಚುಟಕಾದಲ್ಲಿ ಮುಗಿಸಿದರು.

ಇನ್ನು ಈ Encouraging research for discovering cheap building materials and working new methods of economic construction ಎಂತ ಹೇಳಿದ್ದಾರೆ ಈ ಹಿಂದೆ ಯಾರೋ ಕೇರಳದವರೊಬ್ಬರು ನಮ್ಮ ಬೆಂಗಳೂರಿನಲ್ಲಿರುವ "ನಿಯೋ ಕೆಫೆ" ಯನ್ನು ಕಟ್ಟಿದ್ದರೂ ಅಂತ ಹೇಳುತ್ತಾರೆ ಅವರ ಹೆಸರು ಗೊತ್ತಿಲ್ಲ. ಆದರೆ ಆ ಕೆಫೆ ಹಿಂಭಾಗದಲಿ 'ಜೈ ಹಿಂದ್' ಟಾಕೀಸ್ ಎಂತ ಇದೆ. ಅದನ್ನು ಅವರೇ ಕಟ್ಟಿದರಂತೆ. ಆ ಕಂಟ್ರಾಕ್ಟ್ ಕೆಲಸವನ್ನು ಒಬ್ಬ ವುಡ್ ಎಕ್ಸ್‌ಪರ್ಟಗಳಿಗೆ ವಹಿಸಲಾಗಿತ್ತಂತೆ. ಅವರ ಹೆಸರು ಕಾಮೋಶಂ ಎಂತ. ಅವರು ಆ ಥಿಯೇಟರನ್ನೆಲ್ಲಾ ಬರಿ ಮರದಲ್ಲೇ ಕಟ್ಟಿಸಿದ್ದರಂತೆ. ಹಾಗೇನಾದರೂ ನಮ್ಮ ಸರ್ಕಾರದಲ್ಲಿ ಅಂಥ ಎಕ್ಸ್‌ಪರ್ಟುಗಳು ಯಾರಾದರೂ ಇದ್ದಾರೆಯೇ? ನಮ್ಮ ಹೌಸಿಂಗ್ ಬೋರ್ಡಿನಲ್ಲಿ ಅಂಥ ಎಕ್ಸ್‌ಪರ್ಟುಗಳು ಎಷ್ಟು ಜನ ಇದ್ದಾರೆ? ಇದೊಂದನ್ನೂ ತಿಳಿಸಲಿಲ್ಲ. ಆದರೆ ಈಗ ಇದನ್ನೆಲ್ಲಾ ಇವರು ಒಂದು ಪರಿಕ್ಷಾರ್ಥವಾಗಿ ನಡೆಸಬೇಕೆಂದು ಹೊರಟಿರುವಂತೆ ಕಾಣುತ್ತಿದೆ. ಇವರಿಗೆ ಇದು ಒಂದು ಎಕ್ಸ್‌ಪರಿಮೆಂಟಲ್ ವರ್ಕ್ ಇದ್ದ ಹಾಗೆ ಎಂತ ಕಾಣುತ್ತಿದೆ. ಆಗಲಿ ದೇವರು ಇವರಿಗೆ ಒಳ್ಳೆಯದನ್ನು ಮಾಡಲಿ. ಆದರೆ ಈಗ ಆ ಜಪಾನಿನಲ್ಲಿ ಮನೆಗಳನ್ನು ಕೇವಲ ರಟ್ಟಿನಲ್ಲಿ-ಗಾಜಿನಲ್ಲಿ ಮತ್ತು ಪ್ಲಾಸ್ಟಿಕ್ ಇತ್ಯಾದಿ ಸಾಮಾನುಗಳಲ್ಲಿ ಕಟ್ಟುತ್ತಿದ್ದರೆಂತ ಕೇಳುತ್ತಿದ್ದೇವೆ. ಆದರೆ ಈಗ ನಮ್ಮ ಇಂಡಿಯಾದೇಶದ ಈ ಮೈಸೂರು ರಾಜ್ಯದಲ್ಲಿ ಗಂಡ-ಹೆಂಡತಿ-ಮಕ್ಕಳು ಮಳೆ ಬಿಸಿಲುಗಳಿಗೆ ಸಿಕ್ಕದಂತೆ ಇರುವುದಕ್ಕೆ ಒಂದು ಗೂಡನ್ನು ರಚಿಸತಕ್ಕ ಬಗ್ಗೆ ಅಂಥ ಎಕ್ಸ್‌ಪರ್ಟ್‌ಗಳೆಷ್ಟು ಜನರಿದ್ದಾರೆ? ಆದರೆ ಮಂತ್ರಿಗಳಿಗೆ ಇದೊಂದೂ ಗೊತ್ತಿಲ್ಲ. ಯಾರೋ ಇಂಥ ಒಂದು ಸ್ಕೀಮನ್ನು ತಯಾರು ಮಾಡುತ್ತಾರೆ. ಅದನ್ನು ಮಂತ್ರಿಗಳು ಈ ಸಭೆ ಮುಂದೆ ತರುತ್ತಾರೆ. ಆದರೆ ಇಲ್ಲಿ ಇಂಥ ಮಸೂದೆ ಬಗ್ಗೆ ಸದಸ್ಯರುಗಳು ಏನೇನು ಪ್ರಶ್ನೆಗಳನ್ನು ಕೇಳುತ್ತಾರೆಂಬ ಬಗ್ಗೆ ಆವರಿಗೇನು ಗೊತ್ತಿರುತ್ತೆ. 'ಕಿವುಡ-ಇಟ್ಟ ಮೂಗ-ಉಂಡ' ಎಂದು ಹೇಳುವಂತೆ ಆಗಿದೆ ಈ ವ್ಯವಹಾರಗಳೆಲ್ಲ.

Securing a steady and sufficient supply of workmen trained in the work of construction of buildings ಎಂತ ಹೇಳಿದ್ದಾರೆ. ಇವರ ಹೌಸಿಂಗ್ ಬೊರ್ಡಿನಲ್ಲಿ ಇದುವರೆಗೂ ಇಂಥ ಎಷ್ಟು ಜನ ಸ್ಕಿಲ್ಡ್ ಲೇಬರನ್ನು ತಯಾರುಮಾಡಿದ್ದಾರೆ? ಇದನ್ನೆಲ್ಲಾ ನೋಡಿದರೆ ಇವರ ಸ್ಕೀಮಿಗೆ ದೇವರೇ ಗತಿ! ಈ ಹಿಂದೆ ಭೂಮಿ ಇಲ್ಲದವರಿಗೆ ಭೂಮಿ ಕೊಡುತ್ತೇವೆ, ಎಂತ ಹೇಳುತ್ತಿದ್ದರು. ಈಗ ಮನೆ ಇಲ್ಲದವರಿಗೆ ಮನೆ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಎಲ್ಲವೂ ಕುಹಕ. ಒಂದರಲ್ಲಿ ಆಂಜನೇಯ ದೇವರ ಮೂರ್ತಿ ಮುಕ್ಕಾದಂತೆ ಆಗಿದ್ದರೆ ಇನ್ನೊಂದರಲ್ಲಿ ತೀರ್ಥ ತೆಗೆದ-ಕೊಳ್ಳುವುದಕ್ಕೆ ಪೂಜಾರಿಯೇ ಇಲ್ಲ ಎಂತ ಹೇಳಿದಂತೆ ಇವೆ. ಇವರ ಈ ಯೋಜನೆಗಳು! ಇಂಥ ಬದುಕನ್ನೇಕೆ ಇವರು ಮಾಡುತ್ತಾರೆ? ಇವರಿಗೆ ಚೇಳು ಕಡಿದುದಕ್ಕೆ ಮದ್ದು ಹಾಕುವುದೇ ಗೊತ್ತಿಲ್ಲದಿರುವಾಗ ಹಾವುಕಚ್ಚಿದ್ದಕ್ಕೆ ಆದರಲ್ಲೂ ನಾಗರಹಾವು-ಹೆಬ್ಬಾವು-ಕೊಳಕ ಮಂಡಲ ಇಂಥ ಹಾವುಗಳು ಕಚ್ಚಿದ್ದಕ್ಕೆಲ್ಲ ಔಷಧಿ ಹಾಕುತ್ತೇವೆಂದು ಹೇಳುತ್ತಿದ್ದಾರಲ್ಲಾ ಇದೆಂಥಾ ಮಾತು!

ಶ್ರೀ ಡಿ. ದೇವರಾಜಅರಸ್.—ನಮ್ಮಲ್ಲಿ ಗರುಡ ರೇಖೆಯಿದೆ.

ಶ್ರೀ ಸಿ.ಜೆ. ಮುಕ್ಕಣ್ಣಪ್ಪ.—ಓಹೋ ಇರಬಹುದು' ಗರುಡನನ್ನು ನೋಡಿದರೆ ಹಾವು ಅಲ್ಲೇ ಸರಿದುಕೊಳ್ಳುತ್ತದೆ. ಅದರ ಹಾಗೇ ತಾವು ಸತ್ಯಹರಿಶ್ಚಂದ್ರರು. ತಾವು ಬರುತ್ತಿರುವುದನ್ನು ಅವರು ನೋಡಿದ ಕೂಡಲೇ ಅಲ್ಲೇ ಸುರುಳಿಕೊಂಡುಬಿಡುತ್ತಾರೇನೊ!

ಇನ್ನು ಕಾಂಪರ್ನೇಷನ್ ವಿಚಾರಕ್ಕೆ ಬಂದರೆ.—ಈ ಅಕ್ವಿಜಿಷನ್ ವಿಚಾರದಲ್ಲಿ ಆ ಲೋಕಲ್ ಬಾಡೀಸ್ ಗಳಿಗೇನು ಒಂದು ಪವರಿದೆಯೋ ಅದೇ ಸ್ಟೇಟಸ್ಸನ್ನು ಇದಕ್ಕೂ ಕೊಟ್ಟಿದಾರ್ರೆ. ಎಲ್ಲರಿಗೂ ಪಬ್ಲಿಕ್ ಪರ್ಪಸ್ ಎಂತಲೇ ಹೇಳಿದ್ದಾರೆ. ಆದರೆ ಮುಂದೆ ಇದೇನು ಗಂಭೀರ ಪರಿಸ್ಥಿತಿಗೆ ತಿರುಗುತ್ತದೋ ಕಾದುನೋಡಬೇಕಾಗಿದೆ.

Sri D. DEVARAJ URS.—I did say something about the acquisition of lands. That power which had been given to the Housing Board in the old Mysore Labour Housing Board Act, has been removed in the present Bill.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನು ಬೆಟರ್‌ಮೆಂಟ್ ಛಾರ್ಜಿನಲ್ಲಿ ಒಂದು ಮಾತು ಹೇಳಬೇಕಾಗಿದೆ. ಇದು ಸರ್ವಥಾನ್ಯಾಯವಾದುದಲ್ಲ. ಈ ವಿಚಾರದಲ್ಲಿ ಸರ್ಕಾರ ಏನೋನೂ ಪರಿಶೀಲಿನೆ ಮಾಡಿಲ್ಲವೆಂತ ಹೇಳಬೇಕಾಗಿದೆ. ಈಗಲೇ ಪೀನಲೈಸ್ ಮಾಡಲು ಹೊರಟಿದ್ದಾರೆ. ಕ್ಲಾಜ್ 34 ರಲ್ಲಿ ಪುಟ 642 ರಲ್ಲಿ-ಏನು ಬೆಟರ್‌ಮೆಂಟ್ ಛಾರ್ಜ್ ಹಾಕಬೇಕೆಂದಿದ್ದಾರೋ ಅದನ್ನು ಕಡ್ಡಾಯವಾಗಿ ತೆಗೆದುಹಾಕಬೇಕೆಂದು ಹೇಳುತ್ತೇನೆ. ನೀವು ಯಾವುದೇ ಒಂದು ಪ್ರದೇಶದಲ್ಲಿ ಒಂದು ಬೆಟರ್‌ಮೆಂಟ್ ಸ್ಕೀಮನ್ನು ಜಾರಿಗೆ ತಂದರೆ ಆದರ ಅಕ್ಕಪಕ್ಕದ ಪ್ರದೇಶಕ್ಕೆಲ್ಲ ಬೆಲೆ ಜಾಸ್ತಿ ಅಗುತ್ತದೆ ಎಂತ ಹೇಗೆ ಹೇಳುತ್ತೀರಿ? ಎಲ್ಲಿ ಇವರು ಸ್ಕೀಮನ್ನು ಮಾಡುತ್ತಾರೋ ಆ ಪ್ರದೇಶದಲ್ಲಿ ಬೆಲೆ ಏರಬಹುದು. ಅಷ್ಟೇ ಹೊರತು ಅಕ್ಕಪಕ್ಕದಲ್ಲಿರುವ ಜನರ ಆಸ್ತಿಗೆ ಹೇಗೆ ಬೆಲೆ ಜಾಸ್ತಿ ಆಗುತ್ತದೆ? ಆದ್ದರಿಂದ ಇದನ್ನು ಕೈಬಿಡಬೇಕೆಂದು ಹೇಳುತ್ತೇನೆ. ಮೊದಲು ಈ ಸ್ಕೀಂ ಜಾರಿಗೆ ಬರಲಿ—ಆನಂತರ ನಿಮ್ಮ ಅನುಭವದಲ್ಲಿ ಅಕ್ಕಪಕ್ಕದ ಜಮೀನುಗಳಿಗೂ ಬೆಲೆ ಜಾಸ್ತಿ ಅಗಿರುತ್ತೆಂದು ಕಂಡು ಬಂದರೆ ಆಗ ಸರ್ಕಾರದವರು ಒಂದು ಅಮೆಂಡ್‌ಮೆಂಟನ್ನು ತಂದು ಇದನ್ನು ಜಾರಿಗೆ ತರಬಹುದು. ಆದರೆ ಸಧ್ಯಕ್ಕೆ ಇದನ್ನು ಇವರು ಕೈಬಿಡುವುದೊಳ್ಳೆಯದು. ಈ ವಿಚಾರದಲ್ಲಿ ಅವರ ಪಕ್ಷ ನಮ್ಮ ಪಕ್ಷದ ಸದಸ್ಯರುಗಳೆಲ್ಲ ಅತೃಪ್ತಿಯಿಂದಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇದನ್ನು ಮತ್ತೊಮ್ಮೆ ಕೂಲಂಕುಶವಾಗಿ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈಗ ಮಾಡಿರತಕ್ಕ ಹೌಸಿಂಗ್ ಬೋರ್ಡ್ ಮತ್ತು ಹೌಸಿಂಗ್ ಕಾರ್ಪೊರೇಷನ್ ಎಂಬ ಎರಡು ಸಂಸ್ಥೆಗಳಿರುವುದು ಬೇಡ. ಈ ಹೌಸಿಂಗ್ ಕಾರ್ಪೊರೇಷನ್ನನ್ನು ಸರ್ಕಾರ ಡಿಸಾಲ್ವ್ ಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

2-30 P. M.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಮಾನ್ಯ ಅಧ್ಯಕ್ಷರೇ, 1962ನೇ ಇಸವಿಯ ಮೈಸೂರು ರಾಜ್ಯದ ಗೃಹ ನಿರ್ಮಾಣ ಮಂಡಲಿಯ ಕಾಯಿದೆಯನ್ನು ನಾನು ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಕಾಯಿದೆಯನ್ನು ತಂದಿರತಕ್ಕಂಥ ಕಾರ್ಮಿಕ, ವಸತಿ ಮತ್ತು ಸಾರಿಗೆ ಶಾಖೆಗಳ ಮಂತ್ರಿಗಳಾದ ಶ್ರೀಮಾನ್ ಡಿ. ದೇವರಾಜ್ ಅರಸ್ ಅವರು ಈ ಗೃಹ ನಿರ್ಮಾಣವನ್ನು ಚೆನ್ನಾಗಿ ಬೆಳೆಸಬೇಕು ಎನ್ನತಕ್ಕಂಥ ಧೋರಣೆಯನ್ನು ಉಳ್ಳವರಾಗಿದ್ದಾರೆ. ಈ ಸಂದರ್ಭದಲ್ಲಿ ಆಶಾಭಾವನೆಯಿಂದ ನಾನು ಕೆಲವು ಮುಖ್ಯವಾದ ವಿಷಯಗಳನ್ನು ಸರ್ಕಾರದ ಗಮನಕ್ಕೆ ಮಾನ್ಯ ಅಧ್ಯಕ್ಷರ ಮುಖಾಂತರ ತರಲು ಬಯಸುತ್ತೇನೆ. ಹೌಸಿಂಗ್ ಬೋರ್ಡ್ ಮತ್ತು ಹೌಸಿಂಗ್ ಕಾರ್ಪೊರೇಷನ್ ಎಂದು ಎರಡು ಸಂಸ್ಥೆಗಳು ನಮ್ಮ ಮೈಸೂರು ರಾಜ್ಯದಲ್ಲಿವೆ. ಇದರಲ್ಲಿ ಒಂದು ಕಡೆ ಹೌಸಿಂಗ್ ಬೋರ್ಡಿನವರು ಕಾರ್ಮಿಕರಿಗೆ ಮತ್ತು ಕೆಲವು ನೌಕರರಿಗೆ ಪಟ್ಟಣಗಳಲ್ಲಿ ಮನೆಗಳನ್ನು ಕಟ್ಟಿಸಿ ಒಂದು ರೇಟಿನಲ್ಲಿ ಕೊಡುತ್ತಿದ್ದಾರೆ. ಈ ಹೌಸಿಂಗ್ ಬೋರ್ಡ್ ಕಾರ್ಪೊರೇಷನ್ನಿನವರೂ ಕೂಡ ಮನೆಗಳನ್ನು ಕಟ್ಟುವುದಕ್ಕೆ ಸಾಲವನ್ನು ಕೊಡುತ್ತಿದ್ದಾರೆ. ಇದರಲ್ಲಿ ಒಂದೊಂದೂ ಯಾವರೀತಿ ಕೆಲಸ ಮಾಡುತ್ತಿವೆ ಎಂಬುದು ನಮಗೆ ಸ್ವಲ್ಪ ಅರ್ಥವಾಗುವುದಿಲ್ಲ. ಈ ವಿಷಯದಲ್ಲಿ ನಾನು ತಿಳಿದುಕೊಂಡಿರುವ ಪ್ರಕಾರ ಮತ್ತು ಈಗ ನನಗೆ ಬಂದಿರುವ ಅಂಕಿ ಅಂಶಗಳ ಪ್ರಕಾರ ಕೆಲವು ವಿಷಯಗಳನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. 1951ನೇ ಇಸವಿಯ ಕೆಲವು ಅಂಕಿ ಅಂಶಗಳನ್ನು ನಾನು ಈಗ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ 25,874 ಗ್ರಾಮಗಳಿವೆ, 288 ಪಟ್ಟಣಗಳು ಮಾತ್ರ ಇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಒಟ್ಟು 30 ಲಕ್ಷ 8 ಸಾವಿರದ 499 ಮನೆಗಳಿವೆ. ಪಟ್ಟಣಗಳಲ್ಲಿ ಒಟ್ಟು 6 ಲಕ್ಷ 95 ಸಾವಿರದ 606 ಮನೆಗಳಿವೆ. ಹೀಗೆ ಬಹು ಜನಸಂಖ್ಯೆಯಲ್ಲಿರತಕ್ಕ ಗ್ರಾಮಾಂತರ ಪ್ರದೇಶಗಳಿಗೆ ಹೌಸಿಂಗ್ ಬೋರ್ಡ್ ಮತ್ತು ಹೌಸಿಂಗ್ ಕಾರ್ಪೊರೇಷನ್ ಹುಟ್ಟಿದ ಮೇಲೆ ಇದುವರೆಗೆ ಎಷ್ಟು ಹಣವನ್ನು ಖರ್ಚುಮಾಡಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು ಮನೆಗಳನ್ನು ಕಟ್ಟಿಸಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಿಳಿಸುತ್ತಾರೆಂದು ನಾನು ನಂಬಿದ್ದೇನೆ. ಈ ಹೌಸಿಂಗ್ ಬೋರ್ಡ್ ಹುಟ್ಟಿದಾಗಿನಿಂದ ಇದುವರೆಗೆ ಬಹು ಸಂಖ್ಯೆಯಲ್ಲಿರತಕ್ಕ ಗ್ರಾಮಾಂತರ ಪ್ರದೇಶಗಳನ್ನು ಬಿಟ್ಟು ಬರೀ ಬೆಂಗಳೂರು ಒಂದಕ್ಕೆ 87 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದೆ. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಎಲ್ಲಾದರೂ ಮನೆಗಳನ್ನು ಕಟ್ಟಿರಲಿ, ಅವುಗಳನ್ನು ಯಾರು ಕಟ್ಟಿಸಿದ್ದಾರೆಂದು ಕೇಳಿದರೆ ಹೌಸಿಂಗ್ ಬೋರ್ಡಿನವರು ಕಟ್ಟಿಸಿದ್ದಾರೆಂದು ಹೇಳುತ್ತಾರೆ.

ಶ್ರೀ ದೇವರಾಜ್ ಅರಸ್.—ಮಾನ್ಯ ಸದಸ್ಯರು ಹೇಳತಕ್ಕದ್ದು ನನಗೆ ಸ್ವಲ್ಪ ಅರ್ಥವಾಗಲಿಲ್ಲ. ಹೌಸಿಂಗ್ ಬೋರ್ಡ್ ಆಕ್ಟಿವಿಟೀಸ್‌ಗಳು ಏನಿದ್ದರೂ ನಗರಗಳಲ್ಲಿ ಮಾತ್ರ ನಡೆಯುತ್ತಿವೆ. ಹೌಸಿಂಗ್ ಬೋರ್ಡಿನವರು ಗ್ರಾಮಾಂತರ ಪ್ರದೇಶಗಳಿಗೆ ನೇರವಾಗಿ ಯಾವ ದುಡ್ಡನ್ನೂ ಕೊಡುವುದಕ್ಕೆ ಹೋಗಿಲ್ಲ. ರೂರಲ್ ಹೌಸಿಂಗ್ ಸೆಲ್ಸ್ ಎಂದು ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿದೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಅಧಿಕಾರಿಗಳ ಮುಖೇನ ಮನೆಗಳನ್ನು ಕಟ್ಟಿಸತಕ್ಕದ್ದು ರೂರಲ್ ಹೌಸಿಂಗ್ ಸೆಲ್ಸ್. ಲೋ ಇನ್‌ಕಂಗ್ರೂಪ್ ಹೌಸಿಂಗ್ ಸ್ಕೀಮ್ ಮತ್ತು ಸಬ್ಸಿಡೈಸ್ಡ್ ಲೇಬರ್ ಹೌಸಿಂಗ್ ಸ್ಕೀಮ್ ಈ ಮೂರು ಸಂಸ್ಥೆಗಳ ಮುಖಾಂತರ ಒಂದು ಭಾಗದ ಹಣವನ್ನು ಹೌಸಿಂಗ್ ಬೋರ್ಡ್ ಖರ್ಚುಮಾಡುತ್ತದೆ. ಇನ್ನೊಂದು ಭಾಗದ ಹಣವನ್ನು ಹೌಸಿಂಗ್ ಕಾರ್ಪೊರೇಷನ್ ಖರ್ಚುಮಾಡುತ್ತದೆ. ಅವರು ನೇರವಾಗಿ ಯಾವ ಹಣವನ್ನೂ ಖರ್ಚುಮಾಡುತ್ತಿಲ್ಲ. ಈ ಹೌಸಿಂಗ್ ಕಾರ್ಪೊರೇಷನ್ನಿನವರು ಸಂಸ್ಥಾನಾಮಳಿ ಇರತಕ್ಕಂಥ ತಮ್ಮ ಪ್ರೈಮರಿ ಸೊಸೈಟಿಗಳು ಏನಿವೆಯೋ ಅವುಗಳ ಮುಖೇನ ಜನಗಳಿಗೆ ಮನೆಗಳನ್ನು ಕಟ್ಟಲು ಹಣವನ್ನು ಹಂಚುತ್ತಾರೆ. ಅದನ್ನು ಮಾನ್ಯ ಸದಸ್ಯರು ದಯವಿಟ್ಟು ಹೌಸಿಂಗ್ ಬೋರ್ಡ್ ಎಂದು ತಿಳಿದುಕೊಳ್ಳಬಾರದು. ಅದನ್ನು ಹೌಸಿಂಗ್ ಕಾರ್ಪೊರೇಷನ್ ಎಂದು ತಿಳಿದುಕೊಳ್ಳಬೇಕು.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಮಾನ್ಯ ಮಂತ್ರಿಗಳು ಹೌಸಿಂಗ್ ಬೋರ್ಡಿಗೂ ಮತ್ತು ಹೌಸಿಂಗ್ ಕಾರ್ಪೊರೇಷನ್ನಿಗೂ ಇರುವ ವ್ಯತ್ಯಾಸವನ್ನು ತಿಳಿಸಿದ್ದಕ್ಕೆ ಬಹಳ ಸಂತೋಷ. ಈ ಹೌಸಿಂಗ್ ಕಾರ್ಪೊರೇಷನ್ನಿನವರು ಇದುವರೆಗೆ ದೇಶಾದ್ಯಂತ ಕೊಟ್ಟಿರತಕ್ಕಂಥಾದ್ದನ್ನು ಈ ಮಾನ್ಯ ಸಭೆಯ ಗಮನಕ್ಕೆ ನಾನು ತರಲಿಚ್ಛಿಸುತ್ತೇನೆ. ಅದು ಈ ರೀತಿ ಇದೆ. ಬೆಂಗಳೂರು ಸಿಟಿಗೆ $84\frac{1}{2}$ ಲಕ್ಷ ರೂಪಾಯಿಗಳು, ಬೆಂಗಳೂರು ಡಿಸ್ಟ್ರಿಕ್ಟಿಗೆ $2\frac{1}{2}$ ಲಕ್ಷ ರೂಪಾಯಿಗಳು, ತುಮಕೂರು ಡಿಸ್ಟ್ರಿಕ್ಟಿಗೆ 4 ಲಕ್ಷ ರೂಪಾಯಿಗಳು, ಕೋಲಾರ ಡಿಸ್ಟ್ರಿಕ್ಟಿಗೆ 5 ಲಕ್ಷ ರೂಪಾಯಿಗಳು, ಚಿತ್ರದುರ್ಗ ಡಿಸ್ಟ್ರಿಕ್ಟಿಗೆ 24 ಲಕ್ಷ ರೂಪಾಯಿಗಳು, ಮೈಸೂರು ಡಿಸ್ಟ್ರಿಕ್ಟಿಗೆ 3 ಲಕ್ಷ ರೂಪಾಯಿಗಳು, ಚಿಕ್ಕಮಗಳೂರು ಡಿಸ್ಟ್ರಿಕ್ಟಿಗೆ $6\frac{1}{2}$ ಲಕ್ಷ ರೂಪಾಯಿಗಳು, ಹಾಸನ ಡಿಸ್ಟ್ರಿಕ್ಟಿಗೆ $3\frac{1}{4}$ ಲಕ್ಷ ರೂಪಾಯಿಗಳು, ಶಿವಮೊಗ್ಗ ಡಿಸ್ಟ್ರಿಕ್ಟಿಗೆ $6\frac{1}{2}$ ಲಕ್ಷ ರೂಪಾಯಿಗಳು, ಮಂಡ್ಯಾ ಡಿಸ್ಟ್ರಿಕ್ಟಿಗೆ 16 ಸಾವಿರ ರೂಪಾಯಿಗಳು, ಬಳ್ಳಾರಿ ಡಿಸ್ಟ್ರಿಕ್ಟಿಗೆ 34 ಸಾವಿರ ರೂಪಾಯಿಗಳು, ಕೂರ್ಗಿಗೆ $1\frac{3}{4}$ ಲಕ್ಷ ರೂಪಾಯಿಗಳು, ಸೌತ್ ಕೆನರಾಕ್ಕೆ $3\frac{1}{2}$ ಲಕ್ಷ ರೂಪಾಯಿಗಳು, ಬಿಜಾಪುರಕ್ಕೆ 4 ಲಕ್ಷ ರೂಪಾಯಿಗಳು, ಧಾರವಾಡಕ್ಕೆ 3 ಲಕ್ಷ ರೂಪಾಯಿಗಳು, ರಾಯಚೂರಿಗೆ 78 ಸಾವಿರ ರೂಪಾಯಿಗಳು, ನಾರ್ತ್ ಕೆನರಾಕ್ಕೆ 50 ಸಾವಿರ ರೂಪಾಯಿಗಳು, ಗುಲ್ಬರ್ಗಾಕ್ಕೆ 13 ಸಾವಿರ ರೂಪಾಯಿಗಳು, ಬೀದರ್‌ಗೆ $1\frac{1}{2}$ ಲಕ್ಷ ರೂಪಾಯಿಗಳು, ಬೆಳಗಾಮಿಗೆ 6 ಸಾವಿರ ರೂಪಾಯಿಗಳು ಹೀಗೆ ಹಂಚಿದ್ದಾರೆ.

ಮನೆಗಳನ್ನು ಕಟ್ಟುವುದಕ್ಕೋಸ್ಕರ ಬರೀ ಬೆಂಗಳೂರು ಸಿಟಿ ಒಂದಕ್ಕೆ 84½ ಲಕ್ಷ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ. ಸುಮಾರು 70 ಲಕ್ಷ ರೂಪಾಯಿಗಳನ್ನು ಉಳಿದ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗೂ ಖರ್ಚು ಮಾಡಿದ್ದಾರೆ. ಹೌಸಿಂಗ್ ಕಾರ್ಪೋರೇಷನ್ನಿನವರು ಸೊಸೈಟಿಗಳ ಮುಖಾಂತರ ಎಷ್ಟರ ಮಟ್ಟಿಗೆ ಹಣವನ್ನು ಒದಗಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಸಿದ್ದಾರೆ ಎನ್ನುವುದನ್ನು ನೋಡಿದರೆ ತುಂಬಾ ವ್ಯಸನವಾಗುತ್ತದೆ. ಈ ಹೌಸಿಂಗ್ ಕಾರ್ಪೋರೇಷನ್ನಿನವರು ಗ್ರಾಮಾಂತರ ಪ್ರದೇಶಗಳಿಗೆ ಎಷ್ಟರ ಮಟ್ಟಿಗೆ ಹಣವನ್ನು ಖರ್ಚು ಮಾಡಿ ಜನಗಳಿಗೆ ಮನೆಗಳನ್ನು ಕಟ್ಟಿಸಿಕೊಡಬೇಕಾಗಿತ್ತೋ ಅಷ್ಟರ ಮಟ್ಟಿಗೆ ಹಣವನ್ನು ಖರ್ಚು ಮಾಡಿಲ್ಲ. ಮನೆಗಳನ್ನು ಕಟ್ಟಿಸಿಲ್ಲ. ಇದರ ಬಗ್ಗೆ ನಾನು ಟೀಕಿಸುತ್ತೇನೆ. ಮತ್ತು ವಿರೋಧ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಹೌಸಿಂಗ್ ಬೋರ್ಡ್ ಮತ್ತು ಹೌಸಿಂಗ್ ಕಾರ್ಪೋರೇಷನ್ ಎಂದು ಎರಡು ಸಂಸ್ಥೆಗಳು ಇರಕೂಡದು ಎಂದು ನಾನು ತಿಳಿಸುತ್ತೇನೆ. ನೇರವಾದ ಒಂದೇ ಏಜನ್ಸಿ ಇರಬೇಕು. ಇಡೀ ರಾಜ್ಯದಲ್ಲಿ ಅನೇಕ ಕಡೆ ಗ್ರಾಮಾಂತರ ಪ್ರದೇಶಗಳಲ್ಲಿ ಜನಗಳು ಮನೆಗಳಿಲ್ಲದೆ ಮರದ ಕೆಳಗಡೆ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದಾರೆ. ನ್ಯಾಯವಾಗಿ ಅಂಥಾ ಕಷ್ಟಪರಿಸ್ಥಿತಿಯಲ್ಲಿರತಕ್ಕವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮನೆಗಳನ್ನು ಕಟ್ಟಿಸಿಕೊಡಬೇಕು. ಜಾಸ್ತಿ ಜನಸಂಖ್ಯೆ ಇರತಕ್ಕ ಗ್ರಾಮಾಂತರ ಪ್ರದೇಶಗಳನ್ನು ಬಿಟ್ಟು ಬೆಂಗಳೂರಿನಲ್ಲಿರತಕ್ಕ ದೊಡ್ಡ ಹೋಟೇಲಿನ ಮಾಲೀಕರಿಗೆ, ಶ್ರೀಮಂತರಿಗೆ, ವ್ಯಾಪಾರಸ್ಥರಿಗೆ ಹೆಚ್ಚು ಹಣವನ್ನು ಕೊಟ್ಟಿರುವುದನ್ನು ನೋಡಿದರೆ ತುಂಬ ವ್ಯಸನವಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಎರಡು ಏಜನ್ಸಿಗಳು ಬೇಡ ಒಂದೇ ಏಜನ್ಸಿ ಇರಬೇಕೆಂದರೆ ಚುನಾವಣೆಯಲ್ಲಿ ಸೋತ ಇಬ್ಬರನ್ನು ಅಧ್ಯಕ್ಷರನ್ನಾಗಿ ಮಾಡುವುದು ಹೇಗೆ ? (ನಗು)

ಶ್ರೀ ಟಿ. ಡಿ. ದೇವೇಂದ್ರಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನಗಳ ಕಷ್ಟ ಎಲ್ಲರಿಗೂ ಗೊತ್ತಿದೆ. ಅದೂ ಅಲ್ಲದೆ ನಮ್ಮ ಕಾರ್ಮಿಕ ಮಂತ್ರಿಗಳಾದ ಶ್ರೀ ದೇವರಾಜಅರಸ್ ಅವರಿಗೆ ಹಳ್ಳಿಗಾಡಿನ ವಿಷಯ ಚೆನ್ನಾಗಿ ಗೊತ್ತಿದೆ. ಮುಖ್ಯವಾಗಿ ಮನುಷ್ಯನಿಗೆ ಬೇಕಾಗಿರತಕ್ಕದ್ದು ಅನ್ನ, ಬಟ್ಟೆ ಮತ್ತು ಎರಡು ಅಂಕಣದ ಮನೆ. ಇದು ಅವಶ್ಯಕವಾಗಿ ಮನುಷ್ಯನಿಗೆ ಬೇಕೇಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಇವೊತ್ತಿನ ಪರಿಸ್ಥಿತಿ ಹೇಗಿದೆ ಎನ್ನತಕ್ಕಂಥಾದ್ದನ್ನೂ ಮಾನ್ಯ ಮಂತ್ರಿಗಳೂ ಕೂಡ ಚೆನ್ನಾಗಿ ಮನಗಂಡಿದ್ದಾರೆ.

ಹೀಗಿರತಕ್ಕ ಸಂದರ್ಭದಲ್ಲಿ ಹೌಸಿಂಗ್ ಕಾರ್ಪೋರೇಷನನ್ನು ವಜಾ ಮಾಡಿ ಮೈಸೂರು ಜ್ಯರಾಕ್ಕೆಲ್ಲಾ ಹೌಸಿಂಗ್ ಬೋರ್ಡ್ ಏಜನ್ಸಿ ಒಂದೇ ಒಂದು ಇಟ್ಟು, ಜಿಲ್ಲೆಗೆ ಒಂದರಂತೆ ಅದರ ಡಿವಿಜನ್‌ಗಳನ್ನು ಸ್ಥಾಪನೆ ಮಾಡಿ ಆ ಮುಖಾಂತರ ಗ್ರಾಮಾಂತರ ಪ್ರದೇಶದಲ್ಲಿ ಮನೆಕಟ್ಟತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ತಿಳಿಸುತ್ತೇನೆ. ಈಗಾಗಲೇ ಕೆಲಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ತಾವು ಜಮೀನುಗಳನ್ನು ಆಕ್ವೈರ್ ಮಾಡಿಕೊಂಡು ಅಲ್ಲಿ ಸಣ್ಣಸಣ್ಣ ಕಾಲೋನಿಗಳನ್ನು ಕಟ್ಟಿಸಿಕೊಡಬೇಕೆಂಬ ಯೋಜನೆಯನ್ನು ಹಾಕಿಕೊಂಡಿದ್ದೀರಿ. ಬಹಳ ಸಂತೋಷ. ಹಾಗೆಯೇ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 2000, 3000 ರೂಪಾಯಿಗಳ ಒಳಗೆ ಆಗತಕ್ಕ ಬಡವರಿಗೆ ಬೇಕಾಗಿರತಕ್ಕ ಸಣ್ಣಸಣ್ಣ ಮನೆಗಳನ್ನು ಕಟ್ಟಿಸಿ ಸುಮಾರು 20 ವರ್ಷಗಳಲ್ಲಿ ತೀರಿಸಲು ಅನುಕೂಲವಾಗುವಂತೆ ಕಂತುಗಳಲ್ಲಿ ಹಣ ವಾಪಸು ಪಡೆಯುವ ಅನುಕೂಲ ಮಾಡಿಕೊಟ್ಟದ್ದೇ ಆದರೆ ಮೂರನೆಯ ಪಂಚವಾರ್ಷಿಕ ಯೊಜನೆ ಮುಗಿಯುವುದರೊಳಗೆ ಎಲ್ಲರಿಗೂ ಮನೆಗಳನ್ನು ಒದಗಿಸಬಹುದು ಎಂಬ ಆಶಯವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಏಕೆಂದರೆ ಇವತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರು ಅಲ್ಪ ಸ್ವಲ್ಪ ಆಹಾರ ಧಾನ್ಯಗಳನ್ನು ಬೆಳೆದುಕೊಂಡು ಡಿಸೆಂಬರ್, ಜನವರಿಯಲ್ಲಿ ಅದನ್ನು ಮನೆಗೆ ತೆಗೆದುಕೊಂಡು ಬಂದು ಹಾಕಿಕೊಂಡಿರುತ್ತಾರೆ. ಫೆಬ್ರವರಿ, ಮಾರ್ಚಿ, ಏಪ್ರಿಲ್ ಬಿಸಿಲುಕಾಲದಲ್ಲಿ ಅಕಸ್ಮಾತ್ತಾಗಿ ಅವರು ಸಾಮಾನು ಶೇಖರಣೆ ಮಾಡಿರತಕ್ಕ ಪ್ರದೇಶಕ್ಕೆ ಬೆಂಕಿ ಬಿದ್ದರೆ ಇರತಕ್ಕ ಕಾಳು, ಕಡ್ಡಿ ಎಲ್ಲಾ ಸುಟ್ಟು ಹೋಗಿ ನಿರ್ಗತಿಕರಾಗಿರತಕ್ಕ ಅನೇಕ ನಿದರ್ಶನಗಳಿವೆ. ಅದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ನಾನು ಆಗಲೇ ಹೇಳಿದಂತೆ ಹೌಸಿಂಗ್ ಕಾರ್ಪೋರೇಷನನ್ನು ವಜಾ ಮಾಡಿ, ಮೈಸೂರು ರಾಜ್ಯಕ್ಕೆಲ್ಲಾ ಒಂದೇ ಒಂದು ಹೌಸಿಂಗ್ ಬೋರ್ಡ್ ಸ್ಥಾಪನೆ ಮಾಡಿ ಆ ಮೂಲಕ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಸೂಚಿಸುತ್ತೇನೆ.

ಭದ್ರಾವತಿ ತಾಲ್ಲೂಕಿನ ವಿಷಯ ಹೇಳಬೇಕಾಗಿದೆ. ಕಳೆದ ಎರಡು ವರ್ಷಗಳಿಂದ ನಮ್ಮಲ್ಲಿ ಮನೆಕಟ್ಟಲು ಒಂದು ಸೊಸೈಟಿಯನ್ನು ಸ್ಥಾಪನೆ ಮಾಡಿ ಅದರ ಮೂಲಕ ಗ್ರಾಮಾಂತರ ಪ್ರದೇಶದಲ್ಲಿ ಮನೆ ಕಟ್ಟುವ ವ್ಯವಸ್ಥೆ ಮಾಡಿದ್ದೇವೆ. ನಮ್ಮಲ್ಲಿ ಭದ್ರಾ ಆಣೆಕಟ್ಟು ಚಾನಲ್ಲು ಬಂದು, ಗ್ರಾಮಗಳು ಮರ್ಗಾವಣೆ ಆಗತಕ್ಕ ಸಂದರ್ಭವಿರುವುದರಿಂದ ಎಷ್ಟೋ ರೆಕಾರ್ಡ್ ಮಾಡಿ ಕಳುಹಿಸಿದರೂ ಕೂಡ ನಮಗೆ ಬೇಕಾದ ಹಣ ಮಂಜೂರಾಗುತ್ತಾ ಇಲ್ಲ. ಕಾರ್ಪೋರೇಷನವರು ಹಣ ಕೊಡಬೇಕಾದರೆ ಏನಿದ್ದರೂ ದೊಡ್ಡ ದೊಡ್ಡ ಬಂಡವಾಳ ಇರತಕ್ಕ ವ್ಯಾಪರಸ್ತರುಗಳಿಗೆ ಟೌನ್‌ನಲ್ಲಿರತಕ್ಕವರಿಗೆ ಕೊಡುತ್ತಾ ಇದ್ದಾರೆ. ಇದನ್ನು ತಾವು ತಕ್ಷಣ ವಿಚಾರ ಮಾಡಬೇಕು. ಅಲ್ಲಿ ಏನು ಲೋಪದೋಶವಿದೆ ಅದನ್ನು ಕಂಡು ಹಿಡಿಯಬೇಕು. ಮೈಸೂರು ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ 14-15 ಸೊಸೈಟಿಗಳನ್ನು ಮಾತ್ರ ಮಾಡಿಕೊಂಡಿದ್ದಾರೆ ಎಂದು ಕೇಳಿದ್ದೇನೆ. ಅವುಗಳನ್ನು ಮುಂದುವರಿಸಲು ತಕ್ಕ ವ್ಯವಸ್ಥೆ ಮಾಡಬೇಕು.

ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಸುಮಾರು 9,000 ಜನ ಕೂಲಿಗಾರರು ಇದ್ದಾರೆ. ಅವರಿಗೆ ಇದುವರೆಗೂ ಕಟ್ಟಿರುವುದು 3,200 ಮನೆಗಳು. ಇನ್ನುಳಿದ ಕಾರ್ಮಿಕರಿಗೆ ವಸತಿ ಇಲ್ಲ. ಸಣ್ಣ ಸಣ್ಣ ಗುಡಿಸಲು ಹಾಕಿಕೊಂಡು, ಕೊಳಕು ಪ್ರದೇಶದಲ್ಲಿ ವಾಸ

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಮಾಡುತ್ತಾ ಇದ್ದಾರೆ. ಕೂಡಲೇ ಅವರಿಗೂ ಕೂಡ ವಸತಿ ಸೌಕರ್ಯ ಮಾಡಿಕೊಡಲು ಒಂದು ಯೋಜನೆಯನ್ನು ಹಾಕಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೀಗೆಯೇ ಪೇಪರ್ ಮಿಲ್‌ನಲ್ಲೂ ಕೂಡ 3,000 ಜನ ಕಾರ್ಮಿಕರು ಇದ್ದಾರೆ. 2,000 ಮನೆಗಳನ್ನು ಹೌಸ್‌ಬಿಲ್ಡಿಂಗ್ ಸೊಸೈಟಿಯವರು ಕಟ್ಟಿಸಿದ್ದಾರೆ. ಉಳಿದ ಸಾವಿರ ಜನ ಕಾರ್ಮಿಕರಿಗೆ ಮನೆ ಇಲ್ಲ. ಅವರಿಗೂ ಮನೆಗಳನ್ನು ಕಟ್ಟಿಸಿಕೊಡಲು ಪ್ರಯತ್ನ ಮಾಡಬೇಕು. ಬಹಳ ಬೇಗ ಭದ್ರಾವತಿ ಬೆಳೆಯುತ್ತಾ ಇದೆ. ಕಾರ್ಮಿಕರ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಬಹಳ ಬದಲಾವಣೆಗಳಾಗುತ್ತಾ ಇರುವುದರಿಂದ ಅಲ್ಲಿ ಹೆಚ್ಚು ಮನೆಗಳನ್ನು ಕಟ್ಟತಕ್ಕ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡುತ್ತಾರೆ ಎಂದು ನಂಬಿ ಭದ್ರಾವತಿ ಸೊಸೈಟಿಗೆ ತಕ್ಷಣ ಹಣ ಸಿಕ್ಕುವಂತೆ ವ್ಯವಸೆ ಮಾಡಬೇಕೆಂದು ಹೇಳುತ್ತೇನೆ. ಮತ್ತು ಕೆಲವು ಕಡೆ ಗ್ರಾಮಗಳ ವರ್ಗಾವಣೆ ಆಗತಕ್ಕ ಸಂದರ್ಭವಿರುವುದರಿಂದ ಅವರ ಕಷ್ಟವನ್ನು ಕೂಡ ತಾವು ಗಮನಿಸಿ ತಮ್ಮ ಕಾಲಾವಧಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಮನೆಗಳನ್ನು ಕಟ್ಟಿಸಿಕೊಟ್ಟು ಒಳ್ಳೆಯ ಕೀರ್ತಿ ಪಡೆಯುತ್ತೀರಿ ಎಂದು ಭಾವಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಗೋಪಾಲ ಸಾಲನ್ನ (ಮೂಡಬಿದಿರಿ).—ಸ್ವಾಮಿ, ಅಧ್ಯಕ್ಷರೇ, ಈ ಮನೆ ಒದಗಿಸುವಂಥ ಒಂದು ಯೋಜನೆ ರಾಜ್ಯದಲ್ಲಿ ಬಹಳ ತೀವ್ರ ಮತ್ತು ಅವಶ್ಯವಾಗಿ ಆಗಬೇಕಾದ ವಿಷಯ ಎಂಬುದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಹಲವು ವರ್ಷಗಳಿಂದ ಈ ಯೋಜನೆ ಜಾರಿಯಲ್ಲಿದ್ದರೂ ಕೂಡ ಸಾಮಾನ್ಯ ಜನರಿಗೆ ನ್ಯಾಯವಾದ ರೀತಿಯಲ್ಲಿ ಆಯಾಯ ಜಿಲ್ಲೆಗಳಿಗೆ ಆಗಬೇಕಾದ ವಸತಿ ಸೌಕರ್ಯ ಆಗುತ್ತೆ ಎಂಬ ವಿಷಯದಲ್ಲಿ ಮಿತ್ರರಾದ ಶ್ರೀಮಾನ್ ದುಗ್ಗಪ್ಪನವರು ಅಂಕಿ ಅಂಶಗಳನ್ನು ಕೊಟ್ಟು ತೋರಿಸಿ ಕೊಟ್ಟಿದ್ದಾರೆ. ಈ ರೀತಿಯಲ್ಲಿ ಅನ್ಯಾಯ ರಾಜ್ಯದಲ್ಲಿ ನಡೆಯಬಾರದು. ಬೇಕಾದ ಸುಖವನ್ನು ಕಲ್ಪನೆ ಮಾಡುವ ನೀತಿ ಏನಿದೆ ಇದಕ್ಕೆ ಯಾವ ರೀತಿಯಲ್ಲಿ ಹಣವನ್ನು ಒದಗಿಸಬೇಕೆಂಬ ವಿಷಯದಲ್ಲಿ ಒಂದು ರೀತಿ ನೀತಿ ಅನುಸರಿಸಿ ಕೆಲಸ ಮಾಡಬೇಕಾದ್ದು ಅತ್ಯಗತ್ಯ. ಆಯಾಯ ಜಿಲ್ಲೆಯ ಜನಸಂಖ್ಯೆಯ ಆಧಾರದ ಮೇಲೆಯೇ ಅಥವಾ ಇನ್ನಾವುದು ಪ್ರಾಮುಖ್ಯವೋ ಅದನ್ನು ನೋಡಿ ಜಿಲ್ಲಾ ಮಟ್ಟದಲ್ಲಿ ದೇಶಕ್ಕೆ ಕೊಟ್ಟಂಥ ಹಣ ಸರಿಯಾದ ರೀತಿಯಲ್ಲಿ ವಿನಿಮಯವಾಗಬೇಕು. ಎಲ್ಲ ಜನರಿಗೂ ಸೌಕರ್ಯ ಸಿಕ್ಕುವಂತಾಗಬೇಕು ಎಂಬ ತತ್ವವೂ ಕೂಡ ಈ ಕಾಯಿದೆಯಲ್ಲಿ ಅಡಕಮಾಡುವುದು ಅತ್ಯಗತ್ಯ. ಮತ್ತು ಬೇರೆ ಬೇರೆ ಸಂಸ್ಥೆಗಳ ಮೂಲಕ ಹಣ ಒದಗಿಸುವಂಥ ಒಂದು ವ್ಯವಸ್ಥೆ ಈಗಾಗಲೇ ಇದೆ. ಅದು ಒಂದೇ ಕಡೆಯಲ್ಲ. ಹೌಸಿಂಗ್ ಕಾರ್ಪೊರೇಷನ್, ಅದರ ಕೈಕೆಳಗೆ ಇರುವಂಥ ಪ್ರಥಮ ಪ್ರೈಮರಿ ಸೊಸೈಟಿಗಳು ಮತ್ತು ಸ್ಥಳೀಯ ಸಂಸ್ಥೆಗಳು ಹೀಗೆ ಬೇರೆ ಬೇರೆ ಸಂಸ್ಥೆಗಳ ಮೂಲಕವಾಗಿ ಹಣವನ್ನು ಒದಗಿಸುತ್ತಾ ಇದೆ. ಒಂದು ಕಡೆ ಸಿಬ್ಬಂದಿ ಬೇಕಾಗುತ್ತದೆ. ಅದಕ್ಕೆ ಕೊಡುವ ಹಣ ಮತ್ತೊಂದು ಕಡೆ ಅವರಿಗೆ ಕೊಡತಕ್ಕ ಭತ್ಯ ಇದಕ್ಕೆಲ್ಲಾ ಅಪಾರ ಹಣ ವ್ಯಯವಾಗುತ್ತಾ ಇದೆ. ಇದನ್ನೆಲ್ಲಾ ಕೇಂದ್ರೀಕೃತ ಮಾಡಿ ಒಂದೇ ಸಂಸ್ಥೆಯಲ್ಲಿ ಈ ಕಾರ್ಯ ಆಗುವಂತೆ ಮಾಡಿದರೆ, ಈ ಯೋಜನೆಯ ಉದ್ದೇಶ ಸಾರ್ಥಕವಾಗಲಿ ಎಂದು ನಾನು ಸರ್ಕಾರದವರಿಗೆ ತಿಳಿಸಬಯಸುತ್ತೇನೆ. ಇದರ ಕಡೆಗೆ ಹೆಚ್ಚು ಗಮನಕೊಡಬೇಕು. ಸಹಕಾರ ತತ್ವದ ರೀತಿಯಲ್ಲಿ ಹೌಸಿಂಗ್ ಕಾರ್ಪೊರೇಷನ್ ಮುಂದುವರಿಯಬೇಕು ಇಲ್ಲದೇ ಹೋದರೆ ಕಾಯಿದೆಯಲ್ಲಿರುವಂತೆ ಹೌಸಿಂಗ್ ಬೋರ್ಡು ಮುಂದುವರಿಯಬೇಕು. ಎರಡು ಸಂಸ್ಥೆಗಳಿಂದಲೂ ಸೌಕರ್ಯ ಪಡೆಯಲು ಜನರಿಗೆ ಕಷ್ಟವಾಗಿದೆ. ಈಗ ನಮ್ಮ ರಾಜ್ಯದಲ್ಲಿ ಎಷ್ಟೋ ಬೋರ್ಡುಗಳು ಇವೆ. ಮೈನಿಂಗ್ ಬೋರ್ಡು, ಕಾಯರ್ ಬೋರ್ಡ್, ಕಾಫಿ ಬೋರ್ಡ್ ಅಂತ ಹೇಳಿ ಏನೇನೋ ಬೋರ್ಡುಗಳು ಇವೆ. ಇವುಗಳ ಅಂಕಿ ಅಂಶ ತಿಳಿದುಕೊಳ್ಳುವುದು ಕಷ್ಟವಾಗಿದೆ. ಇದರಲ್ಲಿರುವಂತೆ ಅಧ್ಯಕ್ಷರು, ಕಾರ್ಯದರ್ಶಿ ಇವರ ಸಂಖ್ಯೆ ಏನು ಎಂಬುದನ್ನು ನೋಡಿದರೆ ನಮ್ಮಂಥವರು ಅವರ ಹೆಸರು ತಿಳಿದುಕೊಳ್ಳುವುದಕ್ಕೆ ಅವರ ಕಾರ್ಯಭಾರ ಏನು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಕಷ್ಟವಾಗಿದೆ. ಆದ್ದರಿಂದ ಸಾಮಾನ್ಯ ಜನರಿಗೆ ಇದನ್ನು ತಿಳಿಸಲಿಕ್ಕೆ ಒಂದು ಪ್ರಚಾರ ಇಲಾಖೆಯನ್ನೇ ಪ್ರತ್ಯೇಕವಾಗಿ ತೆಗೆಯುವುದು ಒಳ್ಳೆಯದು ಎಂದು ಕಾಣುತ್ತದೆ. ಏಕೆಂದರೆ ಇದೊಂದು ನಮೂನೆ ಬ್ಲಾಕ್ ಬೋರ್ಡ್ ಆಗಿದೆ. ಇದರ ಸಹಾಯ ಜನರಿಗೆ ಸರಿಯಾಗಿ ಸಿಕ್ಕುವುದಿಲ್ಲ, ಇದರಿಂದ ಹೆಚ್ಚು ಉಪಯೋಗವಾಗುವುದಿಲ್ಲ ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ಇಂಥ ಒಂದು ಬೋರ್ಡ್ ಇದೇ ರೀತಿ ಮುಂದುವರಿಯುವುದಾದರೆ ಇದನ್ನು ರಚಿಸದಿರುವುದೇ ಉತ್ತಮ. ಈಗಿರುವ ತಾಲ್ಲೂಕು ಬೋರ್ಡ್ ಮತ್ತು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ಗಳಿಗೆ ಈ ಹಣ ಕೊಡುವುದು ಉತ್ತಮ. ಅಲ್ಲಿ ಬೇಕಾದ ಸಿಬ್ಬಂದಿಯಿದೆ. ಬೇಕಾದ ಇಂಜನಿಯರಿದ್ದಾರೆ. ಹಾಗೆ ಮಾಡಿದರೆ ಕೊಡುವ ಹಣ ನೇರವಾಗಿ ಜನರಿಗೆ ದೊರೆತು ಮನೆ ಕಟ್ಟಲು ಅವಕಾಶವಾಗುತ್ತದೆ. ಆದುದರಿಂದ ಈ ಕಡೆ ಹೆಚ್ಚು ಗಮನಕೊಡಬೇಕಾಗಿದೆ.

ಇನ್ನು ಈ ಬಿಲ್ಲಿನಲ್ಲಿರುವ ಅನೇಕ ಕಲಮುಗಳನ್ನು ಪರಿಶೀಲಿಸಿದರೆ ಜನರು ಈ ಹೌಸಿಂಗ್ ಬೋರ್ಡ್ ಕಾಯಿದೆ ಉಲ್ಲಂಘಿಸಿದರೆ 500 ರೂಪಾಯಿಗಳ ಜುಲ್ಮಾನೆ ವಿಧಿಸಲು ಅವಕಾಶವಿದೆ. ಅದೇ ಅಧಿಕಾರದಲ್ಲಿರುವವರು ಏನಾದರೂ ಮಾಡಿದರೆ ಅವರಿಗೆ ಶಿಕ್ಷೆಯೇನೆಂಬುದು ನಮೂದಾಗಿಲ್ಲ. ಅಧ್ಯಕ್ಷರು ಮತ್ತು ಸರ್ಕಾರದವರು ಕೂಡಿ ಪರಸ್ಪರ ಅನುಕೂಲವಾಗುವ ರೀತಿಯಲ್ಲಿ ಇದಕ್ಕೆ ರೂಲ್ಸ್ ಮಾಡುವುದಾಗಿ ನಮೂದಾಗಿದೆ.

ಇನ್ನು 55ನೆಯ ಸೆಕ್ಷನ್‌ನಲ್ಲಿ ಇದು 12 ಜನ ಸದಸ್ಯರುಳ್ಳ ಬೋರ್ಡು ಎಂದಿದೆ. ಅವರನ್ನು ನೇಮಕ ಮಾಡುವ ರೀತಿ ನೀತಿಯೇನು, ಅವರಿಗೆ ಹೇಗೆ ಪ್ರಾತಿನಿಧ್ಯ ಕೊಡಲಾಗುವುದು ಎಂಬ ವಿಚಾರ ತಿಳಿಸಿಲ್ಲ. ಈಗ ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಕಾಯಿರ್ ಬೋರ್ಡ್, ಪೋರ್ಟ್ ಟ್ರಸ್ಟ್, ಖಾದಿ ಬೋರ್ಡ್ ಮುಂತಾದ ಸಂಸ್ಥೆಗಳೇನಿವೆ ಅಲ್ಲಿ

ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ನವರ ಹಿತ ರಕ್ಷಣೆ ಮಾಡಲು ಏನು ವ್ಯವಸ್ಥೆ ಮಾಡಿದೆ? ಈ ಮಸೂದೆಯಲ್ಲೂ ಆ ವಿಚಾರ ಹೇಳಿಲ್ಲ. ಎಷ್ಟು ಬೋರ್ಡುಗಳಿವೆಯೋ ಅವುಗಳಲ್ಲೆಲ್ಲಾ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ನವರಿಗೆ ಗಮನಾರ್ಹವಾದ ಪ್ರಾತಿನಿಧ್ಯ ಕೊಡಬೇಕೆಂದು ಹೇಳುತ್ತೇನೆ. ಚುನಾವಣೆ ನಡೆಯುವ ಸಂಬಂಧದಲ್ಲಿ ಕಾನೂನಿನಲ್ಲಿ ಅವಕಾಶ ಕೊಟ್ಟಿದ್ದರಿಂದ ಕೆಲವು ಸಭೆಗಳಲ್ಲಿ ಪ್ರಾತಿನಿಧ್ಯ ವಿದೆ. ಇಂಥ ಸಂಸ್ಥೆಗಳಲ್ಲಿ ಆ ಪ್ರಾತಿನಿಧ್ಯ ಕೊಡಬೇಕು. ಅಲ್ಪ ಸಂಖ್ಯಾತರಿಗೆ ಪ್ರಾತಿನಿಧ್ಯ ಕೊಡಲು ಅವಕಾಶ ಕಲ್ಪನೆ ಮಾಡಬೇಕಾಗಿತ್ತು, ಮಾಡಿಲ್ಲ. ಈಗಲಾದರೂ ಬೇಕಾದ ಪ್ರಾತಿನಿಧ್ಯ ಒದಗಿಸಲು ಅಗತ್ಯವಾದ ಕ್ರಮ ಕೈಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಅಲ್ಲದೆ ಸಾಧಾರಣವಾಗಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಮಲೆನಾಡಿಗೆ ಸೇರಿವೆ. ಅಲ್ಲಿ ಬಹಳ ಕಾಡಿದೆ. ಅಲ್ಲಿ ಗಾಳಿ ಮಳೆ ಸಹಿಸಲು ಯೋಗ್ಯವಾದ ಮನೆಗಳನ್ನು ಕಟ್ಟಬೇಕಾದರೆ ಪ್ರತ್ಯೇಕ ವ್ಯವಸ್ಥೆಯಾಗಬೇಕು. ಅಲ್ಲಿನ ಮಟ್ಟಿಗೆ ಹೆಚ್ಚಿನ ಗಮನ ಕೊಡಬೇಕಾಗಿದೆ. ಜನಸಂಖ್ಯೆಯ ದೃಷ್ಟಿಯಿಂದ ಮಂಗಳೂರು ಪ್ರಾಮುಖ್ಯವಾದ ಪಟ್ಟಣ. ಕಾಡು ಪ್ರದೇಶ ಅಭಿವೃದ್ಧಿಯಾಗಿಲ್ಲ, ಆದುದರಿಂದ ಸರ್ಕಾರ ಆ ಪ್ರದೇಶಗಳಿಗೆ ಒಂದು ಹೆಚ್ಚಿನ ಅನುಕೂಲವನ್ನು ಒದಗಿಸಲು ಈ ಕಾಯಿದೆಯಲ್ಲಿ ಒಂದು ಅವಕಾಶ ಮಾಡಬೇಕು. ಅಂದರೆ ಮಲೆನಾಡು ವಸತಿ ನಿರ್ಮಾಣ ಯೋಜನೆ ಮಟ್ಟಿಗೆ ಒಂದು ವಿಶೇಷ ಗಮನ ಕೊಡಬೇಕು. ಮುಕ್ಕಣ್ಣಪ್ಪನವರು ಹೇಳಿದಂತೆ ತಾಲ್ಲೂಕು ಬೋರ್ಡ್, ಪಂಚಾಯಿತಿ, ಮುನಿಸಿಪಾಲಿಟಿ ಮತ್ತು ಹೌಸಿಂಗ್ ಬೋರ್ಡ್‌ಗಳ ಕಾರ್ಯಕ್ಕೆ ವಿವಾದ ಬಾರದ ರೀತಿಯಲ್ಲಿ, ಈ ಯೋಜನೆ ಯಶಸ್ವಿಯಾಗುವ ರೀತಿಯಲ್ಲಿರತಕ್ಕ ಭದ್ರತೆಯನ್ನು ಕಲ್ಪಿಸಿಕೊಳ್ಳಬೇಕಾಗಿದೆ. ಕೇವಲ ಒಂದು ರಾಜಕೀಯ ಪಕ್ಷದ ಜನರಿಗೆ ಪ್ರಾತಿನಿಧ್ಯ ಒದಗಿಸದೆ ಉದ್ದೇಶ ಸಾಧನೆಯಾಗುವಂತೆ ಎಲ್ಲ ಪಕ್ಷಗಳ ಜನರಿಗೂ ಅವಕಾಶವಿರುವಂತೆ ಈ ಬೋರ್ಡಿನ ರಚನೆಯಾಗಬೇಕು. ಆ ರೀತಿಯಿಂದ ಈ ಕಾಯಿದೆ ರಚಿಸಲ್ಪಡಬೇಕಾದ್ದೂ ಅಗತ್ಯ. ಇದಕ್ಕೆ ತಕ್ಕ ತಿದ್ದುಪಡಿಗಳನ್ನು ತಂದು ಸಮಗ್ರವಾದ ಮಸೂದೆ ತರಲು ಸೆಲೆಕ್ಟ್ ಕಮಿಟಿಗೆ ಕಳುಹಿಸಲು ಅವಕಾಶ ಕಲ್ಪಿಸಬೇಕು ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

†ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೆ, ಈ ಬಿಲ್ಲನ್ನು ಸ್ವಾಗತಿಸಿ ಒಂದೆರಡು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ದೇವೇಂದ್ರಪ್ಪನವರು ಹೇಳಿರುವುದು ನಿಜ. ಹೌಸಿಂಗ್ ಕಾರ್ಪೊರೇಶನ್‌ನಿಂದ ಸಾಕಷ್ಟು ಪ್ರಯೋಜನವಾಗುತ್ತಿಲ್ಲವೆಂದು ನನ್ನ ಸ್ವಂತ ಅನುಭವ. ಬೇಕಾದವರಿಗೆ, ಪ್ರಭಾವ ಶಾಲಿಗಳಿಗೆ ಅದರ ಸಹಾಯ ಹೆಚ್ಚಾಗಿ ದೊರೆತಿದೆ ಮತ್ತು ಒಂದು ಸ್ಥಳದವರಿಗೆ ಹೆಚ್ಚು ಅದರಿಂದ ಅನುಕೂಲವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ವಿಚಾರ ಮಾಡಬೇಕು. ಈ ಸಂಸ್ಥೆಯಿಂದ ಸಾಲ ಸಿಕ್ಕುವುದೇ ಕಷ್ಟ. ಸಾಲ ಸಿಕ್ಕಿದರೂ ಕೈಗೆ ಬರಬೇಕಾದರೆ ಒಂದು ವರ್ಷವಾಗುತ್ತದೆ. ಇಂಥ ಸಂದರ್ಭಗಳಿವೆ. ಈ ಸಾಲ ದೊರೆಯುವ ಹೊತ್ತಿಗೆ ಒಂದು ಸಾವಿರ ರೂಪಾಯಿ ಸಂಬಂಧಪಟ್ಟವರಿಗೆ ವೇದ್ಯವಾಗಿರುತ್ತದೆ. ಸಾಲ ಮಂಜೂರಾದ ಮೇಲೆ ಹಣ ಕೊಡುವಾಗ ಸ್ಥಳಕ್ಕೆ ಹೋಗಿ ನೋಡಿ ಗೋಡೆ ಎದ್ದಿಲ್ಲ, ತಾರಸಿ ಹಾಕಿಲ್ಲ ಎಂದು ಹೇಳಿ ನಿಧಾನ ಮಾಡುತ್ತಾರೆ. ಎಲ್ಲಾ ಆಗಿ ಪೂರ್ತಿ ಹಣ ಕೈಗೆ ಬರುವಾಗ್ಯೆ ಎರಡು ಸಾವಿರ ರೂಪಾಯಿ ಕೈ ಬಿಡುತ್ತದೆ. ಬಡ ನೌಕರರಿಗೆ ಸಿಕ್ಕುವುದೇ ಇಲ್ಲ. ಪ್ರಭಾವ ಬೀರಿದ ಹೊರತು ಒಂದು ಕಾಸೂ ದೊರೆಯುವುದಿಲ್ಲ. ಈ ಸಂಬಂಧವಾಗಿ ನಾಲ್ಕು ಚಕ್ರಗಳಿರುವಾಗ ಐದನೆಯ ಚಕ್ರವೇಕೆ? ಹೌಸಿಂಗ್ ಕಾರ್ಪೊರೇಷನ್ ಬೇಕಾಗಿಲ್ಲ. ಅದನ್ನು ತೆಗೆಯಬಹುದು.

ನನಗೆ ಗೊತ್ತಿರುವಂತೆ ಶಿವಮೊಗ್ಗಾದ ಒಬ್ಬ ಮಹಿಳೆಯು ಅರ್ಜಿ ಹಾಕಿ ಬಹಳ ಕಷ್ಟಪಟ್ಟು ಒಂದು ಇನ್‌ಸ್ಟಾಲ್‌ಮೆಂಟನ್ನೂ ತೆಗೆದುಕೊಳ್ಳದೆ ಬಿಟ್ಟುಬಿಟ್ಟಿದ್ದಾರೆ. ಬೆಂಗಳೂರಿನ ಬಡ ಮಹಿಳೆಯೊಬ್ಬರು ಅರ್ಜಿ ಹಾಕಿದ್ದರು. ಅವರಿಗೆ ತುಂಬಾ ಮಕ್ಕಳು, ಸಾಲ ದೊರಕಿಸಿಕೊಳ್ಳಲು ಬಹಳ ಕಷ್ಟಪಟ್ಟರು. ಗೋಡೆ ಹಾಕಿಲ್ಲ, ಹಾಕಿದ ಮೇಲೆ ಕೊಡುವುದಾಗಿ ಮೊದಲು ಹೇಳಿದರು. ಆಮೇಲೆ ತಾರಸಿ ಹಾಕಿ ಎಂದು ಹೇಳಿದರು. ಹೀಗೆ ಬಹಳ ಸತಾಯಿಸಿದರು. ಆಕೆ ಶಾಸನ ಸಭಾ ಸದಸ್ಯರಿಗೆಲ್ಲಾ ಹೇಳಿಕೊಂಡಳು. ಈ ರೀತಿ ಸಾಲ ಪಡೆಯಲು ತೊಂದರೆಯಾಗುತ್ತಿದೆ. ಆದುದರಿಂದ ಖಂಡಿತವಾಗಿಯೂ ಹೌಸಿಂಗ್ ಕಾರ್ಪೊರೇಷನ್ನನ್ನು ಕಿತ್ತುಹಾಕಿ ನೇರವಾಗಿ ಹೌಸಿಂಗ್ ಬೋರ್ಡಿನಿಂದ ಸಾಲ ಕೊಡುವ ವ್ಯವಸ್ಥೆ ಮಾಡಬೇಕೆಂದು ಸಲಹೆಮಾಡಿ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆ ಮಹಿಳೆ ತಮ್ಮನ್ನು ಕೇಳಿದಾಗ ತಾವೇನು ಮಾಡಿದಿರಿ?

ಶ್ರೀಮತಿ ರತ್ನಮ್ಮ ಮಾಧವರಾವ್.—ಸಾಧ್ಯವಾದ ಪ್ರಯತ್ನ ಮಾಡಿ ಕೊಡಿಸಿದೆವು.

MR. SPEAKER.—The House will now rise and meet at 3-30 P.M.

The House adjourned for recess at Three of the Clock and re-assembled at Thirty Minutes past Three of the Clock.

(MR. DEPUTY SPEAKER in the Chair.)

†Sri G. V. GOWDA (Palya).—Sir, Mr. Devendrappa has made very useful suggestions so far as the activities of the Housing Corporation are concerned. Though the Hon'ble Minister-in-charge of this Bill is not directly concerned with the Housing Corporation, let me invite his kind attention to the fact that very many useful suggestions have been made regarding the Housing Corporation, so that he may see that

(Sri G. V. GOWDA)

things are moved in a way to achieve the purpose for which this Corporation has come into existence. In respect of statistics given by Mr. Devendrappa, it goes to show that things are not moving as they ought to. In respect of Bangalore alone, the Housing Corporation has spent crores of rupees while other parts of Mysore are excluded. In order to avoid such things, even the Housing Board that is to be constituted by this Bill should see that its activities are distributed equitably all over the State. The intention of the Government in having this Board constituted by means of this Bill is no doubt welcome and good, provided the purpose for which this Board is constituted will be fulfilled.

Mr. Muckannappa said that vast powers are conferred on the Board. But, I do not say that any power has been conferred, but on the other hand, the authority that should have been given is not given. At every stage we see the interference of the Government. If such were the things, is it possible for the Board to implement the schemes formulated? That is a point for the Hon'ble Minister to consider. For everything............

Sri C. J. MUCKANNAPPA.—Sir, I did not at any time say that the powers conferred on the Board are enormous. I said that there was much confusion.

Sri G. V. GOWDA.—At every stage there is interference by the Government. Even for the appointment of officers for the Board, previous sanction of Government has to be obtained. Even for the appointment of an officer whose salary is more than Rs. 60, the Public Service Commission is to be consulted. In all matters, unless the Board takes the prior approval of the Government, nothing can be done. Even in respect of formulating schemes, it should be approved by Government. I do not understand what exactly is the real intention behind the provisions that the approval of Government or its sanction should be taken before anything could be done. If that were the intention of the Government, it is better for the Government, to implement through its own officers this housing scheme to all classes of persons who are by themselves unable to provide houses.

The class of people to whom the housing facility has to be given is not exhaustive. The exact duties and functions to be exercised by this Board are not defined clearly. It is said that there are Mysore Housing Board Act, Bombay Housing Board Act, etc. May I know how far the provisions in these Acts have been implemented? Even in the Five-Year Plans large amouts have been earmarked. So, it would have been better if the Minister had placed before this House what exactly are the activities of these Boards and how much amount has been spent.

Sri D. DEVARAJ URS.—Yesterday I gave figures.

Sri G. V. GOWDA.—It is said that a Special Officer has been appointed to look to the affairs of the integrated areas. We do not know how far the Special Officer has implemented the scheme. If the Hon'ble Minister feels that some more substantial things can be done by constituting the Housing Board under this Act, he should have given us statistics in respect of houses constructed so far.

Sri D. DEVARAJ URS.—Yesterday I did give some figures. In the integrated areas under all these schemes after the integration about 1,490 houses have been constructed under Low Income Group Housing Scheme and the Subsidised Group Housing Schemes.

Sri M. R. PATIL (Hubli).—We have not been able to know what the Housing Corporation has done so far ?

Sri D. DEVARAJ URS.—This Housing Corporation is in existence from the year 1955. Its existence is almost co-terminus with the existence of Mysore Housing Board. It is registered under the Co-operative Societies Act. Government have ordered to channalise funds to the Primary Housing Societies through this Corporation. Whatever the money that is allotted by the Government to the Housing Board, that money first comes from the Government of India to the State Government. These schemes are mostly Government of India schemes. A portion of the money is allotted to the Housing Board. The Housing Board in turn allots the funds to the Corporation. That corporation in its turn allots to various primary co-operative societies. In this arrangement the rate of interest also varies from one hand to the other. Take for example the Low Income Group Housing Scheme. There are several periods over which the money is expected to be repaid. Depending upon the period the rate interest is fixed. From the Government of India the State Governmenr gets the money at the rate of 4 per cent. The rate of interest varies as follows : $4\frac{1}{3}$, $4\frac{1}{4}$, $4\frac{1}{2}$ and 5 per cent. That is how the schemes work out.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಕಾರ್ಪೊರೇಷನ್ ಹೌಸಿಂಗ್ ಬೋರ್ಡ್ ಚೇರ್‌ಮನ್ ಅವರು ಚುನಾವಣೆಯಾಗಿ ಬಂದವರೋ ? ಅಥವಾ ನಾವು ನಿರ್ದೇಶ ಹೊಂದಿದವರೋ ?

ಶ್ರೀ ಡಿ. ದೇವರಾಜ್ ಅರಸ್.—ಅವರು ಸೊಸೈಟಿಗಳ ಆಕ್ಟ್ ಪ್ರಕಾರ ಅಲ್ಲಿದ್ದಾರೆ. ಅವರು ನಾವು ನಿರ್ದೇಶ ಹೊಂದಿದವರು.

Sri G. V. GOWDA.—As far as the Housing Corporation is concerned, the money allotted to the Corporation should have been in turn distributed among the several primary societies. That is not done. They simply invite applications and everything is decided in Bangalore. If fair distribution had been made there would have been houses all over the State. Every region of the State should get equal amount. At least the districts should get. That is the reason why every house building society is disgusted with the activies of the Housing Corporation.

> Clause 50 : "The Board shall have a fund called the Housiing Board Fund.
>
> 2. The Board may accept grants, subventions, donations and gifts from the Central Government or State Government or a local authority of any individual or body, whether incorporated or not, for all or any of the purposes of this Act."

I wish to know what exactly is the grant that is to be made by the Government of Mysore and what central assistance will be available to the Housing Board.

Sri D. DEVARAJ URS.—No assistance is given for the establishment charges.

Sri G. V. GOWDA.—For getting houses built, the Board must have funds and from which source those funds should come ? That has not been explained. The Government is committed only to pay establishment expenses that is likely to be incurred by the Housing Board.

The amount available to the Mysore Government for this scheme is not mentioned.

Sri D. DEVARAJ URS.—In the Plan book, it is all mentioned.

Sri G. V. GOWDA.—So far as powers of the Board are concerned, I must say they are inadequate and meagre. If the Board has to take the prior approval of the Government for every seheme, it is feared that the Board may not make itself bold to implement the several schemes. I know that there is provision that no contract involving an expenditure of Rs. 5 lakhs and more can be made without the previous sanction of the State Government. This is very good so far as it goes.

Clause 16 contemplates giving power to the Housing Commissioner by the Board to carry out works costing less than Rs. 5 lakhs. If it is the intention of Government to make the Board delegate its power of making contracts up to Rs. 5 lakhs to the Housing Commissioner, then there is no need for constituting a Board of this kind. Making the Board delegate such a power to the Housing commissioner would be contrary to the intention of Government in creating a Board like this. So I submit that there should not be any such delegation of power by the Board to the Housing Commissioner. The power of framing schemes, approving them and sanctioning them must lie with the Board and the Housing Commissioner should come in only for execution of those schemes.

Then, Sir, every year the Government expect all the programmes formulated by the Board to be sent to Government for their approval before implementation. I do not tknow whether it would be correct to say that each and every scheme irrespective of the amount involved should be brought to the notice of Government. I can understand Government insisting that schemes costing more than Rs. 5 lakhs should be sent to Government and prior consent obtained from them, but if each and every scheme is to be sent to Government it may not be possible for the Board to implement the several schemes formulated by them for providing housing facilities in the State.

Even in respect of variation of programmes by the Board, such variations are limited to 10% of the estimate.If such variations are in the interest of a large number of people, then I think Government should not come in the way of such variation in the programme.

It has been said that lands belonging to a corporation, municipal council or municipal committee, if required by the Housing Board for the purpose of any housing scheme, should vest in the Board and if there is any dispute about it between the Board and the corporation or the municipal council then the dispute should be referred to Government and Government's decision shall be final. I do not understand why all such disputes should go to Government for final decision. It is better if the District Judge or the District Munsiff having jurisdiction in the area is asked to decide the matter.

As regards clause 26 regarding compensation, it is stated that if the property is to be revested in course of time then compensation need not be paid. I apprehend that this power is likely to be misused. If the Board makes a declaration about revesting the land without mentioning the period and if the party has to wait for 10 years for getring back the land and if he is not to be paid any compensation, it would be very unjust. If it is only for a year or two, I can understand no compensation being paid, but if it is for a longer period compensation has to be paid and so it is necessary that the period should be mentioned in the declaration.

MR. DEPUTY SPEAKER. — You have taken nearly half an hour. Please be brief. There are other members who want to speak.

Sri G. V. GOWDA.—As regards the account of the Board, it is provided that the accounts shall be audited by such persons as the State Government may direct. I wish to emphasize that it is necessary that the accounts of the Housing Board should be audited by the Accountant General because then it would come within the purview of this House and the account will be placed before the Public Accounts Committee which will scrutinize to what extent the rules and regulations have been complied with by the Board.

So for as employees for whom housing facilities have got to be provided, they have been enumerated in clause 57, but the list is not exhaustive. There are many other clauses of employees who have not been enumerated in this list. It has got to be elaborated and all working class employees included in it.

Regarding labour housing schemes' I submit that emphasis should be laid on taking up such schemes in places where the working class people live so as to give them more housing facilities.

Then I find that Government have reserved the power to give direction to the Board. It has not been told why it is necessary to make such a provision.

With these observations, I hope that in the interest of making the Bill moie perfect, it will be sent to a Select Committee.

4 P.M.

ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಸಭೆಯ ಮುಂದೆ ತಂದಿರತಕ್ಕಂಥ ಹೌಸಿಂಗ್ ಬೋರ್ಡ್ ಮಸೂದೆಗೆ ನನ್ನ ಪೂರ್ಣವಾದ ಸಮ್ಮತಿಯನ್ನು ಕೊಡುತ್ತೇನೆ. ಈ ಜನೋಪಯುಕ್ತವಾದ ಇಡೀ ಮೈಸೂರು ಸಂಸ್ಥಾನಕ್ಕೇ ಅನ್ವಯಿಸುವಂಥಾ, ಈ ಮಸೂದೆ ಜನಗಳಿಗೆ ಬಹಳ ಪ್ರಯೋಜನವಾಗಿದೆ. ಇಂಥಾ ಒಂದು ಪ್ರಗತಿಯ ಮಸೂದೆಯನ್ನು ತಂದದ್ದಕ್ಕಾಗಿ ನಾನು ಮಂತ್ರಿಗಳಿಗೆ ಅಭಿನಂದಿಸುತ್ತೇನೆ. ಆದರೆ ಈ ಮಸೂದೆಯ ಸ್ಟೇಟ್‌ಮೆಂಟ್ ಆಫ್ ಆಬ್ಜಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಹೇಳಿರುವ ಹಾಗೆ ಹಳೆಯ ಮೈಸೂರಿನಲ್ಲಿ ಮೈಸೂರು ಹೌಸಿಂಗ್ ಬೋರ್ಡ್ ಆಕ್ಟ್ 1955, ಮತ್ತು 1949 ನೇ ಇಸವಿಯ ಮೈಸೂರು ಲೇಬರ್ ಹೌಸಿಂಗ್ ಆಕ್ಟ್ ಮಾತ್ರ ಇತ್ತು.—1948ನೇ ಇಸವಿಯ ಬೊಂಬಾಯಿ ಹೌಸಿಂಗ್ ಬೋರ್ಡ್ ಆಕ್ಟ್ ಬೊಂಬಾಯಿ ಪ್ರದೇಶದಲ್ಲಿ ಈಗ ಜಾರಿಯಲ್ಲಿದೆ. 1956 ನೇ ಇಸವಿಯ ಹೈದರಾಬಾದ್ ಹೌಸಿಂಗ್ ಬೋರ್ಡ್ ಆಕ್ಟ್ ಇತ್ತು. ಕೂರ್ಗ್, ದ. ಕನ್ನಡ ಜಿಲ್ಲೆಯಲ್ಲಿ ಯಾವ ಮಸೂದೆಯೂ ಇರಲಿಲ್ಲ. ಈಗ ಇವುಗಳನ್ನೆಲ್ಲಾ ಸಮನ್ವಯಗೊಳಿಸಿ ಇಡೀ ಸಂಸ್ಥಾನಕ್ಕೆ ಅನ್ವಯಿಸುವಂಥಾ ಈ ಒಂದು ಮಸೂದೆಯನ್ನು ತಂದಿದ್ದಾರೆ. ಇದು ಸ್ವಾಗತಾರ್ಹವಾದ ವಿಚಾರ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ನಮ್ಮ ಸಂಸ್ಥಾನದಲ್ಲಿ ಹೌಸಿಂಗ್ ಬೋರ್ಡ್ ಇತ್ತು. ಹೌಸಿಂಗ್ ಕಾರ್ಪೊರೇಷನ್ 1955 ನೇ ಇಸವಿಯಲ್ಲಿ ಆಯಿತು. ಈ ಹೌಸಿಂಗ್ ಕಾರ್ಪೊರೇಷನ್ ಯಾವ ತರಹ ಕೆಲಸ ಮಾಡಿಕೊಂಡು ಬರುತ್ತದೆ ಎನ್ನತಕ್ಕಂತಹ ವಿಷಯವನ್ನು ಶ್ರೀಮಾನ್ ದೇವೇಂದ್ರಪ್ಪನವರು ಅಂಕಿ ಅಂಶಗಳ ಮೂಲಕ ಈ ಮಾನ್ಯ ಸಭೆಗೆ ತಿಳಿಸಿದ್ದಾರೆ. ಅದನ್ನು ಕೇಳಿದರೆ ಆಶ್ಚರ್ಯವಾಗುತ್ತದೆ ಮತ್ತು ಜೊತೆಗೆ ಬಹಳ ವಿಷಾದವಾಗುತ್ತದೆ. ಇಡೀ ಸಂಸ್ಥಾನದಲ್ಲಿರತಕ್ಕಂಥ ಲಕ್ಷಾಂತರ ಜನಗಳಿಗೆ ಸೌಕರ್ಯವನ್ನೊದಗಿಸಲು ಈ ಹೌಸಿಂಗ್ ಕಾರ್ಪೊರೇಷನ್ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ, ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಪ್ರತಿಯೊಂದು ತಾಲ್ಲೂಕಿಗೂ ಹಣವನ್ನು ಒದಗಿಸಿ ಮನೆಗಳನ್ನು ಕಟ್ಟಿಸಿಕೊಡಬೇಕಾಗಿತ್ತು. ಆದರೆ ಈ ಹೌಸಿಂಗ್ ಕಾರ್ಪೊರೇಷನ್ ದೇಶಾದ್ಯಂತ ಎಲ್ಲಾ ಜನಗಳಿಗೂ ಸೌಕರ್ಯವನ್ನು ಒದಗಿಸಿ ಮನೆಗಳನ್ನು ಕಟ್ಟಿಸಿಕೊಡದೆ, ಕೋಟ್ಯಾಂತರ ರೂಪಾಯಿಗಳನ್ನು ಒಂದೇ ಕಡೆ ಖರ್ಚು ಮಾಡಿರತಕ್ಕದ್ದು ಬಹಳ ಅತೃಪ್ತಿಕರವಾದದ್ದು. ಈ ತರಹ ಹೌಸಿಂಗ್ ಕಾರ್ಪೊರೇಷನ್ ಕೆಲಸಮಾಡಿದ್ದರೂ ಸರ್ಕಾರ ಏತಕ್ಕೆ ಸುಮ್ಮನೆ ಇದೆ ಎಂಬುದನ್ನು ಮಾನ್ಯ ಮಂತ್ರಿಗಳು ವಿವರಿಸಬೇಕು. ಸಂಸ್ಥಾನದಲ್ಲಿ ಎರಡು ಕಾಯಿದೆಗಳು ಜಾರಿಯಲ್ಲಿದ್ದುವು. ಎರಡು ಸಂಸ್ಥೆಗಳನ್ನು ಸರ್ಕಾರ ಏತಕ್ಕೆ ನಡೆಸಿಕೊಂಡು ಬಂತೋ ಗೊತ್ತಿಲ್ಲ. ಒಂದು ಇಲ್ಲೇ ನೇರವಾಗಿ ಹಣವನ್ನು ಪಡೆಯುವುದು ಹೌಸಿಂಗ್ ಬೋರ್ಡ್, ಸೊಸೈಟಿಗಳ ಮುಖಾಂತರ ಹಣವನ್ನು ಪಡೆಯುವುದಕ್ಕೆ ಹೌಸಿಂಗ್ ಕಾರ್ಪೊರೇಷನ್ ಎಂತಲೂ ಇವೆ. ಈ ತರಹ ಒಂದೊಂದಕ್ಕೆ ಒಂದು ಏಜನ್ಸಿ, ಎರಡು ಏಜೆನ್ಸಿಗಳನ್ನೂ ಇಟ್ಟುಕೊಂಡು ಸರ್ಕಾರ ತೃಪ್ತಿಕರವಾದ ಮತ್ತು ಸಾರ್ಥಕವಾದ ಕೆಲಸಗಳನ್ನು ಮಾಡಬೇಕಾಗಿತ್ತು. ಆದರೆ ಈ ಹೌಸಿಂಗ್ ಕಾರ್ಪೊರೇಷನ್ ತನ್ನ ಕೆಲಸವನ್ನು ತೃಪ್ತಿಕರವಾಗಿ ಮಾಡದೆ ವಿನಾಶಕಾರಿಯಾದಂಥ ಕೆಲಸವನ್ನು ಮಾಡಿದೆ ಎನ್ನುವುದಕ್ಕೆ ಅನೇಕ ಸಲಹೆಗಳು ಈಗಾಗಲೇ ಬಂದಿವೆ. ಇದು ಬಹಳ ವಿಷಾದಕರವಾದ ವಿಚಾರ. ಮಾನ್ಯ ಮಂತ್ರಿಗಳು ಈ ವಿಷಯವನ್ನು ಪರಿಶೀಲಿಸಬೇಕೆಂದು ನಾನು ಹೇಳುತ್ತೇನೆ.

(ಶ್ರೀ ಡಿ. ಎಂ. ಸಿದ್ದಯ್ಯ)

ಈಗ ಮಾನ್ಯ ಮಂತ್ರಿಗಳು ಹೌಸಿಂಗ್ ಬೋರ್ಡ್ ಮಸೂದೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಹೌಸಿಂಗ್ ಬೋರ್ಡು ಈಗ ತೃಪ್ತಿಕರವಾಗಿ ಕೆಲಸ ಮಾಡುತ್ತಿದೆ. ಒಂದು ಸದುದ್ದೇಶದಿಂದ ಜನಗಳಿಗೆ ಸೌಕರ್ಯವನ್ನು ಒದಗಿಸಿಕೊಡಬೇಕೆಂಬ ದೃಷ್ಟಿಯಿಂದ ಈ ಮಸೂದೆಯನ್ನು ಈ ಸಭೆಯ ಮುಂದೆ ತಂದಿದ್ದೇವೆ ಎಂದು ಕೆಲವು ಅಂಕಿ ಅಂಶಗಳನ್ನು ಕೊಟ್ಟು ಮಾನ್ಯಮಂತ್ರಿಗಳು ಹೇಳಿದರು. ನಿಜವಾಗಿಯೂ ಇವೊತ್ತಿನ ದಿವಸ ಈ ಬಾಬಿಗೆ ಕೋಟ್ಯಾಂತರ ರೂಪಾಯಿಗಳು ಖರ್ಚಾಗುತ್ತಿದ್ದರೂ ಜನಗಳು ಮನೆಗಳಿಲ್ಲದೆ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಮುಖ್ಯವಾಗಿ ಬಡ ಜನಗಳಿಗೆ ಸೌಕರ್ಯವನ್ನು ಒದಗಿಸುವಂಥಾ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡುತ್ತಾರೆಂದು ನಾನು ನಂಬಿದ್ದೇನೆ. ಹಿಂದೆ ಇದ್ದಂಥ ಹೌಸಿಂಗ್ ಬೋರ್ಡ್ ಮತ್ತು ಹೊಸ ಹೌಸಿಂಗ್ ಬೋರ್ಡು ಇವುಗಳು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿವೆ ಎನ್ನತಕ್ಕಂಥ ವಿಚಾರ ನನಗೆ ಗೊತ್ತಿಲ್ಲ. ಆದ್ದರಿಂದ ಅವು ಹಿಂದೆ ಹೊಸದಾಗಿ ಮನೆಗಳನ್ನು ಕಟ್ಟಿಸಿ ಹೇಗೆ ಬಡ ಜನಗಳಿಗೆ ಉಪಕಾರವನ್ನು ಮಾಡಿವೆ ಎನ್ನತಕ್ಕಂಥ ವಿಚಾರಗಳನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಿಳಿಸಬೇಕೆಂದು ಹೇಳುತ್ತೇನೆ.

ಈ ಹೌಸಿಂಗ್ ಬೋರ್ಡು ಕಾನೂನು ಜಾರಿಗೆ ಬಂದ ಮೇಲೆ ನಿಜವಾಗಿಯೂ ಸಾರ್ಥಕವಾದಂಥ ಕೆಲಸವನ್ನು ಮಾಡತಕ್ಕಂಥ ಮಾರ್ಗವನ್ನು ಕಲ್ಪಿಸಿಕೊಟ್ಟು ತೃಪ್ತಿಕರವಾದ ಕೆಲಸವನ್ನು ಮಾಡುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಸೂಚಿಸುತ್ತೇನೆ ಈಗ ಕೂಲಿಗಾರರು ನಮ್ಮ ಸಂಸ್ಥಾನದಲ್ಲಿ ದೇಶಾದ್ಯಂತ ಎಲ್ಲಾ ಕಡೆಗಳಲ್ಲೂ ಇದ್ದಾರೆ. ಅವರಿಗೆ ಮನೆಗಳನ್ನು ಕಟ್ಟಿಸುವಾಗ ಅವರಿಗೆ ಸೌಕರ್ಯವನ್ನು ಒದಗಿಸುವ ದೃಷ್ಟಿಯಿಂದ ಅವುಗಳನ್ನು ಚೆನ್ನಾಗಿ ಕಟ್ಟಿಸಬೇಕು. ಈ ಬಗ್ಗೆ ಈ ಮಸೂದೆಯ clause 61ರಲ್ಲಿ 'It shall be the duty of the Board to cause an inspection to be made from time to time of houses occupied by working class people and the area in which houses are located with a view to ascertaining whether such houses are fit for human habitation and whether such areas are maintained in a proper condition so as to ensure the safety, health and well being of working class people' ಎಂದು ಹೇಳಿದ್ದಾರೆ. ಅದನ್ನು ಬಹಳ ಸ್ಪಷ್ಟವಾಗಿ ವಿಧಾಯಕ ಮಾಡಿದ್ದಾರೆ. ಅದನ್ನು ಮನಸ್ಸಿನಲ್ಲಿಟ್ಟುಕೊಂಡು working class peopleಗೆ ಮನೆಗಳನ್ನು ಕಟ್ಟಿಸತಕ್ಕದ್ದು ಯೋಗ್ಯ. ಜನರು ಮೆಚ್ಚತಕ್ಕ ರೀತಿಯಲ್ಲಿ ಕಟ್ಟಬೇಕು. ಅದಕ್ಕೆ ಭದ್ರವಾದ ಸಾಮಾನುಗಳನ್ನು ಹಾಕುವಂತೆ ವ್ಯವಸ್ಥೆ ಮಾಡಿ ಕಟ್ಟಿಸಿದ ಮನೆಗಳು ಅನೇಕ ವರ್ಷಗಳ ಕಾಲ ಬಾಳಿಕೆ ಬರುವಂತೆ ಮನೆಗಳನ್ನು ಕಟ್ಟಿಸಬೇಕು ಮತ್ತು ಈ ಮನೆಗಳನ್ನು ಕಟ್ಟತಕ್ಕ ಎಜನ್ಸಿಗಳು, ಕಂಟ್ರಾಕ್ಟರುಗಳು ಏನಿದ್ದಾರೆ, ಅವರು ಸಹ ಕಟ್ಟತಕ್ಕ ಮನೆಗಳು ಬಡ ಜನಗಳಿಗೆ ಸೌಕರ್ಯವಾಗಿರಬೇಕು ಮತ್ತು ಬಹಳ ಕಾಲ ಬಾಳಿಕೆ ಬರುವಂಥಾ ರೀತಿಯಲ್ಲಿ ಇರಬೇಕು. ಏತಕ್ಕೆಂದರೆ ಅನೇಕ ಸಂದರ್ಭದಲ್ಲಿ ಅವರು ಕಟ್ಟಿಸತಕ್ಕ ಮನೆಗಳು ಕಟ್ಟಿದ 'ವರ್ಷದಲ್ಲಿಯೇ ಬಿದ್ದು ಹೋದಂತಹ ನಿದರ್ಶನಗಳು ನಮ್ಮ ಗಮನಕ್ಕೆ ಬಂದಿವೆ. ಆದ್ದರಿಂದ ಅವರು ಕಟ್ಟಿಸತಕ್ಕ ಮನೆಗಳಿಗೆ ಭದ್ರವಾದಂತಹ ಸಾಮಾನುಗಳನ್ನು ಹಾಕಬೇಕು. ಮುಖ್ಯವಾಗಿ ತೊಂದರೆಯಲ್ಲಿರತಕ್ಕಂಥ ಜನಗಳಿಗೆ ವಾಸಮಾಡುವುದಕ್ಕೆ ಯೋಗ್ಯವಾದಂಥ ಮನೆಗಳನ್ನು ಕಟ್ಟಿಸುವಂಥಾ ವಿಷಯವನ್ನು ಗಮನದಲ್ಲಿಡಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಈ ಹೌಸಿಂಗ್ ಬೋರ್ಡನ್ನು ಕಾನ್‌ಸ್ಟಿಟ್ಯೂಟ್ ಮಾಡುವಾಗ ಅದಕ್ಕೆ ಒಬ್ಬರು ಚೇರ್ಮನ್ ಇರಬೇಕು, 12 ಜನ ಸದಸ್ಯರು ಇರಬೇಕು ಎನ್ನುವಂಥಾ ಒಂದು ನಿಯಮವನ್ನು ಕೂಡ ಹಾಕಿದ್ದಾರೆ. ಸರ್ಕಾರದವರು ಇಂಥಾ ಒಂದು ಸದುದ್ದೇಶದಿಂದ ಈ ತರಹ ಬೋರ್ಡುಗಳನ್ನು ಈ ತರಹ ಕಾರ್ಪೊರೇಷನ್‌ಗಳನ್ನು ರಚನೆಮಾಡಿ ದೇಶದಲ್ಲಿರತಕ್ಕ ದೀನದಲಿತರಿಗೂ, ಕಾರ್ಮಿಕರಿಗೂ ಮನೆಗಳನ್ನು ಕಟ್ಟಿಸಬೇಕು, ಸೌಕರ್ಯವನ್ನು ಒದಗಿಸಬೇಕು ಎನ್ನುವ ಮನೋಭಾವನೆಯುಳ್ಳವರಾಗಿದ್ದಾರೆ. ಸರ್ಕಾರದವರೇನೋ ಒಳ್ಳೆಯ ಸದುದ್ದೇಶದಿಂದ ಮಸೂದೆಗಳನ್ನು ತರುತ್ತಾರೆ. ಆದರೆ ಅವು ಕಾರ್ಯರೂಪಕ್ಕೆ ಬರಬೇಕಾದರೆ ಆದರಿಂದ ಎಷ್ಟರಮಟ್ಟಿಗೆ ಜನತೆಗೆ ಪ್ರಯೋಜನವಾಗಬೇಕೋ ಅಷ್ಟರಮಟ್ಟಿಗೆ ಆಗದೆ ಅದು ಕೇವಲ ಸ್ವಾರ್ಥಸಾಧಕರಿಗೆ ಮತ್ತು ಕೆಲವೇ ಗುಂಪಿನ ಜನಗಳಿಗೆ ಅನುಕೂಲವಾಗಿದೆ, ಇದರಿಂದ ದೇಶಕ್ಕೆ ದ್ರೋಹವಾಗುತ್ತಿದೆ, ಅನ್ಯಾಯವಾಗುತ್ತಿದೆ, ಎಂಬುದನ್ನು ನಾನು ಬಹಳ ತೀವ್ರವಾಗಿ ಮಾನ್ಯಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಒಬ್ಬರು ಅಧ್ಯಕ್ಷರು ಮತ್ತು 12 ಜನ ಸದಸ್ಯರುಗಳಿರುವಂಥಾ ಒಂದು ಬೋರ್ಡನ್ನು ಕಾನ್‌ಸ್ಟಿಟ್ಯೂಟ್ ಮಾಡಿ ಅವರು ಈ ಮನೆಗಳನ್ನು ಕಟ್ಟಿಸುವಂಥಾ ಕೆಲಸವನ್ನು ತೃಪ್ತಿಕರವಾಗಿ ನೆರವೇರಿಸಲಿ ಎನ್ನುವ ಯಾವ ಸದುದ್ದೇಶದಿಂದ ಸರ್ಕಾರದವರು ಈ ಮಸೂದೆಯನ್ನು ಈ ಸಭೆಯ ಮುಂದಿಟ್ಟಿದ್ದಾರೋ ಅದು ಸಾರ್ಥಕವಾಗುವ ರೀತಿಯಲ್ಲಿ ಕೆಲಸಮಾಡಬೇಕು. ದೇಶದಾದ್ಯಂತ ಇರತಕ್ಕಂಥ ಲಕ್ಷಾಂತರ ಜನಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಮಾಗ್ಗಿಮಮ್ ಪ್ರತಿಯೊಬ್ಬರಿಗೂ ಎಷ್ಟು ಸಹಾಯಮಾಡಬಹುದೋ ಅಷ್ಟನ್ನೂ ಸಹಾಯಮಾಡಿ ತೃಪ್ತಿಕರವಾದ ರೀತಿಯಲ್ಲಿ ಕೆಲಸಮಾಡತಕ್ಕಂಥಾದ್ದು ಬಹಳ ಪ್ರಾಮುಖ್ಯವಾದದ್ದು. ಈ ಹೌಸಿಂಗ್ ಬೋರ್ಡಿಗೆ ಅಧ್ಯಕ್ಷರನ್ನು ಮತ್ತು ಸದಸ್ಯರುಗಳನ್ನು ನೇಮಿಸುವಾಗ ಪ್ರಾಮಾಣಿಕತೆಯುಳ್ಳವರನ್ನೂ, ಯೋಗ್ಯರಾದವರನ್ನೂ ನೇಮಿಸಬೇಕು. ಮಾನ್ಯ ಮಂತ್ರಿಗಳಾದ ಶ್ರೀ ಡಿ. ದೇವರಾಜ ಅರಸ್ ಅವರು ಎಷ್ಟು ನಿಷ್ಠಾವಂತರು ಮತ್ತು ಉತ್ಸಾಹಶಾಲಿಗಳು ಎನ್ನತಕ್ಕಂಥಾದ್ದು ಈ ಸಭೆಗೆ ಗೊತ್ತಿದೆ. ಯಾವ ವಿಧವಾದ ಪ್ರಭಾವಕ್ಕೂ ಒಳಗಾಗದೆ ನಿದಾಕ್ಷಿಣ್ಯವಾಗಿ ದೇಶದ ಹಿತದೃಷ್ಟಿಯಿಂದ ಕೆಲಸಮಾಡತಕ್ಕಂಥ ಅಧ್ಯಕ್ಷರು ಮತ್ತು ಸದಸ್ಯರನ್ನು ಈ ಹೌಸಿಂಗ್ ಬೋರ್ಡಿಗೆ ನೇಮಕ ಮಾಡಬೇಕೆಂದು ನಾನು ಮತ್ತೊಮ್ಮೆ ಮಾನ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆ.

ಹಳೆಯ ಮೈಸೂರು ಮತ್ತು ಇತರ ಪ್ರದೇಶದಲ್ಲಿ ಇರತಕ್ಕ ಎಲ್ಲಾ ಆಕ್ಟುಗಳನ್ನೂ ಅಳವಡಿಸಿ ಇಡೀ ಸಂಸ್ಥಾನಕ್ಕೆ ಅನ್ವಯಿಸುವಂಥಾ ರೀತಿಯಲ್ಲಿ ಒಳ್ಳೆಯ ಆದರ್ಶವಾದ ರೀತಿಯಲ್ಲಿ ಈ ಮಸೂದೆಯನ್ನು ತಂದಿದ್ದಾರೆ. ಇಂಥಾ ಒಂದು ಎಮರ್ಜೆನ್ಸಿ ಸಿಚ್ಯುಯೇಷನ್‌ನಲ್ಲಿ, ವಿಶೇಷವಾದ ಪರಿಸ್ಥಿತಿಯಲ್ಲಿ ಕೂಲಿಗಾರರಿಗೆ ಮತ್ತು ಫ್ಯಾಕ್ಟರಿಗಳಲ್ಲಿ ಕೆಲಸ ಮಾಡತಕ್ಕವರಿಗೆ ಮನೆಗಳನ್ನು ಒದಗಿಸಿ ಅವರ ಒಂದು ಬಾಳ್ವೆಗೆ ಸೌಕರ್ಯವನ್ನು ಒದಗಿಸಿದರೆ ಅವರು ಸುಖ ಸಂತೋಷದಿಂದ ಇದ್ದು ತೃಪ್ತಿಕರವಾದ ರೀತಿಯಲ್ಲಿ ಚೆನ್ನಾಗಿ ಅವರು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಒಂದು ವಿಶೇಷವಾದ ಪರಿಸ್ಥಿತಿಯಲ್ಲಾದರೂ ಕೂಡ ಯಾವ ಸದುದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೋ ಅದು ಸಾರ್ಥಕವಾಗುವ ರೀತಿಯಲ್ಲಿ ತೃಪ್ತಿಕರವಾದ ರೀತಿಯಲ್ಲಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಿದರೆ ಅದರಿಂದ ಮಾನ್ಯ ಮಂತ್ರಿಗಳಿಗೆ ಕೀರ್ತಿ ಬರುತ್ತದೆ. ಇನ್ನು ಮುಂದೆ ಈ ಹೌಸಿಂಗ್ ಬೋರ್ಡ್ ಕೆಲಸ ಮಾಡತಕ್ಕ ವಿಚಾರಗಳು 4 ವರ್ಷ ಅಥವಾ 5 ವರ್ಷಕ್ಕೊಂದು ಸಾರಿಯಾದರೂ ಈ ಸಭೆಯ ಮುಂದೆ ಚರ್ಚೆಗೆ ಬರುವಂತೆ ಮಾಡಬೇಕು. ಈ ಹೌಸಿಂಗ್ ಯೋಜನೆಗೋಸ್ಕರ ಎಷ್ಟು ಹಣವನ್ನು ಒದಗಿಸಿತ್ತು ಎಷ್ಟು ಹಣವನ್ನು ಎಷ್ಟರ ಮಟ್ಟಿಗೆ ಖರ್ಚು ಮಾಡಿದೆ, ತೃಪ್ತಿಕರವಾದ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆದಿದೆಯೇ ಎನ್ನತಕ್ಕಂಥ ವಿಚಾರಗಳನ್ನು ಚರ್ಚಿಸಿ ಅದಕ್ಕೆ ಈ ಸಭೆಯ ಒಪ್ಪಿಗೆಯನ್ನು ಪಡೆಯುವುದು ಒಳ್ಳೆಯದೆಂದು ನಾನು ಸೂಚಿಸುತ್ತೇನೆ. ಹೌಸಿಂಗ್ ಬೋರ್ಡ್ ಮತ್ತು ಹೌಸಿಂಗ್ ಕಾರ್ಪೊರೇಷನ್ ಎರಡು ಸಂಸ್ಥೆಗಳು ಬೇಕಾಗಿಲ್ಲ. ಹೌಸಿಂಗ್ ಬೋರ್ಡ್ ಒಂದೇ ಸಾಕು. ಈ ಹೌಸಿಂಗ್ ಕಾರ್ಪೊರೇಷನ್ ಅನ್ನು ವಜಾ ಮಾಡಬೇಕು. ಹೌಸಿಂಗ್ ಬೋರ್ಡಿನಿಂದ ಹೌಸಿಂಗ್ ಕಾರ್ಪೊರೇಷನ್ನಿಗೆ ಹಣ ಕೊಟ್ಟು ಅವು ಸೊಸೈಟಿಗಳ ಮುಖಾಂತರ ಮನೆಗಳನ್ನು ಕಟ್ಟುವುದಕ್ಕೆ ಹಣವನ್ನು ಒದಗಿಸತಕ್ಕಂಥ ವ್ಯವಸ್ಥೆ ಸರಿಯಾಗಿಲ್ಲ. ಈ ಹೌಸಿಂಗ್ ಕಾರ್ಪೊರೇಷನ್ ತೃಪ್ತಿಕರವಾದ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡುತ್ತಿಲ್ಲ. ಆದ್ದರಿಂದ ಇದನ್ನು ವಜಾ ಮಾಡಬೇಕು. ಹೌಸಿಂಗ್ ಬೋರ್ಡಿನಿಂದ ನೇರವಾಗಿ ಮನೆಗಳನ್ನು ಕಟ್ಟಿಸಲು ಹಣವನ್ನು ಒದಗಿಸಿ ತೃಪ್ತಿಕರವಾದ ರೀತಿಯಲ್ಲಿ ಕೆಲಸಕಾರ್ಯ ಮಾಡಬಹುದು ಎಂದು ಹೇಳಿ ಪ್ರಗತಿದಾಯಕವಾದಂಥ ಮತ್ತು ಪ್ರಜೋಪಯುಕ್ತವಾದ ಮಸೂದೆಯನ್ನು ತಂದುದಕ್ಕಾಗಿ ಮಾನ್ಯ ಮಂತ್ರಿಗಳಿಗೆ ವಂದಿಸಿ ಈ ಮಸೂದೆಗೆ ನನ್ನ ಸಂಪೂರ್ಣ ಒಪ್ಪಿಗೆಯನ್ನು ಕೊಡುತ್ತೇನೆ.

†ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಸಭೆ ಮುಂದೆ ಇರುವ 1962ನೇ ಇಸವಿ ಮೈಸೂರು ಹೌಸಿಂಗ್ ಬೋರ್ಡ್ ಬಿಲ್ ಮೇಲೆ ಈಗಾಗಲೇ ಅನೇಕ ಸ್ನೇಹಿತರು ಮಾತನಾಡುತ್ತಾ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಬೋರ್ಡು ಕಾರ್ಪೊರೇಷನ್, ಎರಡು ಬೇರೆ ಬೇರೆ ಸಂಸ್ಥೆಗಳು ಇರುವುದು ಅವಶ್ಯಕವಲ್ಲ ಎಂದು ಹೇಳಿದ್ದಾರೆ ಮತ್ತು ಕಾರ್ಪೊರೇಷನ್ನಿನ ವಿಷಯದಲ್ಲಿ ಸ್ವಲ್ಪ ಕಟುವಾಗಿ ಟೀಕೆ ಮಾಡಿ ಕಾರ್ಪೊರೇಷನ್ ಮುಚ್ಚುವುದು ಒಳ್ಳೆಯದು ಎಂದು ಕೆಲವರು ಸಲಹೆ ಮಾಡಿದರು. ಮಾನ್ಯ ಮಿತ್ರರು ಇದನ್ನು ಪೂರ್ತಿ ಓದಿದ ಹಾಗೆ ಕಾಣಲಿಲ್ಲ. ಕಾರ್ಪೊರೇಷನ್ ಮುಚ್ಚುವಷ್ಟು ಸಣ್ಣ ವಿಷಯವಾಗಿ ಕುಳಿತಿಲ್ಲ. ರಿಜಿಸ್ಟ್ರೇಷನ್ ಮಾಡಿಕೊಂಡು ಕೆಲಸ ಮಾಡುತ್ತಿರುವ ಸಂಸ್ಥೆ ಇದು. ನನ್ನ ಹತ್ತಿರ ಒಂದು ರಿಪೋರ್ಟು ಇದೆ. ಅವರ ವ್ಯವಹಾರ ಕೋಟಿಗಟ್ಟಲೆ ಇದೆ. ರಿಜಿಸ್ಟ್ರೇಷನ್ ಆಕ್ಟು ಪ್ರಕಾರ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಮಾನ್ಯ ಸದಸ್ಯರ ಅಭಿಪ್ರಾಯ ಏಕೆ ಇದನ್ನು ಮುಚ್ಚಬಾರದು ಎಂದು ಇದೆ. ಅದು ಇಷ್ಟು ಸುಲಭವಾಗಿ ಕಾನೂನಿನ ಇತಿಮಿತಿಯಲ್ಲಿ ಮುಚ್ಚುವುದಕ್ಕೆ ಬರುತ್ತಿದೆಯೋ ಇಲ್ಲವೋ ಗೊತ್ತಿಲ್ಲ. ನಾನು ಇದರ ಪರವಾಗಿ ಮಾತನಾಡುತ್ತಾ ಇಲ್ಲ. 50ನೇ ಇಸವಿ ಆಗಸ್ಟ್ 28ನೇ ತಾರೀಖು ಇದು ರಿಜಿಸ್ಟರ್ ಆಗಿದೆ. ಎ. ಆರ್. ನಾಗೇಶ್ವರ ಅಯ್ಯರ್, ಬಿ.ಎ., ಬಿ.ಎಲ್., ಅವರು ಅಧ್ಯಕ್ಷರು, ವೈಸ್ ಪ್ರೆಸಿಡೆಂಟರು, ಡೈರೆಕ್ಟರುಗಳು ಇದ್ದಾರೆ. ಹೌಸಿಂಗ್ ಬೋರ್ಡ್ ಚೇರ್ಮನ್‌ರೂ ಕೂಡ ಒಬ್ಬರು ಡೈರೆಕ್ಟರು. ಚುನಾಯಿತರಾದ ಸದಸ್ಯರು ಅನೇಕ ಜನರಿದ್ದಾರೆ. ಇದು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವುದು ಒಂದು ಅಭಿಪ್ರಾಯ. ಸದ್ಯಕ್ಕೆ ಈಗಿರುವ ನಮ್ಮ ಹೌಸಿಂಗ್ ಬೋರ್ಡ್ ಕಾನೂನು ಏನಿದೆ. ಇದು 1955ನೇ ಇಸವಿಯದು, ಇದು ಬರೀ ಹಳೇ ಮೈಸೂರು ಪ್ರದೇಶಕ್ಕೆ ಮಾತ್ರವಲ್ಲದೆ ಈಗಿರುವ ಮೈಸೂರು ಸಂಸ್ಥಾನಕ್ಕೆಲ್ಲಾ ಅನ್ವಯವಾಗುತ್ತದೆ ಎಂದು ಅಷ್ಟು ಮಾಡಿದ್ದರೆ ಸಾಕಾಗಿತ್ತು ಎಂದು ಕಾಣುತ್ತದೆ. ಆದರೆ ಈ ಭೀಮಪ್ಪ ನಾಯಕರ ಹೌಸಿಂಗ್ ಬೋರ್ಡ್ ಏನಿದೆ ಅದು ಇಲ್ಲಿ ಒಂದು ದೊಡ್ಡ ಮಸೂದೆಯ ರೂಪದಲ್ಲಿ ಬಂದಿದೆ. ಕೊನೆಯಲ್ಲಿ ಸರ್ಕಾರದವರು ಏನು ಅಧಿಕಾರ ಇಟ್ಟುಕೊಂಡಿದ್ದಾರೆ ಎಂಬುದನ್ನು ನೋಡಿದರೆ ರೂಲ್ಸ್ ಮಾಡುವುದು, ಮತ್ತು memorandum regarding Delegated Legislation ಅಂತ ಹೇಳಿ ಬಹಳ ದೊಡ್ಡದಾಗಿ ಬರೆದಿದ್ದಾರೆ. ಅದನ್ನೂ ಓದಿಕೊಂಡರೆ ಈ ಬೋರ್ಡ್ ಎಂಥಾದ್ದು ಅಂತ ಅರ್ಥವಾಗುತ್ತದೆ. ಇವರು ಸೃಷ್ಟಿ ಮಾಡತಕ್ಕ ಈ ಒಂದು ಸಂಘ ಅಥವಾ ಸಂಸ್ಥೆಗೆ ಒಬ್ಬ ಚೇರ್ಮನ್, 12 ಜನ ಸದಸ್ಯರು ಇರುತ್ತಾರೆ. ಅವರನ್ನು ನಾಮಕರಣ ಮಾಡುವವರು ಸರ್ಕಾರದವರು. ಅವರಿಗೆ ಒಂದು ಕಾರ್ಯಕ್ರಮ ಇವರು ಕೊಡುವರು. ಕ್ಲಾಸ್ 77ರ ಪ್ರಕಾರ ಬೈಲಾಸ್ ಮಾಡಿಕೊಳ್ಳುವುದಕ್ಕೆ ಮಾತ್ರ ಬೋರ್ಡಿನವರಿಗೆ ಅಧಿಕಾರ ಕೊಟ್ಟಿದ್ದಾರೆ. ಬಾಕಿ ಎಲ್ಲಾ ವಿಷಯಕ್ಕೂ ಸರ್ಕಾರದ ಹತ್ತಿರ ಬರಬೇಕು, ಕೆಲಸ ಮಾಡಬೇಕು. ಆದ್ದರಿಂದ ಇದು ಸ್ವತಂತ್ರವಾಗಿ ಏನೇ ಆದರೂ ಮಾಡುವುದಕ್ಕೆ ಶಕ್ತಿ ಇರತಕ್ಕ ಬೋರ್ಡು ಅಲ್ಲ.

ಇನ್ನು ಮಾನ್ಯ ಸದಸ್ಯರಿಂದ ಸಿದ್ದಯ್ಯನವರು ಇದು ಬಹಳ ಪ್ರಗತಿದಾಯಕವಾದ ಮಸೂದೆ ಎಂದು ಏನೋ ಹೊಗಳಿದರು. ಘೋಷಣೆ ಮಾಡುವುದು, ಹೊಗಳುವುದು, ನಾನು ಒಂದು ದೊಡ್ಡ ಘೋಷಣೆ ಮಾಡುತ್ತೇನೆ ಎಂದು ಇಟ್ಟುಕೊಳ್ಳಿ–ನಾನು ಇಂದು ದೊಡ್ಡ ಕೆಲಸ ಮಾಡಬೇಕೆಂದು ಇದ್ದೇನೆ ಎಂದು–ಅದು ಲೋಕದ ಮೆಚ್ಚಿಗೆಗೆ ಹೊಗಳುವುದಾದರೆ,

(ಶ್ರೀ ಎಸ್. ಗೋಪಾಲ ಗೌಡ)

ಘೋಷಣೆ ಮಾಡುವುದಾದರೆ, ಅಷ್ಟೇ ಅದಕ್ಕೆ ಅರ್ಥ. ಈಗ ನಮ್ಮ ಮೈಸೂರು ಹೌಸಿಂಗ್ ಬೋರ್ಡು ತೆಗಳಿಕೆಗೆ ತುತ್ತಾಗಿದೆ. ಕಾರ್ಪೊರೇಷನ್ ಯಾವುದೋ ಒಂದು ಕಾರಣಕ್ಕಾಗಿ ತೆಗಳಿಕೆಗೆ ತುತ್ತಾಗಿದೆ. ಹೌಸಿಂಗ್ ಬೋರ್ಡು ಮತ್ತೊಂದು ಕಾರಣಕ್ಕೆ ತೆಗಳಿಕೆಗೆ ತುತ್ತಾಗಿದೆ. ಮೈಸೂರಿನ ಮದರಾಸು ಭಾಗ, ಕೊಡಗು ಜಿಲ್ಲೆ ಮತ್ತು ಮುಂಬೈ ಪ್ರದೇಶ, ಹೈದರಾಬಾದ್ ಕರ್ನಾಟಕದ ಪ್ರದೇಶದವರು ಬಹುಶಃ ಹೌಸಿಂಗ್ ಬೋರ್ಡ್ ಏನು ಮಾಡುತ್ತಿದೆ ಎಂಬುದು ಗೊತ್ತಿಲ್ಲದೇ ಟೀಕೆ ಮಾಡದೇ ಇರಬಹುದು. ಇಷ್ಟು ಮಾತ್ರ ಹೇಳುತ್ತೇನೆ. ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಕೆಲವು ಹಣವನ್ನು ಮೀಸಲಾಗಿಟ್ಟಿದ್ದೀರಿ. ಲೋ ಇನ್‌ಕಂ ಗ್ರೂಪ್, ಮಿಡ್ಲ್ ಇನ್‌ಕಂ ಗ್ರೂಪ್ ಇವುಗಳಿಗೆ ಹಣ ಖರ್ಚುಮಾಡಲು ಒಂದು ಏಜೆನ್ಸಿ ಬೇಕು, ಆದ್ದರಿಂದ ಒಂದು ಸ್ಟ್ಯಾಟ್ಯುಟರಿ ಕಾನೂನು ಪ್ರಕಾರ ಒಂದು ಬಾಡಿ ನಿರ್ಮಾಣ ಮಾಡಬೇಕೆಂದು ಹೇಳಿ ಸರ್ಕಾರದವರು ಇಷ್ಟಪಟ್ಟು ಈ ಮಸೂದೆಯನ್ನು ತಂದಿರಬೇಕೆಂದು ನನಗೆ ಅನ್ನಿಸುತ್ತದೆ. ಒಂದು ವಿಷಯವನ್ನು ನಾವು ಬಹಳ ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ತುರ್ತುಪರಿಸ್ಥಿತಿಯಲ್ಲಿ ಬಹುಶಃ ಉತ್ಪನ್ನವನ್ನು ಹೆಚ್ಚು ಮಾಡದೇ, ಅದಕ್ಕೆ ಸಂಬಂಧಪಡದೇ ಇರತಕ್ಕ ಎಲ್ಲಾ ಸ್ಕೀಂಗಳೂ ನಿಂತು ಹೋಗುತ್ತವೆ ಎಂದು ತಿಳಿದುಕೊಂಡಿದ್ದೇನೆ. ಬೋರ್ಡ್, ಚೇರ್ಮನ್, ಮೆಂಬರುಗಳು, ಎಸ್ಟಾಬ್ಲಿಷ್‌ಮೆಂಟ್ ಎಲ್ಲರೂ ಬಹುಶಃ ಹೋಗಬೇಕಾಗುತ್ತದೆ. ರಿಸೋರ್ಸಸ್ ಕಮಿಟಿಯವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಆ ಪ್ರಕಾರ ಮೈಸೂರು ಸರ್ಕಾರದವರು ಏನೂ ಹೆಜ್ಜೆ ಇಟ್ಟಂತೆ ಕಾಣಲಿಲ್ಲ. ಅದಕ್ಕೆ ಕಾರಣ ಇದೆ. ಯಾವುದಾದರೂ ಒಂದು ಎಸ್ಟಾಬ್ಲಿಷ್‌ಮೆಂಟನ್ನು ನಾವು ಸೃಷ್ಟಿ ಮಾಡಿದರೆ ಅದನ್ನು ತೊಡೆದು ಹಾಕುವುದು ಬಹಳ ಕಷ್ಟವಾಗುತ್ತದೆ. ಅದನ್ನೆಲ್ಲಾ ಹೇಗೆ ತೊಡೆದು ಹಾಕುವುದು ಎಂಬುದು ಸಮಸ್ಯೆಯಾಗುತ್ತದೆ. ಪಬ್ಲಿಕ್ ಸರ್ವೀಸ್ ಕಮಿಷನ್ ಮೂಲಕ ಅಪಾಯಿಂಟ್‌ಮೆಂಟ್ ಆಗಿ ಬಿಟ್ಟರಂತೂ ಅವನಿಗೆ ಪೆನ್ಷನ್ ಕೊಡುವವರೆಗೂ ದುಡಿಸಿಕೊಳ್ಳಬೇಕು ಹಾಗಲ್ಲದೇ ಇದ್ದರೆ ಕೆಲಸ ಮುಗಿದು ಹೋಯಿತು ಬೇಡ ಎಂದು ಹೇಳಬಹುದು. ಮಲೆನಾಡು ಡೆವಲಪ್‌ಮೆಂಟ್ ಬೋರ್ಡು ಅಂತ ಇತ್ತು. ಅದು ನಿಂತು ಹೋಯಿತು ಗೋಪಾಲಸ್ವಾಮಿ ಅವರು ಇನ್ನೂ ಕೆಲವು ಬೋರ್ಡುಗಳ ಹೆಸರು ಹೇಳಿದರು. ಅವರ ಪೂರ್ತಿ ಪಟ್ಟಿ ಹೇಳಿ ಮುಗಿಸುವುದಕ್ಕೆ ಈಗ ಕಾಲವಿಲ್ಲ. ಬಹುಶಃ ಅವುಗಳನ್ನೂ ಏನು ಮಾಡುತ್ತಾರೆಯೋ ಗೊತ್ತಿಲ್ಲ. ಅವುಗಳ ಬಗ್ಗೆ ಟೀಕೆಗಳು ಇವೆಲ್ಲಾ ಇವೆ. ನಾನಾದರೂ ಕಾರ್ಪೊರೇಷನ್, ಬೋರ್ಡ್ ಇವುಗಳ ವಿರೋಧವಾಗಿ ಇಲ್ಲ. ಜನತಂತ್ರದಲ್ಲಿ ಸಾಮಾನ್ಯವಾಗಿ ಕೂಡಿ, ಒಟ್ಟಾಗಿ ಕೆಲಸಗಳನ್ನು ಮಾಡಬೇಕಾಗುತ್ತದೆ. ಕೆಲಸಗಳನ್ನು ಮಾಡುವಾಗ ಕಾನೂನು ಬದ್ಧವಾಗಿ ಕೆಲಸ ಮಾಡತಕ್ಕ ಇಂಥಾ ಸಂಸ್ಥೆಗಳು ಬೇಕೇಬೇಕಾಗುತ್ತವೆ. ಅವನ್ನು ನಾವು ಬೇಡ ಎಂದು ಹೇಳುವುದಕ್ಕಾಗುವುದಿಲ್ಲ. ಮಸೂದೆಯನ್ನು ತಂದು, ಸರ್ಕಾರದವರು ಇಷ್ಟು ಅಧಿಕಾರವನ್ನು ಇಟ್ಟುಕೊಂಡು ಆಗಸ್ಟ್ ತಿಂಗಳಿನಲ್ಲಿ ಇದು ಡ್ರಾಫ್ಟ್ ಆಗಿದೆ, ಪಬ್ಲಿಷ್ ಆಗಿದೆ. ಇದಕ್ಕೆ ಇನ್ನೂ ಜೀವ ತುಂಬುವಂಥ ಯಾವ ಪ್ರಯತ್ನವೂ ನಡೆದಿಲ್ಲ, ಹಾಗಿರಬಹುದು, ಹೀಗಿರಬಹುದು, 'May' ಎನ್ನುವ ಶಬ್ದದ ಮೂಲಕ ವಿವರಿಸಲ್ಪಟ್ಟಿವೆ. ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಹೌಸಿಂಗ್ ಬೋರ್ಡಿನ ಅಗತ್ಯವೆ ಇಲ್ಲ, ಇಂಥಾ ಸಂಸ್ಥೆಯನ್ನು ನಡೆಸಿಕೊಂಡು ಚೈತನ್ಯ, ಶಕ್ತಿ ಇಲ್ಲ ಎನ್ನುವುದು ಒಂದನೆಯದು. ಎರಡನೆಯದು ಅವರು ಯಾವ ಸ್ಕೀಂ ಕೊಡುತ್ತಾ ಇದ್ದಾರೆ ಅವು ಯಾವ ದೃಷ್ಟಿಯಿಂದಲೂ ಮನೆಗಳ ಅವಶ್ಯಕತೆ ಇರತಕ್ಕವರಿಗೆ ಪ್ರಯೋಜನವಿಲ್ಲದಂತಾಗಿದೆ. ಯಾವನಿಗೆ ಮನೆಬೇಕೋ ಅವನೇ ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲವೋ, ಅಂತಹವನನ್ನು ಆರಿಸಿ ಸಹಾಯ ಮಾಡತಕ್ಕ ಸಂಸ್ಥೆ ಇದು. ಇವೆಲ್ಲ ನಮಗೆ ಗೊತ್ತಿದ್ದ ಹಾಗೆ ಎಷ್ಟೋ ಜನರಿಗೆ ಮನೆ ಇದ್ದು, ಅಂಥವರೂ ಹಣ ಪಡೆದು ಮನೆ ಕಟ್ಟಿಸಿ ಬಾಡಿಗೆಗೆ ಕೊಟ್ಟು ಅಲ್ಲಿಯೂ ಉತ್ಪನ್ನ ಮಾಡತಕ್ಕ ಅನೇಕ ನಿದರ್ಶನಗಳನ್ನು ನೋಡಿದ್ದೇವೆ.

[Mr. SPEAKER in the chair].

ಈಗ ಲೇಬರ್ ಹೌಸಿಂಗ್ ಸ್ಕೀಂ ಬಂದಿದೆ. ಅದು ಅವಶ್ಯಕವಾದುದು. ಕೈಗಾರಿಕೆಗಳಿರುವ ಕಡೆ ಅವುಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ವಸತಿ ಸೌಕರ್ಯ ಅವಶ್ಯಕ. ಈಗ ಭದ್ರಾವತಿಯಲ್ಲಿ ಕೆಲವು ಮನೆಗಳನ್ನು ಕಟ್ಟಿದ್ದಾರೆ, ಇನ್ನೂ ಕೆಲವನ್ನು ಕಟ್ಟಬೇಕಾಗಿದೆ ಎಂದು ಹೇಳಿದರು. ಹಾಗೆಯೇ ಬೆಂಗಳೂರಿನ ಸುತ್ತು ಮುತ್ತ ಕೆಲವು ವಸತಿಗಳನ್ನು ಮಾಡಿದ್ದಾರೆ. ದೇಶದ ಹಳ್ಳಿಯಲ್ಲಿ ಮನೆ ಕಟ್ಟಿಸಿಕೊಡುವ ಯೋಜನೆ ಇನ್ನೂ ಬಹಳ ದೂರವಿದೆಯೆಂದು ತಿಳಿದುಕೊಂಡಿದ್ದೇನೆ. ಈ ಸರ್ಕಾರದಿಂದ ಆ ಕೆಲಸ ಸಾಧ್ಯವಾಗುವುದಿಲ್ಲ ಮತ್ತು ಹೌಸಿಂಗ್ ಬೋರ್ಡಿನಂಥ ಏಜೆನ್ಸಿಯಿಂದ ಆ ಕೆಲಸ ಮಾಡಲು ಸಾಧ್ಯವೇ ಇಲ್ಲವೆಂದು ಕಾಣುತ್ತದೆ. ಅಂಥ ಒಂದು ಸಾಹಸ ಈ ಸಣ್ಣ ಬೋರ್ಡ್ ಮಾಡಲಾರದು.

ಇನ್ನು ಈ ಬೋರ್ಡಿನಲ್ಲಿ ಅನೇಕ ರೀತಿಯ ನ್ಯೂನತೆಗಳಿವೆ. ಇವತ್ತು ಈ ಸಂಸ್ಥೆಗಳೆಲ್ಲಾ ಕೆಲವು ಸ್ನೇಹಿತರಿಗೆ ಜಾಗ ಕಲ್ಪಿಸಿಕೊಡುವ ದೃಷ್ಟಿಯಿಂದ ನಿರ್ಮಾಣವಾಗುತ್ತಿವೆಯೋ ಏನೋ ಎಂದು ಅನುಮಾನ ಬರುತ್ತಿದೆ. ದೇಶದಲ್ಲಿ ಮನೆಗಳನ್ನು ಕಟ್ಟಿಸುವುದು ಇದರ ಉದ್ದೇಶವಾಗಿದೆ. ಆದರೆ ಕಾಂಗ್ರೆಸ್ಸಿನ ನಿರಾಶ್ರಿತರಿಗೆ ಹುದ್ದೆ ಒದಗಿಸುವ ಉದ್ದೇಶದಿಂದ ರಚಿತವಾಗುವ ಬೋರ್ಡುಗಳ ನಿರ್ಮಾಣ ನಿಲ್ಲಬೇಕು. ಇವುಗಳಿಂದೇನೂ ಪ್ರಯೋಜನವಾಗುವುದಿಲ್ಲ. ಈಗ ಎಷ್ಟು ಮನೆಗಳು ಮುಂದೆ ಆಗಬೇಕು, ಎಂಥ ಜನರಿಗೆ ಆಗಬೇಕು, ಅದಕ್ಕೆ ಯಾವ ಸ್ಕೀಂ ಮಾಡಬಹುದು, ಹಣ ಎಲ್ಲಿಂದ ಒದಗಿಸಬೇಕು ಮುಂತಾದ್ದಕ್ಕೆ ಸಂಬಂಧಪಟ್ಟ ಯೋಜನೆ ನಮ್ಮ ಮುಂದೆ ಬರುತ್ತದೆ. ಪಂಚವಾರ್ಷಿಕ ಯೋಜನೆಯಲ್ಲಿ ಅದಕ್ಕೆ ಅವಕಾಶ ಮಾಡುತ್ತಾರೆ. ಆದರೆ ಇವತ್ತಿಗೂ ಕೂಡ ದೇಶ ಇಬ್ಭಾಗವಾದ ಮೇಲೆ ಸುಮಾರು 80–90 ಲಕ್ಷ ಜನ ನಿರಾಶ್ರಿತರೇನು ಬಂದರು ಅವರಿನ್ನೂ ರಸ್ತೆಗಳಲ್ಲೇ ಮಲಗುತ್ತಿದ್ದಾರೆಂದು ಹೇಳಿದರೆ ಹೌಸಿಂಗ್ ಬೋರ್ಡ್ ಕೇಂದ್ರದ ಮಟ್ಟದಲ್ಲಿ ಹೇಗೆ ಕೆಲಸ ಮಾಡುತ್ತಿದೆ ಎಂದು ಅರ್ಥವಾಗುತ್ತದೆ. ಇವತ್ತು ಈ ಸರಕಾರಕ್ಕೆ ವಿನಂತಿ ಮಾಡುವುದು—ಈ ಬೋರ್ಡಿನ ಟರ್ಮ್ ಮುಗಿಯುತ್ತಾ ಬಂದಿದೆ, ಈಗಲೇ ಈ ಬೋರ್ಡನ್ನು

ರದ್ದು ಮಾಡಬಹುದು, ರದ್ದು ಮಾಡಿ ಎಂದು ಕೆಲವರು ಹೇಳಿದರು. ಕಾರ್ಪೋರೇಷನ್ನಲ್ಲಿರುವ ನ್ಯೂನತೆಗಳನ್ನು ತೆಗೆಯೋಣ, ಅದಕ್ಕೆ ತಕ್ಕ ತಿದ್ದುಪಡಿ ಮಾಡೋಣ. ಹಾಗೆ ಮಾಡಿ ಕಾರ್ಪೋರೇಷನ್ನಿಗೆ ಹೆಚ್ಚು ಪ್ರೋತ್ಸಾಹ ಕೊಡೋಣ. ಕಾರಣವೇನೆಂದರೆ ಅದು ಸಹಕಾರಿ ಸಂಸ್ಥೆಗಳಿಗೆ ಬಹಳ ಸಹಾಯ ಮಾಡಿದೆ. ಅದು ಹೆಚ್ಚು ಹಣವನ್ನು ಬೆಂಗಳೂರಿನಲ್ಲಿ ಖರ್ಚು ಮಾಡಿರಬಹುದು, ನಿಜ. ಕೆಲವು ಲೋಪ ದೋಷಗಳಿರಬಹುದು, ಕೆಲವು ಕಾರಣಗಳೂ ಇರಬಹುದು. ಹೆಚ್ಚು ಕಾರ್ಮಿಕರು ವಾಸಮಾಡುವುದರಿಂದ, ಕೈಗಾರಿಕೆಗಳು ಹೆಚ್ಚಾಗಿರುವುದರಿಂದ ವಸತಿ ಗೃಹಗಳಿಗಾಗಿ ಬೆಂಗಳೂರಿನಲ್ಲಿ ಹೆಚ್ಚು ಹಣ ಖರ್ಚಾಗಿರಬಹುದು.

(Interruption)

MR. SPEAKER.—The Hon'ble Member has only two minutes. He should not be interrupted. Addressing Sri Gopal Gowda—If you go on discussing with them, your time will be over.

ಶ್ರೀ ಎಸ್. ಗೋಪಾಲ ಗೌಡ.—ನನ್ನ ಅಭಿಪ್ರಾಯ ಸರಿಯಾಗಿಲ್ಲದಿದ್ದರೆ ಮಾನ್ಯ ಸದಸ್ಯರಿಗೆ ತಿದ್ದುವುದಕ್ಕೆ ಅವಕಾಶವಿಲ್ಲವೇ ?

MR. SPEAKER.—That must happen within the time allowed. I will allow you another two minutes. After that I will call upon another member.

Sri S. GOPALA GOWDA.—Allright, Sir.

ಅಲ್ಲಿಗೆ ಭಾಷಣ ನಿಲ್ಲಿಸಿ ಕುಳಿತುಕೊಂಡರು.

†ಶ್ರೀ ಜಿ. ಮರುಳಪ್ಪ (ಕಡೂರು).—ಸ್ವಾಮಿ ಅಧ್ಯಕ್ಷರೆ, ಇಲ್ಲಿಯವರೆಗೆ ನನ್ನ ಸ್ನೇಹಿತರು ಈ ಹೌಸಿಂಗ್ ಬೋರ್ಡ್ ಬಿಲ್ಲಿನ ಮೇಲೆ ಮಾತನಾಡಿ ಕೆಲವು ವಿಷಯಗಳನ್ನು ಬಹಳ ಚೆನ್ನಾಗಿ ಹೇಳಿದ್ದಾರೆ, ಬಹಳ ಸಂತೋಷ. ನಮ್ಮ ದೇಶದಲ್ಲಿ ಈಚೆಗೆ ಬೋರ್ಡುಗಳ ರಚನೆ ಜನರ ಅನುಕೂಲಕ್ಕಾಗಿ ಆಗುತ್ತಿದೆಯೋ ಅಥವಾ ಯಾರಾದರೂ ಅತೃಪ್ತ ಎಲಿಮೆಂಟ್ಸ್ ಸಮಾಧಾನ ಪಡಿಸುವುದಕ್ಕಾಗಿ ಆಗುತ್ತಿದೆಯೋ ಎಂಬ ಅನುಮಾನಕ್ಕೆ ಎಡೆಕೊಟ್ಟಿದೆ. ಗೋಪಾಲ ಗೌಡರು ಹೇಳಿದಹಾಗೆ ಈಗ ನಡೆಯುತ್ತಿರುವ ಹೌಸಿಂಗ್ ಬೋರ್ಡಿನ ಚರಿತ್ರೆ ನೋಡಿದರೆ ಮಾನ ಮರ್ಯಾದೆಯಿರುವವರು ಯಾರೂ ತಲೆಎತ್ತಿ ತಿರುಗುವಂತಿಲ್ಲ. ಈ ಚರಿತ್ರೆ ಬಹಳ ದೊಡ್ಡದು. ಸರ್ಕಾರ ಬಹಳ ದಿವಸ ಉಳಿಯಬೇಕೆಂಬ ಭಾವನೆಯಿಂದ ರಚಿಸಿರುವ ಬೋರ್ಡುಗಳು, ಕಾರ್ಪೋರೇಷನ್‌ಗಳು ಮುಂತಾದುವುಗಳಲ್ಲಿ ತನ್ನ ಪಕ್ಷದವರನ್ನೇ ನೇಮಿಸಿದೆ. ಸರ್ಕಾರ ಬಲವಾಗಿರಬೇಕೆಂದು ಹಾಗೆ ಮಾಡಬಹುದು, ಬೇಡವೆಂದು ಹೇಳುವುದಿಲ್ಲ. ಆದರೆ ನೇಮಕ ಮಾಡುವಾಗ ಒಂದು ಕೆಲಸ ಮಾಡಿದರೆ ಬಹಳ ಉತ್ತಮ. ವ್ಯಕ್ತಿಗಳ ಹಿಂದಿನ ಚರಿತ್ರೆ ತಿಳಿದು ಉತ್ತಮರಾದವರನ್ನು, ಯೋಗ್ಯರನ್ನು ನೇಮಿಸಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ದೇಶಕ್ಕೆ ಅನರ್ಥವಾಗುತ್ತದೆ, ಕಲ್ಯಾಣವಾಗುವುದಿಲ್ಲ, ಅಪಾಯಕರ. ಈಗ ದೇಶ ಉದ್ಧಾರವಾಗಿರಬೇಕು, ಬೋರ್ಡು ಚೆನ್ನಾಗಿರಬೇಕು, ಜನರಿಗೆ ಒಳ್ಳೆದಾಗಬೇಕು, ಕಲ್ಯಾಣವಾಗಬೇಕು ಎಂದು ಜನರ ಹಿತದೃಷ್ಟಿಯಿಂದ ನೇಮಕ ಮಾಡುತ್ತಿರುವರೇ ಎಂಬ ವಿಚಾರದಲ್ಲಿ ಬಹಳ ಸಂಶಯವಿದೆ, ಈಗಿನ ಮಂತ್ರಿಗಳು ದಕ್ಷರಾಗಿ, ಒಳ್ಳೆಯ ವಿಚಾರವಂತರಾಗಿರುವುದರಿಂದ ಒಳ್ಳೆಯ ಕೆಲಸ ಮಾಡಬೇಕೆಂದಿರಬಹುದು. ಅದರಲ್ಲಿ ನನಗೆ ನಂಬಿಕೆ ಇದೆ. ಆದುದರಿಂದ ಹಿಂದಿನ ದೋಷಗಳಿಗೆ ಅವಕಾಶವಿಲ್ಲದಂತೆ ಈ ಬೋರ್ಡನ್ನು ರಚಿಸಿ, ಒಳ್ಳೆಯವರನ್ನು ನೇಮಿಸಿ ದೇಶಕ್ಕೆ ಕಲ್ಯಾಣವಾಗುವಂತೆ ಮಾಡಲಿ, ಇಲ್ಲದಿದ್ದರೆ ಅದಷ್ಟು ಜಾಗ್ರತೆ ಇರುವ ಬೋರ್ಡನ್ನು ತೆಗೆದು ಜನರಿಗೆ ಶಾಂತಿ ದೊರಕಿಸಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ, ಈ ಗೃಹನಿರ್ಮಾಣಕ್ಕೆ ಸಂಬಂಧಪಟ್ಟ ಬೋರ್ಡಿನ ಬಿಲ್ಲನ್ನು ಸಭೆಯ ಮುಂದಿಟ್ಟಿರುವಾಗ ಈ ವಿಚಾರದಲ್ಲಿ ಸರ್ಕಾರ ಬಹಳ ಎಚ್ಚರಿಕೆಯಿಂದ ಆಡಳಿತನಡೆಸುತ್ತಿಲ್ಲ ಎಂದು ಬಹಳ ವಿಷಾದದಿಂದಲೇ ಹೇಳಬೇಕಾಗಿದೆ. ಈ ಬೋರ್ಡಿಗೆ ಲಕ್ಷ ರೂಪಾಯಿಗಳು ಖರ್ಚಿಗೆ ಬೇಕಾಗಿದೆಯೆಂದು ಹೇಳಿದ್ದಾರೆ. ಈ ಖರ್ಚಿನ ವಿಚಾರದಲ್ಲಿ, ಛೇರ್‌ಮನ್ನರ ನಾಮಕರಣದ ವಿಚಾರದಲ್ಲಿ ವಿಪುಲವಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಹೌಸಿಂಗ್ ಬೋರ್ಡ್ ಕೆಲಸ ಚೆನ್ನಾಗಿ ನಡೆಯುತ್ತಿಲ್ಲ. ನಮ್ಮ ದೇಶದಲ್ಲಿ 15 ವರ್ಷಗಳಾದರೂಕೂಡ ಇನ್ನೂ ಗೃಹನಿರ್ಮಾಣಕಾರ್ಯ ಯಶಸ್ವಿಯಾಗಿ ಆಗಿಲ್ಲ ಎಂಬ ವಿಚಾರವನ್ನು ವಿಷಾದದಿಂದ ಹೇಳಬೇಕಾಗಿದೆ.

ಇದು ಬಹಳ ಮುಖ್ಯವಾದ ಸಮಸ್ಯೆ. ವಾಸ ಮಾಡುವುದಕ್ಕೆ ಮನೆಯನ್ನು ಹೊಂದತಕ್ಕದ್ದು ಪ್ರಜಾಪ್ರಭುತ್ವದಲ್ಲಿ ಎಲ್ಲ ಜನರ ಹಕ್ಕು. ಆದರೆ ಇದನ್ನು ಹದಿನೈದು ವರ್ಷಗಳಲಾಗಾಯಿತು ಸರ್ಕಾರ ಈಡೇರಿಸಲಿಲ್ಲ.

4-30 P.M.

MR. SPEAKER—Time allotted for this Bill expires at 4-30 and so I have extended it by half-an-hour.

ಶ್ರೀ ಕೆ. ಲಕ್ಕಪ್ಪ.—ಈ ಗೃಹನಿರ್ಮಾಣಕ್ಕಾಗಿ ಖರ್ಚುಮಾಡಿರುವ ಹಣ ಬೆಂಗಳೂರಿನಲ್ಲಿಯೇ ಹೆಚ್ಚು ಖರ್ಚಾಗಿದೆ. ಈ ಮಸೂದೆಯಿಂದ ನಮ್ಮ ರೈತರಿಗೆ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ಹೇಳಬೇಕಾಗಿದೆ. ಸರ್ಕಾರ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯಗತ ಮಾಡುವ ಕಾಲದಲ್ಲಿ ಒಂದೇ ರೀತಿಯಾಗಿ ಪ್ರತಿ ಜಿಲ್ಲೆಗೂ ಅನ್ವಯಿಸಬೇಕು. ಎಲ್ಲಕ್ಕೂ ಹಣವನ್ನು ವಿನಿಯೋಗಿಸಬೇಕು. ಆಶ್ರಯವಿಲ್ಲದ ರೈತವರ್ಗದ ಜನರಿಗೆ ಗೃಹ ನಿರ್ಮಾಣ

(ಶ್ರೀ ಕೆ. ಲಕ್ಕಪ್ಪ)

ಮಾಡುವ ಉದ್ದೇಶ ಸರ್ಕಾರಕ್ಕಿಲ್ಲವೆಂದು ದುಃಖದಿಂದ ಹೇಳಬೇಕಾಗಿದೆ. ನೇರವಾಗಿ ಈ ಬೋರ್ಡಿನ ಮೂಲಕ ಅವರಿಗೆ ಸೌಕರ್ಯ ಸಿಕ್ಕುತ್ತಿಲ್ಲ. ನನ್ನ ದೃಷ್ಟಿಯಲ್ಲಿ ಈ ಹೌಸಿಂಗ್ ಬೋರ್ಡಿನ ಮಸೂದೆ ಬಂದಿರುವುದರಿಂದ ಒಳ್ಳೆಯದೇನೂ ಆಗುವುದಿಲ್ಲ. ಏಕೆಂದರೆ ಪ್ರತಿ ಜಿಲ್ಲೆಯಲ್ಲಿಯೂ ಈ ಬೋರ್ಡಿನ ಏಜೆನ್ಸಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅಲ್ಲಿ ಕೊಡತಕ್ಕ ಹಣ ಸರಿಯಾಗಿ ವಿನಿಯೋಗವಾಗುತ್ತಿಲ್ಲ. ನೇರವಾಗಿ ಹೌಸಿಂಗ್ ಬೋರ್ಡು ಗೃಹ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳುತ್ತಿಲ್ಲವೆನ್ನುವುದು ಗೊತ್ತಿದೆ. ಈಗಲಾದರೂ ದೇಶದ ಆಡಳಿತ ಜವಾಬ್ದಾರಿಯನ್ನು ಹೊರುತ್ತಿರುವವರು ಬಹುಭಾಗದ ಹಣವನ್ನು ರೈತರಿಗಾಗಿ ಉಪಯೋಗಿಸಬೇಕೆಂದು ಸಲಹೆ ಮಾಡುತ್ತೇನೆ. ವಿಕೇಂದ್ರೀಕರಣ ನೀತಿಗನುಸಾರವಾಗಿ ಪ್ರತಿ ಜಿಲ್ಲೆಯಲ್ಲಿ ಸಬ್ ಏಜೆನ್ಸಿ ಮಾಡಿ ಸರಿಯಾದ ವ್ಯವಸ್ಥೆ ಮಾಡಬೇಕು. ಎನ್.ಇ.ಎಸ್. ಮೂಲಕ ಗೃಹನಿರ್ಮಾಣ ಕೆಲಸ ಮಾಡುತ್ತೇವೆಂದು ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಹೇಳಿದರು. ಆದರೆ ಇದುವರೆಗೂ ಎಲ್ಲಿಯೂ ರೈತರಿಗಾಗಿ ಗೃಹ ನಿರ್ಮಾಣ ಯೋಜನೆ ಹಾಕಿ ಅದು ಯಶಸ್ವಿಯಾಗುತ್ತಿಲ್ಲ. ಇನ್ನು ಮುಂದಾದರೂ ಎಲ್ಲ ಹಣವನ್ನೂ ಡೆವಲಪ್‌ಮೆಂಟ್ ಕೌನ್ಸಿಲ್ ಮೂಲಕ ಹಂಚುವ ರೀತಿ, ಹಾಗೂ ಗೃಹನಿರ್ಮಾಣ ಯೋಜನೆಯನ್ನು ಸರಿಯಾಗಿ ಕಾರ್ಯಗತ ಮಾಡುವರೀತಿ ತಿದ್ದುಪಡಿಯನ್ನು ತಂದಿದ್ದರೆ ಒಳ್ಳೆಯದಾಗುತ್ತಿತ್ತೆಂದು ನನ್ನ ಭಾವನೆ.

ಹೌಸಿಂಗ್ ಬೋರ್ಡಿಗೆ ನಾಮಿನೇಷನ್ ಮಾಡತಕ್ಕ ಕಾಲದಲ್ಲಿ ರಾಜಕೀಯವನ್ನು ಬೆರಸಬಾರದು. ಯಾವ ರಾಜಕೀಯ ಪಕ್ಷಕ್ಕೂ ಸೇರದೇಯಿರುವ ತಜ್ಞರನ್ನು ಈ ಬೋರ್ಡಿಗೆ ನೇಮಕ ಮಾಡಿದರೆ ಗೃಹನಿರ್ಮಾಣ ಯೋಜನೆ ಯಶಸ್ವಿಯಾಗಿ ನಡೆಯುತ್ತದೆಂದು ನನ್ನ ಭಾವನೆ. ಈ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನೊಂದು ವಿಷಯವನ್ನು ಈಗಾಗಲೇ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. Delegated powers ನಲ್ಲಿ ಸಾಕಷ್ಟು ಅಧಿಕಾರವನ್ನು ಬೋರ್ಡಿಗೆ ಕೊಟ್ಟಿಲ್ಲ, ಬೈಲಾ ಮಾಡುವುದಕ್ಕೆ ಮಾತ್ರ ಅವಕಾಶವಿದೆ. ಬೋರ್ಡು ಬೈಲಾ ಮಾಡಿದರೂ ಅದಕ್ಕೆ ಸರ್ಕಾರದ ಒಪ್ಪಿಗೆಯಾಗಬೇಕು.

†Sri ANNARAO GANAMUKHI (Afzalpur).—I welcome this measure and I want to offer a few suggestions to the Hon'ble Minister so that he may think over them and bring in necessary amendments during clause by clause reading of the Bill.

In the case of acquisition of lands by the Housing Board it has been said that every acquisition by the Housing Board will be for a public purpose and it will be within the meaning of Land Acquisition Act, 1894. Wherever there is a dispute it will be referred to the tribunal. The tribunal has been given the power to decide the amount of compensation in matters referred to it under section 28. Here, while exercising the powers by this one man tribunal, the principles have not been laid down in this Bill so as to guide the tribunal to fix the compensation. In the Land Acquisition Act we see principles having been enunciated and the considerations that should prevail to determine the amount of compensation have been enunciated. Here, I do not know whether the Land Acquisition Act will apply to the whole process of acquisition. That is not clear.

About other things, many things have been left to the subordinate legislation. It has been said that under the rule making power the Government will make rules regarding the determination of compensation. As we know principles have to be laid down before giving any power to the subordinate legislation. Otherwise if the subordinate legislation body goes into the principles and also details, I think that will be held void. Therefore, before making any rules the law itself has to make certain principles. Hence, I think the provisions of sections 23 and 24 of the Land Acquisition Act should be made applicable for such land acquisitions under this Act.

Only the Land Acquisition Act has been referred to in clause 33, but it has not been said in so many words that the provisions of that Act will apply in the case of acquisitions made by the Housing Board. So I think the Minister must look into this.

Then the quorum for a meeting of the Housing Board has been fixed at

8, but I think this is too much. Under the Village Panchayats and Taluk Boards Act the quorum is only one-third, but here it is almost 3/4ths. Suppose Government nominates members from all corners of the State to the Board. If some of them do not come and if 7 members come and if there is no 8th member, then for want of quorum the meeting cannot take place and the Board has unnecessarily to incur the expenditure of T.A. and D.A. of the other members without transacting any business. So I think the quorum has to be reduced to one-third so as to enable the Housing Board to observe economy.

Under clause 15 every contract has to be made by the Chairman of the Board. Under the Village Panchayats and Taluk Boards Act it is the executive officer who will make and sign the agreement. Because a non-official happens to be the Chairman of the Housing Board, I think it is better to entrust this task of signing and entering into contracts to the Housing Commissioner who will be an officer of Government. In that case the Government will have some control over such officer. It is for that reason the executive officer of the Taluk Board also has been given the power to execute contracts on behalf of the Board.

Sri DEVARAJ URS.—That power can be delegated by the Chairman.

Sri ANNARAO GANAMUKHI.—That power cannot be delegated because under this clause it is the Chairman alone who can enter into contracts on behalf of the Board.

Then under clause 10, it is said that " no appointment shall be made contrary to the advice of the Commission except with the approval of the State Government." In certain cases the State Government overrules the advice of the Public Service Commission. If similarly an advice given by the P.S.C. is proposed to be overruled by the Housing Board then it must send that recommendation to Government and then Government will decide whether to permit the Board to overrule such advice or not. I think that this principle should not be extended to such subordinate bodies because this cadre consists of many bodies like municipalities, and other corporations and boards which are manned by officers who are Governments.

Then coming to clause 12 dealing with appointment of committees, we are hardly spending Rs. 6 to 7 lakhs per year. That being so, where is the necessity, especially when we have 12 members on the Board, to constitute regional committees and delegate powers to them. If there is such a provision on the Act, then there will be demand for the constitution of such committees in every district and it is likely to lead to unnecessary expenditure in the shape of T. A. and D. A. for those members. So I do not think this provision is necessary at this juncture and it is better to delete the same.

Then coming to clause 50 regarding the funds of the Board, the Government will provide the administrative expenses. Sub-clause (2) says that the Board may accept grants, sub-ventions, donations and gifts from the Central Government or State Government or a local authority or any individual or body. This may be only an enabling provision. I do not think anybody including the State Government will come forward with donation to the Housing Board. This provision seems to be redundant and superfluous. Whatever money the State Government gives in addition what is provided in sub-clause (3) is loan and not grant. Therefore, I do not

(SRI ANNARAO GANAMUKHI)

think there is any necessity for this provision which may never materialise.

Then I think the Government has unnecessarily given the power of making bye-laws and regulations to the Housing Board. Then Government also make rules, bye-laws and regulations. I do not know how many rules, bye-laws and regulations are to be made. Government will make the Act.

MR. SPEAKER.—Government does not make any Act. It is the Legislature which makes Acts.

SRI ANNARAO GANAMUKHI.—But it is the Legislature which delegates the rule-making power to Government and the Government makes rules. Then what are these bye-laws and regulations? The common man cannot understand all these things. Why should we make such a provision here. If the Housing Board makes any regulations and bye-laws, they have to be sent to Government and confirmed by Government.

Either have regulations which may be made by the Housing Board and sanctioned by Government or give the power of making bye-laws to the Board as they will have the sanction of law. In fact, under the Constitution, an ordinance, bye-law or regulation—everything has the force of law. So, when it will have the force of law, why have this regulation, bye-law, etc.? These things should be considered by Government. With these observations, I support this Bill.

MR. SPEAKER.—Was it the apprehension of the Hon'ble Member whether the Land Acquisition Act would apply to the land acquired for the Housing purpose or not?

SRI ANNA RAO GANAMUKHI.—In determining the compensation, the provisions of the Land Acquisition Act have to be followed; but there is only a reference to the Land Acquisition Act and nothing further than that. So, the point is whether all the procedure laid down in the Land Acquisition Act will be followed.

MR. SPEAKER.—But sub-clause (2) provides: "in the manner provided in the Mysore Land Acquisition Act..........".

SRI ANNA RAO GANAMUKHI.—The words used towards the end of sub-clause (2) are "shall be deemed".

MR. SPEAKER.—That is only so far as public purpose is concerned.

SRI ANNA RAO GANAMUKHI.—I have no quarrel with the purpose.

MR. SPEAKER.—Any way, kindly think over it.

†ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಇರತಕ್ಕ ಮೈಸೂರು ಹೌಸಿಂಗ್ ಬೋರ್ಡ್ ಮತ್ತು ಹೌಸಿಂಗ್ ಕಾರ್ಪೊರೇಷನ್ ವಿಚಾರದಲ್ಲಿ ಈ ಸಭೆಯಲ್ಲಿ ಇಷ್ಟು ಕಟುತರವಾದ ಚರ್ಚೆ ಮತ್ತು ಟೀಕೆಗಳು ಬಂದಿರುವುದಕ್ಕಾಗಿ ನಾನು ನನ್ನ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ಯಾವ ಒಂದು ಸಂಸ್ಥೆಯೇ ಆಗಲಿ ಸಾರ್ವಜನಿಕರ ಹಿತಸಾಧನೆಗಾಗಿ ಏರ್ಪಾಡಾಗಿರತಕ್ಕ ಸಂಸ್ಥೆಗಳೆಂದರೆ ಅದರಲ್ಲಿ ಮುಖ್ಯವಾದುವು ಈ ಮೈಸೂರು ಹೌಸಿಂಗ್ ಬೋರ್ಡು ಮತ್ತು ಮೈಸೂರು ಖಾದಿ ಬೋರ್ಡ್ ಇವು. ಇವು ಸಂಸ್ಥಾನದಲ್ಲಿ ಬಡವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದೊಂದೇ ಅಲ್ಲದೆ ದೇಶದಲ್ಲಿರತಕ್ಕ ನಿರುದ್ಯೋಗ ಸಮಸ್ಯೆಯನ್ನು ನೀಗಿ ಸಾವಿರಾರು ಜನರಿಗೆ ಉದ್ಯೋಗಗಳನ್ನು ಕಲ್ಪಿಸತಕ್ಕ ದೃಷ್ಟಿಯಿಂದ ಈ ಯೋಜನೆಗಳನ್ನು ಮಾಡಿದ್ದಾಗಿದೆ. ಹಾಗಿದ್ದರೂ ಈ ವಿಚಾರದಲ್ಲಿ ಹೀಗೆಲ್ಲ ಟೀಕೆ ಮಾಡಿರುವುದು ಯೋಗ್ಯವಾದುದಲ್ಲ. ಈ ಸಂಸ್ಥೆಗಳು ಸಮರ್ಪಕವಾಗಿ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಆಡಳಿತ ನಡಿಸಿಕೊಂಡು ಹೋಗತಕ್ಕ ಯೋಗ್ಯ ಹಾಗೂ ದಕ್ಷರಾದ ಜನಗಳನ್ನು ಸರ್ಕಾರದವರು ನೇಮಕ ಮಾಡಿದ್ದರೂ ಹೀಗೆಲ್ಲ ಟೀಕೆ ಟಿಪ್ಪಣಿಗಳಿಗೆ ಈ ವಿಚಾರವನ್ನು ಗುರಿಪಡಿಸಿದ್ದರಿಂದ ನಿಜವಾಗಿಯೂ ಇದೊಂದು ವಿಷಾದಕರವಾದ ಸಂಗತಿಯಾಗಿದೆ. ಆದರೆ ಇದರಲ್ಲಿರತಕ್ಕ ಅಲ್ಪ ಸ್ವಲ್ಪ ದೋಷಗಳನ್ನು ಸರ್ಕಾರದವರು ಕೂಡಲೆ ಸರಿಪಡಿಸತಕ್ಕದ್ದು ಅಗತ್ಯ. ನಾನು ಈ ವಿಚಾರದಲ್ಲಿ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ಮುಸೂದೆಯಲ್ಲಿರತಕ್ಕ ಒಂದೇ ಒಂದು ವಿಚಾರದಲ್ಲಿ ಅಂದರೆ ಈ ಮುಸೂದೆಯ ಕ್ಲಾಜ್ 34 ರ ವಿಚಾರದಲ್ಲಿ ಒಂದು ಅಂಶವನ್ನು

ಸೂಚಿಸಬೇಕಾಗಿದೆ. ಸರ್ಕಾರದವರು ಈ ಹೌಸಿಂಗ್ ಸ್ಕೀಮನ್ನು ಯಾವ ಪ್ರದೇಶಕ್ಕೆ ಜಾರಿಗೆ ಕೊಡುತ್ತಾರೋ ಅಲ್ಲಿ ಆ ಪ್ರದೇಶವನ್ನು ಬಿಟ್ಟು ಬೇರೆ ಪ್ರದೇಶದಲ್ಲಿ ಬೆಟರ್‌ಮೆಂಟ್ ಲೆವಿ ಹಾಕುವುದು ಸರಿಯಲ್ಲ. ಎಲ್ಲಿ ಈ ಸ್ಕೀಮು ಜಾರಿಗೆ ಬರುತ್ತೋ ಅಲ್ಲಿ ಆಸ್ತಿಗಳ ಬೆಲೆ ಹೆಚ್ಚಾಗಬಹುದು. ಅಂಥ ಸ್ಥಳದಲ್ಲಿರತಕ್ಕವರು ಬೆಟರ್‌ಮೆಂಟ್ ಫೀ ಕೊಡತಕ್ಕದ್ದು ನ್ಯಾಯವಾದದ್ದು. ಅವರು ಕೊಡಲೇಬೇಕು. ಆದರೆ ಈ ಸ್ಕೀಮು ಜಾರಿಗೆ ತಂದ ಪ್ರದೇಶಕ್ಕೆ ಒಳಗಾಗದೆ ಆ ಪ್ರದೇಶದಲ್ಲಿ ಅಕ್ಕಪಕ್ಕದಲ್ಲಿರತಕ್ಕ ಅಜೂ ಬಾಜಿನಲ್ಲಿರತಕ್ಕ ಪ್ರದೇಶದ ಜನಗಳ ಮೇಲೆ ಈ ಬೆಟರ್‌ಮೆಂಟ್ ಫೀಯನ್ನು ಸರ್ಕಾರದವರು ಖಂಡಿತ ಲೆವಿ ಮಾಡಕೂಡದು. ಆದರೆ ಬಿಲ್ಲಿನಲ್ಲಿ ಅವರೂ ಸಹ ಕೊಡಬೇಕೆಂದು ವಿಧಿತವಾಗಿದೆ. ಇದು ನ್ಯಾಯವಾದದ್ದಲ್ಲ ಅಂತ ನನ್ನ ಅಭಿಪ್ರಾಯ. ಈ ಸ್ಕೀಮನ್ನು ಜಾರಿಗೆ ತಂದ ಪ್ರದೇಶದ ಅಜೂ ಬಾಜು ಇರತಕ್ಕ ಜಮೀನುಗಳನ್ನು ಮೊದಲಿಂದಲೂ ಅವರೇನು ಆ ಒಂದು ವ್ಯವಸಾಯಕ್ಕಾಗೇ ಉಪಯೋಗ ಮಾಡಿಕೊಂಡು ಬರುತ್ತಿದ್ದಾರೋ ಅಂಥಾವರ ಮೇಲೆ ಈ ಫೀ ಹಾಕುವುದು ಸರ್ವಥಹ ನ್ಯಾಯವಾದದ್ದಲ್ಲ. ಹಾಗಿಲ್ಲದೆ ಆ ಅಜುಬಾಜು ಜಮೀನಿನವರೂ ಸಹ ಆ ಜಮೀನನ್ನು ವ್ಯವಸಾಯಕ್ಕೆ ಉಪಯೋಗಿಸದೆ ಮನೆ ವಗೈರೆ ಕಟ್ಟಲು ಅಲ್ಲಿ ಸೈಟು ವಗೈರೆ, ಆಗ ತಾವು ಅವರ ಮೇಲೆ ಈ ಲೆವಿ ಹಾಕಬಹುದು. ಹಾಗೆ ಮಾಡದೆ ಕೇವಲ ಆ ಭೂಮಿಗಳನ್ನು ಅವರು ವ್ಯವಸಾಯಕ್ಕೇ ಬಳಸುತ್ತಿದ್ದರೆ ಅಂಥವರ ಮೇಲೆ ಈ ಬೆಟರ್‌ಮೆಂಟ್ ಲೆವಿ ಹಾಕುವುದು ಸರಿಯಾದದ್ದಲ್ಲ. ಈ ಬಗ್ಗೆ ಮಂತ್ರಿಗಳು ಸೂಕ್ತ ತಿದ್ದುಪಡಿಯನ್ನು ತಂದು ಈ ಲೋಪದೋಷವನ್ನು ಸರಿಪಡಿಸಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. SPEAKER.—I extend the time by half an hour.

5-00 P.M.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಶ್ರೀಮಾನ್ ಲಕ್ಕಪ್ಪನವರು ಹೇಳಿದ ಹಾಗೆ ಈ ಹೌಸಿಂಗ್ ಬೋರ್ಡ್ ಉತ್ತಮವಾದ ಕೆಲಸಗಳನ್ನು ಮಾಡಿಲ್ಲ. ಈ ಹೌಸಿಂಗ್ ಬೋರ್ಡಿನವರು ಮಾಡಿರತಕ್ಕ ಕೆಲಸಕಾರ್ಯಗಳನ್ನು ನೋಡಿದರೆ ನಾವು ತುಂಬಾ ಸಂಕಟಪಡಬೇಕಾಗಿದೆ. ಈ ಸಂಸ್ಥೆಯು ನ್ಯಾಯವಾಗಿ ಕೆಲಸ ಮಾಡಿದ್ದರೆ, ಈ ದೇಶ ಇಷ್ಟು ಹೊತ್ತಿಗೆ ಸ್ವಲ್ಪ ಸ್ವರ್ಗದ ಹತ್ತಿರ ಹೋಗಬೇಕಾಗಿತ್ತು. ಈ ಹೌಸಿಂಗ್ ಬೋರ್ಡು ಉತ್ತಮವಾದ ಕೆಲಸ ಕಾರ್ಯಗಳನ್ನು ಮಾಡದೆ ಇರುವುದರಿಂದ ಇದು ಬಹಳಮಟ್ಟಿಗೆ ಟೀಕೆಗೆ ಒಳಗಾಗಿದೆ ಎಂದು ನಾನು ಹೇಳಬೇಕಾಗಿವೆ. ಈಗ ಸದ್ಯಕ್ಕೆ ಬಂದಿರುವುದು ತುರ್ತು ಪರಿಸ್ಥಿತಿ. ಹಣವನ್ನು ಮಿತವ್ಯಯ ಮಾಡಬೇಕು. ಈಗ 25 ಜನ ಮಂತ್ರಿಗಳು ಇದ್ದಾರೆ. ಈ ಸಂದರ್ಭದಲ್ಲಿ ಈ ಹೌಸಿಂಗ್ ಬೋರ್ಡು ಮತ್ತು ಹೌಸಿಂಗ್ ಕಾರ್ಪೊರೇಷನ್ ಈ ಎರಡು ಸಂಸ್ಥೆಗಳ ಆಡಳಿತವನ್ನು ಮಂತ್ರಿಗಳೇ ವಹಿಸಿಕೊಂಡು ಆ ಬೋರ್ಡಿನ ಆಡಳಿತಕ್ಕೆ ಅನಾವಶ್ಯಕವಾಗಿ ನೇಮಕ ಮಾಡಿಕೊಂಡಿರತಕ್ಕ ಅಧ್ಯಕ್ಷರು ಮತ್ತು ಅಧಿಕಾರಿಗಳನ್ನು ತೆಗೆದು ಅವರಿಗೆ ಖರ್ಚಾಗತಕ್ಕಂಥ ಹಣದಲ್ಲಿ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟರೆ ಬಹಳ ಒಳ್ಳೆಯದು. ಶ್ರೀಮಾನ್ ದೇವರಾಜ ಅರಸ್ ಅವರು ಬಹಳ ದಿವಸಗಳಿಂದ ಮಂತ್ರಿಗಳಾಗಬೇಕೆಂದು ಪ್ರಯತ್ನ ಮಾಡುತ್ತಿದ್ದರು. ಈಗ ಮಂತ್ರಿಗಳಾಗಿದ್ದಾರೆ. ಅವರು ಸಾಧ್ಯವಾದಮಟ್ಟಿಗೆ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ನಾನು ನಂಬಿದ್ದೇನೆ.

ಇನ್ನೊಂದು ವಿಷಯ. ಈಗ ಸರ್ಕಾರಿ ನೌಕರರಿಗೆ ಯಾವ ರೀತಿ ವಯೋಪರಿಮಿತಿ ಇದೆಯೋ ಅದೇ ರೀತಿ ಈ ರಾಜಕೀಯ ಸಂತ್ರಸ್ಥರಿಗೂ ಒಂದು ವಯೋಮಿತಿಯನ್ನು ಗೊತ್ತುಮಾಡುವುದು ಒಳ್ಳೆಯದು. ಏತಕ್ಕೆಂದರೆ ಕೆಲವರಿಗೆ ಕೆಲಸ ಮಾಡುವುದಕ್ಕೆ ಶಕ್ತಿ ಇರುವುದಿಲ್ಲ. ಇಂಜಕ್ಷನ್ ತೆಗೆದುಕೊಳ್ಳುತ್ತಾರೆ. ತಿರುಗಾಡುವುದಕ್ಕೆ ಸಾಧ್ಯವಿಲ್ಲ. ಅಂಥಾ ಪರಿಸ್ಥಿತಿಯಲ್ಲಿರುತ್ತಾರೆ. ಪಾಪ ಅಂಥವರಿಗೆ ಕೆಲಸ ಮಾಡುವುದಕ್ಕೆ ಶಕ್ತಿ ಇರುವುದಿಲ್ಲ. ಈ ದೃಷ್ಟಿಯಿಂದ ರಾಜಕೀಯ ಸಂತ್ರಸ್ಥರಿಗೂ ಒಂದು ವಯೋಮಿತಿಯನ್ನು ಗೊತ್ತುಮಾಡಿದರೆ ಅದರಿಂದ ಅನೇಕ ತರಹ ಅನುಕೂಲವಾಗುತ್ತದೆ.

ಸಾಮಾನ್ಯವಾಗಿ ಹಳ್ಳಿಗಾಡಿನಲ್ಲಿರತಕ್ಕ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಬದಲಾಗಿ ಬರೀ ಬೆಂಗಳೂರಿನಲ್ಲಿ ಎಲ್ಲಾ ಹಣವನ್ನೂ ಖರ್ಚುಮಾಡಿರತಕ್ಕದ್ದು ನ್ಯಾಯವಾದ್ದಲ್ಲ. ಸರ್ಕಾರದವರು ಇಂಥಾದ್ದಕ್ಕೆ ಅವಕಾಶವನ್ನು ಕೊಡಬಾರದು. ಮೈಸೂರು ಸಂಸ್ಥಾನದಲ್ಲಿ ಮನೆಗಳು ಇಲ್ಲದೆ ಇರತಕ್ಕಂಥ ರೈತರ ಸಂಸಾರಗಳು ಎಷ್ಟೋ ಇವೆ. ಅವರೆಲ್ಲರೂ ಬಹಳ ಕಷ್ಟಪರಿಸ್ಥಿತಿಯಲ್ಲಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ವಾಸಮಾಡುವುದಕ್ಕೆ ಮನೆಗಳಿಲ್ಲದೆ ಇರುವ ರೈತರ ಸಂಸಾರಗಳು ಎಷ್ಟಿವೆ, ಅವರಿಗೆ ಮನೆಗಳನ್ನು ಕಟ್ಟಿಸಿಕೊಡಲು ಎಷ್ಟು ಹಣಬೇಕು, ಎನ್ನುವಂಥಾ ಒಂದು ಅಂದಾಜನ್ನು ತಯಾರಿಸಿ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡರೆ ಬಹಳ ಸಂತೋಷ. ಶ್ರೀಮಾನ್ ದೇವೇಂದ್ರಪ್ಪನವರು ಈಗಾಗಲೇ ಹೇಳಿದರು ಹಳ್ಳಿಗಾಡಿನಲ್ಲಿ ಜನಗಳು ವಾಸಕ್ಕೆ ಮನೆಗಳಿಲ್ಲದೆ ಸೋಗೆ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದಾರೆಂದು ಅವರು ಹೇಳಿರತಕ್ಕ ಮಾತು ನಿಜವಾಗಿಯೂ ಸತ್ಯಾಂಶವುಳ್ಳದ್ದಾಗಿದೆ.

ಕೆಲವು ಕಡೆ ಹೌಸಿಂಗ್ ಬೋರ್ಡಿನವರು ಕೆಲವು ಮನೆಗಳನ್ನು ಕಟ್ಟಿಸಿದ್ದಾರೆ. ಅವುಗಳಿಗೆ ಹಾಕಿರತಕ್ಕ ಸಾಮಾನುಗಳು ಬಹಳ ಕೀಳದರ್ಜೆಯ ಸಾಮಾನುಗಳು. ಕನ್‌ಸ್ಟ್ರಕ್ಷನ್ ಸ್ವಲ್ಪವೂ ಚೆನ್ನಾಗಿಲ್ಲ. ಈಗಾಗಲೇ ಮಳೆ ಬಂದರೆ ಸೋರುತ್ತಿವೆ. ಎಷ್ಟೋ ಮನೆಗಳು ಬಿದ್ದು ಹೋಗುವ ಸ್ಥಿತಿಯಲ್ಲಿವೆ. ಆಮೇಲೆ ಈ ಎನ್. ಇ. ಎಸ್. ಸ್ಕೀಮಿನ ಮುಖಾಂತರ ಕೆಲವು ಮನೆಗಳನ್ನು ಕಟ್ಟಿಸಿದ್ದಾರೆ. ಅವುಗಳ ಸ್ಥಿತಿಯೂ ಹೀಗೆಯೇ ಇದೆ. ಈಗ ಉದಾಹರಣೆಗೆ ಹೇಳುವುದಾದರೆ ಬೆಂಗಳೂರಿಂದ ಪೂನಾಕ್ಕೆ ಹೋಗುವ ಟ್ರೈನಿನಲ್ಲಿ ಯಾರಾದರೂ ಮಾನ್ಯ ಸದಸ್ಯರು ಹೋದರೆ ನೆಲಮಂಗಲದ ಹತ್ತಿರ ದೊಡ್ಡೇರಿ ಎನ್ನುವ ಊರು ಇದೆ. ಅದರ ಬಲಗಡೆ ಎನ್. ಇ. ಎಸ್. ಸ್ಕೀಮಿನವರು ಕೆಲವು ಮನೆಗಳನ್ನು ಕಟ್ಟಿದ್ದಾರೆ, ಅವುಗಳನ್ನು ನೋಡಬಹುದು. ಆ ಮನೆಗಳನ್ನು ನೋಡಿದರೆ ಈ ಯೋಜನೆಯನ್ನು ಮುಚ್ಚಿಬಿಡಿ

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ಎಂದು ಹೇಳಬಹುದು. ಅವು ಅಷ್ಟೊಂದು ಹೀನ ಸ್ಥಿತಿಯಲ್ಲಿವೆ. ಮಳೆಯ ಇರಿಚಲು ಹೊಡೆದು ಬಿದ್ದು ಹೋಗುವ ಸ್ಥಿತಿಯಲ್ಲಿವೆ.

ಆಮೇಲೆ ಇನ್ನೊಂದು ವಿಷಯ. ಈಗ ಈ ಹೌಸಿಂಗ್ ಬೋರ್ಡಿನ ಮುಖಾಂತರ ಮನೆಗಳನ್ನು ಕಟ್ಟಿಸಲು ಸಾಲ ಕೊಡಬೇಕಾದರೆ ಆ ಮನೆ ಇಂಥಾ ಟೈಪ್ ಇರಬೇಕು, ಇಂಥಾ ಡಿಸೈನ್ ಇರಬೇಕು, ಹೀಗೆಯೇ ಕಟ್ಟಬೇಕು ಎಂದು ಈ ಮಸೂದೆಯಲ್ಲಿದೆ. ಆದರೆ ರೈತರಿಗೆ ಮಾತ್ರ ಮನೆಗಳನ್ನು ಕಟ್ಟಿಸಿಕೊಳ್ಳಲು ಸಾಲ ಕೊಡುವಾಗ ಇಂಥಾ ಡಿಸೈನೇ ಇರಬೇಕು, ಇಂಥಾ ಟೈಪೇ ಇರಬೇಕು, ಹೀಗೆಯೇ ಕಟ್ಟಬೇಕು, ಇಷ್ಟೇ ಅಗಲ ಮತ್ತು ಉದ್ದ ಇರಬೇಕು ಎನ್ನುವಂಥಾ ಒಂದು ಕಂಡೀಷನ್ನನ್ನು ಹಾಕಬಾರದು. ರೈತ ತಾನು ವಾಸ ಮಾಡುವುದಕ್ಕೆ ಯಾವರೀತಿ ಬೇಕೋ ಆ ರೀತಿ ಅವನು ಮನೆಗಳನ್ನು ಕಟ್ಟಿಸಿಕೊಳ್ಳುವುದಕ್ಕೆ ಅವಕಾಶ ಕೊಡಬೇಕು.

ಇನ್ನು ಕೊನೆಯದಾಗಿ ಈ ಬೋರ್ಡುಗಳಿಗೆ ಬೇರೆ ಚೇರ್ಮನ್‌ಗಳನ್ನು ನೇಮಕ ಮಾಡುವುದನ್ನು ಬಿಟ್ಟು ಮಂತ್ರಿಗಳೇ ಯಾರಾದರೂ ಅದರ ಜವಾಬ್ದಾರಿಯನ್ನು ವಹಿಸಿಕೊಂಡು ಅಧಿಕಾರಿಗಳ ಮುಖಾಂತರ ಕೆಲಸಗಳನ್ನು ನಡೆಸಿದರೆ ಉತ್ತಮವಾದ ಕೆಲಸ ನಡೆಯುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, 1962ನೇ ಇಸವಿಯ ಮೈಸೂರು ರಾಜ್ಯದ ಗೃಹನಿರ್ಮಾಣ ಮಂಡಲಿಯ ವಿಧೇಯಕದ ಮೇಲೆ ಇದುವರೆವಿಗೂ ಅನೇಕ ಮಾನ್ಯ ಸದಸ್ಯರು ಮಾತನಾಡಿ ಇದಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ತಮ್ಮ ಬೆಂಬಲವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರೆಲ್ಲರಿಗೂ ಅಭಿನಂದಿಸುತ್ತೇನೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಈ ಹೊಸ ಬಿಲ್ಲಿನಲ್ಲಿ ಹಿಂದೆ ಜಾರಿಯಲ್ಲಿದ್ದಂತಹ ಒಂದು ಕಾನೂನನ್ನು ಸ್ವಲ್ಪ ಬದಲಾವಣೆ ಮಾಡಿ ಇದನ್ನು ತಮ್ಮ ಮುಂದೆ ಇಟ್ಟಿರುವುದೇ ಹೊರತು, ಇದರಲ್ಲಿ ಹೊಸದೇನೂ ಇಲ್ಲ. ಕೆಲವು ಮಾನ್ಯ ಸದಸ್ಯರು ಈ ವಿಧೇಯಕವನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕೆಂದು ಹೇಳಿದ್ದಾರೆ. ಈ ವಿಧೇಯಕವು ತೀರಾ ಹೊಸದಾಗಿದ್ದರೆ ಆಗ ಮಾನ್ಯ ಸದಸ್ಯರ ಸಲಹೆಯನ್ನು ನಾನು ಒಪ್ಪುತ್ತಿದ್ದೆ. ಇದು ಹೊಸದೇನು ಅಲ್ಲ. ನಾವು ಈ ಮಸೂದೆಯಲ್ಲಿ ಹೊಸದಾಗಿ ಸೇರಿಸಿರತಕ್ಕ ಭಾಗದಲ್ಲಿ ಯಾವ ಅನುಮಾನವಾಗಲೀ, ಲೋಪ ದೋಷಗಳಾಗಲೀ ಇವೆ ಎನ್ನುವುದನ್ನು ಯಾರೂ ತೋರಿಸಲಿಲ್ಲ. ಹಿಂದೆ ನಮ್ಮ ದೇಶದಲ್ಲಿ ಜಾರಿಯಲ್ಲಿದ್ದಂತಹ ಆಕ್ಟಿನಲ್ಲಿ ಇರತಕ್ಕದನ್ನೇ ಈ ಮಸೂದೆಯಲ್ಲಿ ಅಳವಡಿಸಿರುವುದರಿಂದ ಇದರಲ್ಲಿ ಹೊಸ ವಿಚಾರಗಳೇನೂ ಇಲ್ಲ. ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕಾದಂತಹ ಪ್ರಮೇಯವೂ ನನಗೆ ಕಂಡುಬರಲಿಲ್ಲ.

ಶ್ರೀಮಾನ್ ಗೋಪಾಲ ಗೌಡರು ಒಂದು ವಿಚಾರವನ್ನು ಹೇಳಿದರು. ಅದು ಏನೆಂದರೆ ಮುಖ್ಯವಾಗಿ ಇಂಥಾ ಸನ್ನಿವೇಶದಲ್ಲಿ ಈ ಬೋರ್ಡಿನ ಅಗತ್ಯವಿಲ್ಲ. ತುರ್ತು ಪರಿಸ್ಥಿತಿಗೆ ಅನ್ವಯಿಸುವ ರೀತಿಯಲ್ಲಿ ನಾವು ಕೆಲಸ ಕಾರ್ಯಗಳನ್ನು ಮಾಡಬೇಕಾಗಿದೆ. ಈಗ ಆದಷ್ಟು ಖರ್ಚನ್ನು ಕಡಿಮೆ ಮಾಡಬೇಕಾಗಿದೆ. ಇಂಥಾದ್ದರಲ್ಲಿ ಈ ಬೋರ್ಡಿನ ಅಗತ್ಯ ಏನಿತ್ತು ಎನ್ನುವ ಮಾತನ್ನೂ ಹೇಳಿದ್ದಾರೆ. ತುರ್ತು ಪರಿಸ್ಥಿತಿಯಲ್ಲಿ ನಮ್ಮ ಯೋಜನೆಯಲ್ಲಿರತಕ್ಕ ಎಲ್ಲಾ ಕೆಲಸ ಕಾರ್ಯಗಳನ್ನೂ ಸಂಪೂರ್ಣವಾಗಿ ನಾವು ಕೈ ಬಿಟ್ಟಿಲ್ಲ. ಏನ್ನುವಂತಾದ್ದನ್ನು ನಾನು ಅವರ ಸ್ಮರಣೆಗೆ ತರುತ್ತೇನೆ. ಪ್ಲಾನಿನಲ್ಲಿರುವ ಪ್ರಕಾರ ಈ ಹೌಸಿಂಗ್ ಯೋಜನೆಗೆ ನಾವು ಖರ್ಚು ಮಾಡಬೇಕಾದ ಹಣ 5 ಕೋಟಿ ರೂಪಾಯಿಗಳು. ಮನೆಗಳನ್ನು ಕಟ್ಟಿಸುವುದಕ್ಕೆ ಸಂಬಂಧಪಟ್ಟ ಎಲ್ಲಾ ಸ್ಕೀಮುಗಳಿಗೂ ಹೌಸಿಂಗ್ ಬೋರ್ಡಿನ ಮುಖೇನ ಖರ್ಚು ಮಾಡತಕ್ಕದ್ದು ಏನಿದೆಯೋ ಅದನ್ನು ನಾವು ಸಂಪೂರ್ಣವಾಗಿ ಕೈ ಬಿಟ್ಟಿದ್ದರೆ ಆಗ ಆ ಬೋರ್ಡಿನ ಮೈಂಟೆನೆನ್ಸಿಗಾಗಿ ಹಣವನ್ನು ಖರ್ಚು ಮಾಡುವುದು ಬೇಡ ಎಂದು ಮಾನ್ಯ ಸದಸ್ಯರು ಹೇಳುವುದನ್ನು ಒಪ್ಪುತ್ತಿದ್ದೆ. ಆದರೆ ಈ ಹೌಸಿಂಗ್ ಬೋರ್ಡಿನ ಆಕ್ಟಿವಿಟಿಗಳು, ಮನೆಗಳನ್ನು ಕಟ್ಟಿಸತಕ್ಕದ್ದು. ಇವುಗಳನ್ನು ನಿಲ್ಲಿಸಿಲ್ಲ. ತುರ್ತು ಪರಿಸ್ಥಿತಿಗೆ ಅನ್ವಯಿಸುವ ಹಾಗೆ ಕೆಲಸ ಕಾರ್ಯಗಳನ್ನು ಮಾಡಬೇಕು. ಆದ್ದರಿಂದ ಖರ್ಚನ್ನು ಸ್ವಲ್ಪ ಕಡಿಮೆ ಮಾಡಬೇಕಾಗುತ್ತದೆ. ಪ್ಲಾನಿನಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕಾಗುತ್ತದೆ.

ಇದರ ಪ್ರಕಾರ ಮನೆಗಳನ್ನು ಕಟ್ಟತಕ್ಕ ವಿಚಾರದಲ್ಲಿ ನಮ್ಮ ಖಾತೆ ತೀವ್ರಗತಿಯಿಂದ ಹೋಗುವುದು ಎಂದರೆ ಈಗಿರತಕ್ಕ ಗುರಿಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಬೇಕಾದೀತು. ಆದರೂ ಸಂಪೂರ್ಣವಾಗಿ ಮನೆ ಕಟ್ಟತಕ್ಕ ಕಾರ್ಯ ಚಟುವಟಿಕೆಯನ್ನು ನಿಲ್ಲಿಸಬೇಕೇ ಬೇಡವೇ ಎನ್ನುವುದಾದರೆ ಬಹುಶಃ ಮುಂದುವರಿಯಬಹುದು. ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾ ಇದ್ದೇನೆ. ಯಾವ ರೀತಿಯಲ್ಲೂ ಬೇಡವೇ ಬೇಡ ಎಂದರೆ ಈ ಬೋರ್ಡಿನ ಅಗತ್ಯತೆ ಇರುತ್ತಾ ಇರಲಿಲ್ಲ. ಗುರಿ ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವುದಕ್ಕೆ ಆದೀತು ಆದರೂ activity ಇರಲೇ ಬೇಕಾಗುತ್ತದೆ. ಬೋರ್ಡಿನ ಮುಖಾಂತರ ಮಾಡುವುದು ಬೇಡ ಎಂದರೆ ಇನ್ನಾವ ಏಜೆನ್ಸಿ ಮುಂಖಾತರ ಮಾಡಬೇಕು? ಕಾರ್ಪೊರೇಷನ್ ಇದೆ, ಸೊಸೈಟಿ ಇದೆ ಅದಕ್ಕೆ ಕೊಡಿ ಎಂದರೆ ನಿಜ ಅದಕ್ಕೂ ಒಪ್ಪೋಣ. ಇವು ಯಾವುವೂ ಮನೆಗಳನ್ನು ನೇರವಾಗಿ ಕಟ್ಟುವುದಿಲ್ಲ. ನೇರವಾಗಿ ಮನೆಗಳನ್ನು ಕಟ್ಟುವುದು ಹೌಸಿಂಗ್ ಬೋರ್ಡು. ಇದು ಸರ್ಕಾರದ ಏಜನ್ಸಿ ಆಗಿದೆ. ಸರ್ಕಾರದ ಹಣ ಹೌಸಿಂಗ್ ಬೋರ್ಡಿಗೆ ಹೋಗುತ್ತದೆ. ಅಲ್ಲಿಂದ ಕಾರ್ಪೊರೇಷನ್‌ಗೆ ಒಂದು ಭಾಗ ಹೋಗುತ್ತದೆ. ಕಾರ್ಪೊರೇಷನ್ ಮತ್ತೆ ತನಗೆ ಸೇರಿದಂಥ ಪ್ರೈಮರಿ ಸೊಸೈಟಿಗಳಿಗೆ ಹಣ ಒದಗಿಸುತ್ತದೆ. ಅವರು ತಮ್ಮ ಸದಸ್ಯರಿಗೆ ಇದನ್ನು ಸಾಲವಾಗಿ ಹಂಚುತ್ತಾರೆ. ಇದು ಅಲ್ಲಿ ನಡೆಯತಕ್ಕ ಕಾರ್ಯಚಟುವಟಿಕೆಯ ಕ್ರಮ. ಹೌಸಿಂಗ್ ಬೋರ್ಡ್‌ನ ಕಾರ್ಯ ಚಟುವಟಿಕೆ ಎಂದರೆ ಸೂಪರಿಂಟೆಂಡಿಂಗ್ ಇಂಜಿನಿಯರು, ಎಕ್ಸಿಕ್ಯೂಟಿವ್ ಇಂಜಿನಿಯರು ಅಸಿಸ್ಟೆಂಟ್ ಇಂಜಿನಿಯರು ಹೀಗೆಲ್ಲಾ ಇಂಜಿನಿಯರಿಂಗ್ ಸ್ಟಾಫ್ ಇದೆ. ಅವರು ತಮ್ಮದೇ ನೇರ

(ಶ್ರೀ ಡಿ. ದೇವರಾಜ ಅರಸ್)

ವಾದ ಚಟುವಟಿಕೆ ಇಟ್ಟುಕೊಂಡಿದ್ದಾರೆ. ಇಂಡಸ್ಟ್ರೀಯಲ್ ಲೇಬರ್ ಹೌಸಿಂಗ್ ಆಕ್ಟಿವಿಟೀಸ್ ನೇರವಾಗಿ ಹೌಸಿಂಗ್ ಬೋರ್ಡಿನ ಮುಂಖಾಂತರ ನಡೆಯುವ ವಿಚಾರ ತಮಗೆಲ್ಲಾ ಗೊತ್ತಿದೆ. ಶ್ರೀಮಾನ್ ಗೋಪಾಲ ಗೌಡರು ಮಿಡ್ಲ್ ಇನ್‌ಕಂ ಗ್ರೂಪ್ ವಿಷಯ ಹೇಳಿದ್ದಾರೆ. ಅವರಿಗೆ ಕೊಡತಕ್ಕ ಸಾಲ ಕಡಿಮೆ ಮಾಡಿ ಎಂದರೆ ಅರ್ಥ ಇದೆ. ಲೋ ಇನ್‌ಕಂ ಗ್ರೂಪ್‌ನವರು ಯಾರಿದ್ದಾರೆ ಅವರ ವಿಚಾರದಲ್ಲಿ ಯೋಚನೆ ಮಾಡುವುದು ಬೇಡ. ಅವರಿಗೆ ಮನೆ ಕಟ್ಟುವುದು ಬೇಡ ಎನ್ನುವುದು ಸರಿಹೋಗುತ್ತದೆಯೋ ಇಲ್ಲವೋ ಯೋಚನೆ ಮಾಡಬೇಕು. ಅವರಿಗೆ ಮನೆ ಕೊಡಬೇಕಾದೀತು. ಇದರಲ್ಲಿ ಬರುವವರೆಲ್ಲಾ 1200 ರೂಪಾಯಿ ವಾರ್ಷಿಕ ವರಮಾನ ಇರುವವರು ಇವರೇ ಹೆಚ್ಚು ಜನ ಇದ್ದಾರೆ. ಒಂದು ವೇಳೆ ಮನೆಕಟ್ಟಿ ಅವುಗಳನ್ನು ಕೊಡತಕ್ಕ ವಿಚಾರದಲ್ಲಾಗಲೀ ಅಥವಾ ಯಾವ ವರ್ಗದ ಜನಕ್ಕೆ ಸಾಲ ಸಿಕ್ಕಬೇಕೆಂದು ಕಾನೂನಿನ ರೀತ್ಯಾ ಹೇಳಿದ್ದೇವೆಯೋ ಆ ವರ್ಗದ ಜನಕ್ಕಲ್ಲದೆ, ಸಾಲ ತೆಗೆದುಕೊಳ್ಳುವುದಕ್ಕೆ ಯೋಗ್ಯತೆ ಇಲ್ಲದೆ ಇರತಕ್ಕವರು ಎಂದರೆ ಸಾಧಾರಣವಾಗಿರತಕ್ಕವರಿಗೆ ಏನಾದರೂ ಸಾಲ ಹೋಗಿ ದುರುಪಯೋಗವಾಗಿದ್ದ ಪಕ್ಷದಲ್ಲಿ ಆ ರೀತಿ ದುರುಪಯೋಗವಾಗುವುದಕ್ಕೆ ಅವಕಾಶ ಕೊಡಬಾರದು. ಬಹುಶಃ ಅಲ್ಲಿ ಲೋಪದೋಷ ಇರಬಹುದು, ಎಲ್ಲಿ ಎಂದು ಹೇಳುವುದಿಲ್ಲ. ಅದನ್ನು ಇನ್ನು ಸರಿಪಡಿಸುವುದಕ್ಕೆ ಖಂಡಿತವಾಗಿಯೂ ಸರ್ಕಾರ ಪ್ರಯತ್ನ ಪಡುತ್ತದೆ, ಆ ರೀತಿ ಯಾವ ರೀತಿ ಯಾರ ದುರುಪಯೋಗವಾಗದ ರೀತಿಯಲ್ಲಿ ನಡೆಯುವುದಕ್ಕೂ ಕೂಡ ನಾನು ಭರವಸೆಯನ್ನು ಕೊಡುತ್ತೇನೆ. ಇನ್ನೊಂದು ಮಾತು. ಬೋರ್ಡಿನಲ್ಲಿರತಕ್ಕ ಸದಸ್ಯರ ಸಂಖ್ಯೆ ಹೆಚ್ಚಾಗಬೇಕೆಂದು ಕೆಲವರೂ, ಇನ್ನೂ ಕೆಲವರು ಇದು ಜಾಸ್ತಿ ಅಂತಲೂ, ಚೇರ್ಮನ್‌ರನ್ನು ನೇಮಿಸತಕ್ಕ ವಿಚಾರದಲ್ಲಿ ನಿಮ್ಮ ಪಕ್ಷದರಿಗೇ ಕೊಟ್ಟುಕೊಳ್ಳುತ್ತಾ ಇದ್ದೀರಿ ಅಂತ ಕೆಲವರೂ ಆಕ್ಷೇಪಣೆ ಎತ್ತಿದ್ದಾರೆ. ಈಗ ಹಾಲಿ ಬೋರ್ಡಿನ ಸದಸ್ಯರು ಯಾರಿದ್ದಾರೆ ಎನ್ನುವುದನ್ನು ತಮಗೆ ತಿಳಿಸುತ್ತೇನೆ. ಖಾಸಗೀ ಜನರು ಯಾರೂ ಇಲ್ಲ. ಸದ್ಯದಲ್ಲಿ ಸದಸ್ಯರಾಗಿರುವವರು.—

Chairman, City Improvement Trust Board, Bangalore.

Chairman, City Impovement Trust Board, Mysore.

Labour Commissioner, Mysore, Bangalore.

President, Mysore Warehousing Corporation.

President, Mysore Chamber of Commerce, Bangalore.

Directer of Industries and Commerce.

ಹೀಗೆ ಈಗಿರತಕ್ಕ 6 ಜನ ಸದಸ್ಯರೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಯಾವುದಾದರೂ ಒಂದು ಸಂಸ್ಥೆಯ ಅಧಿಕಾರಿಗಳಾಗಿದ್ದಾರೆ. ಚೇರ್ಮನ್‌ರು ಮಾತ್ರ ನಾನ್ ಅಫೀಷಿಯಲ್ ಇದ್ದಾರೆ. ನಮ್ಮ ಕಾನೂನಿನಲ್ಲಿ ಅಡಗಿರತಕ್ಕದ್ದಾದರೂ ಏನೆಂದರೆ ಚೇರ್ಮನ್‌ರನ್ನು ನಾನ್ ಅಫೀಷಿಯಲ್‌ನ್ನೇ ಹಾಕಬೇಕೆಂದೇನೂ ಇಲ್ಲ ಅಫೀಷಿಯಲ್‌ನ್ನಾದರೂ ಹಾಕಬಹುದು.

ಶ್ರೀಮಾನ್ ಮುಕ್ಕಣ್ಣಪ್ಪನವರು ಕೆಲವು ಮಾತುಗಳನ್ನು ಹೇಳಿದರು. ಚೇರ್ಮನ್‌ರಿಗೆ, ಮೆಂಬರುಗಳಿಗೆ ಯಾವ ಯಾವ ರೀತಿ ದಿನ ಭತ್ಯ, ಸಂಬಳ ವಗೈರೆ ಕೊಡುತ್ತೀರಿ ಎಂದು ಕೇಳಿದರು. ಇದೆಲ್ಲಾ ಹೇಗೆ ಎಂದರೆ ಯಾವುದಾದರೂ ಇಂಥಾ ಬೋರ್ಡು ರಚನೆ ಆದರೆ, ಅದು ರಚನೆ ಆದ ಕಾಲದಲ್ಲೇ ಮೆಂಬರುಗಳಿಗೆ ಕೊಡತಕ್ಕ ಭತ್ಯ ವಗೈರೆಗಳನ್ನೆಲ್ಲಾ ಆಕ್ಟ್‌ನಲ್ಲಿ ನಮೂದಿಸುವುದಕ್ಕೆ ಸಾಧ್ಯವಿಲ್ಲ. ರೂಲ್ Making power ಇರುತ್ತದೆ. ಖಾಸಗೀ ಸದಸ್ಯರು ಇದ್ದರೆ ಅವರಿಗೆ ಕೆಲವು ಕಾನೂನುಗಳು ಇವೆ, ಯಾವ ರೀತಿ ಭತ್ಯ ಕೊಡಬೇಕೆಂಬುದು ಇದೆ ಅದು ಅವರಿಗೆ ಅನ್ವಯಿಸುತ್ತಿದೆಯೇ ಹೊರತು ಅದಕ್ಕಿಂತ ಹೆಚ್ಚಿಗೆ ಕೊಡುವುದಕ್ಕಾಗುವುದಿಲ್ಲ. ಚೇರ್ಮನ್‌ರಿಗೆ ಮಾತ್ರ ಇಷ್ಟು ಕೊಡಬಹುದು ಎಂದು ಸರ್ಕಾರದವರು ನಿಗದಿ ಮಾಡಬಹುದು. ಈಗ ಸದ್ಯದಲ್ಲಿ ಚೇರ್ಮನ್‌ರಿಗೆ ಹೌಸ್ ಅಲೋಯನ್ಸ್ ಮತ್ತು ಟಿ. ಎ. ಅಂತ ಹೇಳಿ 200 ರೂಪಾಯಿ ಕೊಡುತ್ತಾ ಇದ್ದಾರೆ. ಹೌಸಿಂಗ್ ಬೋರ್ಡಿನಲ್ಲಿ ಹಲವಾರು ವರ್ಷಗಳಿಂದ ಏನೇನು ಕೆಲಸ ನಡೆದಿದೆ ಎನ್ನುವುದನ್ನು ಹೇಳಬೇಕೆಂದು ಕೇಳಿದರು. ಅದನ್ನು ಸೂಕ್ಷ್ಮವಾಗಿ ನಾನು ತಿಳಿಸಿದ್ದೇನೆ. ಇತ್ತೀಚೆಗೆ 1450 ಮನೆಗಳನ್ನು ಎಲ್ಲೆಲ್ಲಿ ಕಟ್ಟಿದ್ದೇವೆ ಎಂಬುದನ್ನು ತಮಗೆ ತಿಳಿಸಿದ್ದೇನೆ. ಹೌಸಿಂಗ್ ಬೋರ್ಡಿಗೆ ನೇರವಾಗಿ ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ 70-85 ಲಕ್ಷ ರೂಪಾಯಿ ಅಲಾಟ್‌ಮೆಂಟ್ ಆಗಿತ್ತು 68-92 ಲಕ್ಷ ರೂಪಾಯಿ ಖರ್ಚಾಗಿದೆ. ಒಟ್ಟು 2500 ಮನೆಗಳನ್ನು ಕಟ್ಟಬೇಕೆಂದು ಗುರಿ ಇತ್ತು 2592 ಮನೆಗಳನ್ನು ಕಟ್ಟಿದೆ. ಅದೇರೀತಿ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ sanctioned loan 63-64 ಲಕ್ಷ ರೂಪಾಯಿ ಫಿಸಿಕಲ್ ಟಾರ್ಜಟ್ 2500 ಮನೆಗಳು expenditure 72 ಲಕ್ಷ No· of homes completed 2000. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಮೊದಲನೇ ವರ್ಷ 1961-62 ಕ್ಕೆ 400 ಮನೆಗಳನ್ನು ಕಟ್ಟಬೇಕೆಂದು ಗುರಿ ಇತ್ತು. 13 ಲಕ್ಷ ರೂಪಾಯಿ ಖರ್ಚಾಗಿದೆ 402 ಮನೆಗಳನ್ನು ಕಟ್ಟಿದೆ. ಒಟ್ಟನಲ್ಲಿ ನಾವು ಆಯಾಯ ಕಾಲಕ್ಕೆ ಎಷ್ಟು ಹಣವನ್ನು ಬೋರ್ಡಿಗೆ ಒದಗಿಸಿದ್ದೇವೆಯೋ ಅಷ್ಟು ಖರ್ಚಾಗಿದೆ. ಇಷ್ಟು ಮನೆಗಳನ್ನು ಕಟ್ಟಿದ್ದಾರೆ. ಬೋರ್ಡಿನವರು ಸರ್ಕಾರ ಎಷ್ಟು ಹಣ ಕೊಡುತ್ತದೆಯೋ ಅಷ್ಟನ್ನು ಮಾತ್ರ ಖರ್ಚುಮಾಡುತ್ತಾರೆ. ಅವರು ಬೇರೆ ರೀತಿಯಲ್ಲಿ ಹಣವನ್ನು ತಂದು ಮನೆ ಕಟ್ಟಿಲ್ಲ; ಈಗಲೂ ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜೆ. ಎಲ್. ಕಬಾಡಿ (ಬಾರ್ಡೋಲಿ).—ಡಿಸ್ಟ್ರಿಕ್ಟ್‌ವಾರು ವಿವರ ಹೇಳಲು ಸಾಧ್ಯವೇ?

ಶ್ರೀ ಡಿ. ದೇವರಾಜ್ ಅರಸ್.—ಡಿಸ್ಟ್ರಿಕ್ಟ್‌ವಾರು ಕ್ರಮ ಕೈಕೊಳ್ಳಲು ಅಡಚಣೆಯಿದೆ. ಲೋ ಇನ್ ಕಂಗ್ರೂಪ್ ಮತ್ತು ಸಬ್ಸಿಡೈಸಿಂಗ್ ಸ್ಕೀಂಗಳಲ್ಲಿ ಡಿಸ್ಟ್ರಿಕ್ಟ್‌ವಾರು ಕೆಲಸ ಮಾಡುವುದಕ್ಕಾಗುವುದಿಲ್ಲ. ಕೈಗಾರಿಕೆಗಳಿರುವ ಕಡೆ ಕೂಲಿಗಾರರಿಗೆ ವಸತಿಗಳನ್ನು ನಿರ್ಮಿಸಬೇಕಾಗುತ್ತದೆ. ಬೆಂಗಳೂರಿನಲ್ಲಿ ಹೆಚ್ಚು ಖರ್ಚಾಗಿರುವುದಕ್ಕೆ ಕಾರಣ ಅಲ್ಲಿ ಹೆಚ್ಚು ಕೈಗಾರಿಕೆಗಳಿವೆ.

ಭದ್ರಾವತಿ ವಿಚಾರ ದೇವೇಂದ್ರಪ್ಪನವರು ಕೇಳಿದರು. ಅಲ್ಲಿ ಕಾರ್ಮಿಕರಿಗಾಗಿ 600 ಮನೆಗಳನ್ನು ಕಟ್ಟಿದ್ದಾರೆ. ಇನ್ನೂ1,000-1,200 ಮನೆಗಳನ್ನು ಕಟ್ಟಬೇಕಾಗುತ್ತದೆ. ಅಷ್ಟನ್ನೂ ಏಕಕಾಲದಲ್ಲಿ ಕಟ್ಟಬೇಕಾದರೆ ಬಹಳ ಹಣ ಬೇಕು, ಸುಮಾರು ಒಂದು ಕೋಟಿ ರೂಪಾಯಿಗಳ ಮೇಲೆ ಬೇಕಾಗುತ್ತದೆ. ಅಲ್ಲಲ್ಲಿ ಕಟ್ಟುತ್ತಿರುವುದನ್ನು ಪೂರ್ಣ ಮಾಡಬೇಕಾಗುತ್ತದೆ. ಈ ಬಾಬಿಗೆ ಮೂರನೆಯ ಯೋಜನೆಯಲ್ಲಿ 80 ಲಕ್ಷ ರೂಪಾಯಿಗಳನ್ನೊದಗಿಸಿದೆ. ಅಷ್ಟೂ ದೊರೆಯುತ್ತದೆಯೋ, ಇಲ್ಲವೇ ಕಡಿಮೆಯಾಗುತ್ತದೆಯೋ, ಇಲ್ಲವೇ ಕಡಮೆಯಾಗುತ್ತದೆಯೋ ಗೊತ್ತಿಲ್ಲ. ಹಾಗಿರುವಾಗ ಭದ್ರಾವತಿಯಲ್ಲಿ ಎಲ್ಲರಿಗೂ ಕಟ್ಟಲೂ ಸಾಧ್ಯವಿಲ್ಲ. ಫೇಸ್ಡ್ ಪ್ರೋಗ್ರಾಂ ಪ್ರಕಾರ ಕಟ್ಟಬಹುದು.

ಶ್ರೀ ಡಿ. ಎಂ. ಸಿದ್ದಯ್ಯ.—(ಬಿಳಿಗೆರೆ) : ಲೇಬರ್ ಏರಿಯಾಕ್ಕೆಲ್ಲಾ ಸಮನಾಗಿ ಹಂಚಿಕೆಯಾಗಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಅನೇಕ ಕಡೆ ಆಗಿವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು ಮನೆಗಳನ್ನು ಕಟ್ಟಲಾಗಿದೆ ?

MR. SPEAKER.—The Hon'ble Minister will kindly remember that unless some members come to his rescue and make request for extension of time, I will have to put the Bill to guillotine,

Sri. C. J. MUKKANNAPPA.—Sir, I request that the time allotted for this Bill may kindly be extended by half hour.

MR. SPEAKER.—The Hon'ble member Sri Muckannappa has requested extension of time for this Bill by half an hour.

MEMBERS : Yes.

MR. SPEAKER. —The time limit allotted for this Bill is extended by half an hour.

ಶ್ರೀ ಡಿ. ದೇವರಾಜ ಅರಸ್.—ಶ್ರೀ ಮುಕ್ಕಣ್ಣಪ್ಪನವರು ಈ ಬೋರ್ಡಿನ ಆಕ್ಟಿವಿಟೀಸ್ ಏನು, ಮುಂದೆ ಎಷ್ಟು ಮನೆ ಕಟ್ಟುತ್ತಾರೆ ಎಂದು ಕೇಳಿದರು, ಒಂದು ಅಂದಾಜನ್ನು ತಯಾರಿಸಿದ್ದೇವೆ. ನಮ್ಮ ದೇಶದಾದ್ಯಂತ ಎಷ್ಟು ಖರ್ಚು ಮಾಡಬಹುದು, ಎಷ್ಟು ಮಾಡಿದೆ, ಈಗ ಮನೆಯಿಲ್ಲದಿರುವವರ ಪೈಕಿ ಎಷ್ಟು ಜನರಿಗೆ ಮನೆಗಳನ್ನೊದಗಿಸಬಹುದು ಎಂದು ಅಂದಾಜು ಮಾಡಿರುವುದನ್ನು ಮಾನ್ಯ ಸಭೆಯ ಅವಗಾಹನೆಗೆ ತರುತ್ತೇನೆ. ಪಟ್ಟಣಗಳು ಮತ್ತು ಗ್ರಾಮಾಂತರ ಪ್ರದೇಶ ಎಲ್ಲಕ್ಕೂ ಸೇರಿ ಬಹಳ ಸ್ವಲ್ಪ ಅಂದರೂ 180 ಕೋಟಿ ರೂಪಾಯಿ ಬೇಕಾಗುತ್ತದೆ. ಈಗ ಅರ್ಬನ್ ಏರಿಯಾದ ಜನಸಂಖ್ಯೆ 52·6 ಲಕ್ಷ ಇದೆ. ಅವರಿಗೆ 9 ಲಕ್ಷ ಮನೆಗಳಿವೆ. ಗ್ರಾಮಾಂತರ ಪ್ರದೇಶದ ಜನ ಸಂಖ್ಯೆಯು 183·2 ಲಕ್ಷ ಇದೆ. ಅವರಿಗೆ ಈಗಿರುವ 32.5 ಲಕ್ಷ ಮನೆಗಳು 5 ಜನರಿರುವ ಒಂದು ಸಂಸಾರಕ್ಕೆ ಒಂದು ಮನೆಯಂತೆ ಲೆಕ್ಕ ಹಾಕಿದರೆ ಅರ್ಬನ್ ಪ್ರದೇಶಕ್ಕೇ ಇನ್ನೂ 104 ಲಕ್ಷ ಮನೆಗಳು ಬೇಕು. ಗ್ರಾಮಾಂತರ ಪ್ರದೇಶಕ್ಕೆ ಇನ್ನೂ 36 ಲಕ್ಷ ಮನೆಗಳು ಬೇಕು. ಈಗ ಅರ್ಬನ್ ಪ್ರದೇಶದಲ್ಲಿ ಇನ್ನೂ ಒಂದು ಲಕ್ಷ ಜಾಸ್ತಿ ಕಟ್ಟಬೇಕು, ಗ್ರಾಮಾಂತರ ಪ್ರದೇಶದಲ್ಲಿ ಸುಮಾರು 5 ಲಕ್ಷ ಮನೆಗಳನ್ನು ಜಾಸ್ತಿಯಾಗಿ ಕಟ್ಟಬೇಕು. ಇದು 1961ನೆಯ ಇಸವಿ ಸೆನ್ಸಸ್ ಪ್ರಕಾರ ಲೆಕ್ಕ ಹಾಕಿರುವುದು. ಮತ್ತೆ ಹತ್ತು ವರ್ಷ ಕಳೆದ ಮೇಲೆ ಬೆಳೆಯುವ ಜನಸಂಖ್ಯೆ ಲೆಕ್ಕ ಇದರಲ್ಲಿ ಸೇರಿಲ್ಲ. ಅರ್ಬನ್ ಪ್ರದೇಶದಲ್ಲಿ ಒಂದು ಮನೆಗೆ 8 ಲಕ್ಷ ರೂಪಾಯಿ ಬೇಕೆಂದು ಲೆಕ್ಕ ಹಾಕಿದರೆ ಸುಮಾರು ಒಂದು ಲಕ್ಷ ಮನೆಗಳಿಗೆ 50 ಕೋಟಿ ರೂಪಾಯಿ ಬೇಕು. ಹಳ್ಳಿಗಳಲ್ಲಿ ಎರಡು ಸಾವಿರ ರೂಪಾಯಿ ಒಂದು ಮನೆಗೆ ಬೇಕೆಂದರೆ ಒಟ್ಟು ನೂರು ಕೋಟಿ ರೂಪಾಯಿ ಬೇಕಾಗುತ್ತದೆ. ಇದನ್ನೇ ಟಾರ್ಜೆಟ್ ಎಂದು ಭಾವಿಸುವುದಾದರೆ ಎಷ್ಟು ಹೆಚ್ಚು ಒದಗಿಸಲು ಸಾಧ್ಯ ಅಷ್ಟು ಬೇಗ ಟಾರ್ಜೆಟ್ ರೀಚ್ ಆಗಬಹುದು. ಈಗ ಮೂರನೆಯ ಯೋಜನೆಯಲ್ಲಿ 5 ವರ್ಷಗಳಿಗೆ ಎಲ್ಲಾ ರೀತಿಯ ಚಟುವಟಿಕೆಗೂ 5 ಕೋಟಿ ರೂಪಾಯಿಗಳನ್ನೊದಗಿಸಿದೆ. ಇದನ್ನು ಇನ್ನೂ ಪರೀಶೀಲಿಸಬೇಕಾಗುತ್ತದೆ. ತುರ್ತು ಪರಿಸ್ಥಿತಿಯಲ್ಲಿ ಹೆಚ್ಚಿಸುವುದು ಅಸಂಭವವಿದೆ. ವಸ್ತುಸ್ಥಿತಿ ಹೀಗಿದೆ.

ಶ್ರೀ ಎಸ್. ಶಿವಪ್ಪ.—ಎಷ್ಟು ವರ್ಷಗಳಲ್ಲಿ ಮನೆಗಳ ಅಭಾವವನ್ನು ನಿವಾರಣ ಮಾಡುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ನಾವೂ ನೀವೂ ಸೇರಿ ಕೂಲಂಕಷವಾಗಿ ಯೋಚಿಸೋಣ.

ಶ್ರೀ ಟಿ. ಡಿ. ದೇವೇಂದ್ರಪ್ಪ.—1961-62ಕ್ಕೆ ಗ್ರಾಮಾಂತರ ಪ್ರದೇಶಕ್ಕೆ ಮನೆಗಳಿಗಾಗಿ ಎಷ್ಟು ಹಣ ಒದಗಿಸಿದೆ ?

ಶ್ರೀ ಡಿ.ದೇವರಾಜ ಅರಸ್.—ಅದು ಬಡ್ಜೆಟ್ಟಿನಲ್ಲೇ ಇದೆ, ಸುಮಾರು 25ರಿಂದ 30 ಲಕ್ಷ ರೂಪಾಯಿಗಳ ವರೆಗಿರಬೇಕು. ಒಟ್ಟು ಗ್ರಾಮಾಂತರ ಪ್ರದೇಶದಲ್ಲಿ ಮನೆಕಟ್ಟಲು ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿರುವುದು ಒಂದು ಕೋಟಿ ರೂಪಾಯಿ ಎಂದು ಹಿಂದೆಯೇ ಈ ಸಭೆಯಲ್ಲಿ ತಿಳಿಸಿದ್ದೇನೆ. ಅದರಲ್ಲಿ ವರ್ಷೇ ವರ್ಷ ಸ್ವಲ್ಪ ಖರ್ಚಾಗುತ್ತದೆ.

ಶ್ರೀ ಅಣ್ಣಾರಾಯರು ಒಂದು ಶಂಕೆ ವ್ಯಕ್ತಪಡಿಸಿದ್ದಾರೆ. ತಾವು ಕೂಡ ಅಪ್ಪಣೆ ಕೊಡಿಸಿದ ಹಾಗೆ ಅಂಥ ಕಷ್ಟ ಕಾಣಲಿಲ್ಲ. 33ನೆಯ ಸೆಕ್ಷನ್ ಪ್ರಕಾರ

(ಶ್ರೀ ಡಿ. ದೇವರಾಜ್ ಅರಸ್).

ಅಕ್ವಿಜಿಷನ್ ಈ ಬೋರ್ಡ್‌ನವತಿಯಿಂದ ಮಾಡಬೇಕಾದರೆ ಪಬ್ಲಿಕ್ ಪರ್ಪಸ್ ಎಂದು ಪರಿಗಣಿಸಬಹುದು ಎಂದು ಸ್ಪಷ್ಟವಾಗಿದೆ. ಎರಡನೆಯದಾಗಿ 1894ನೆಯ ಇಸವಿಯ ಇಂಡಿಯಾ ಸರ್ಕಾರದ ಅಕ್ವಿಜಿಷನ್ ಆಕ್ಟ್ ಮೈಸೂರಿಗೂ ಅನ್ವಯಿಸುವುದು. ಅದರಲ್ಲಿ ನಮೂದಾಗಿರುವ ಪ್ರಕಾರ ಅಕ್ವಿಜಿಷನ್ ಆಗಬೇಕು.

Sri ANNA RAO GANAMUKHI.—"May also take steps." That power is given to the Board.

Sri D. DEVARAJ URS.—The Board may take steps. That has been subject to certain conditions. ಬೇರೆ ರೂಲ್ ಪ್ರಕಾರ ಎಂದು ಹೇಳಿದರೆ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ನೇಮಕಮಾಡಿರುವ ಅಧಿಕಾರಿ ಮೂಲಕ ಅಕ್ವಿಜಿಷನ್ ಮಾಡಬಹುದು. ಈ ಬೋರ್ಡ್ ಬೇರೆ ಯಾವ ರೀತಿಯಿಂದಲೂ ಮಾಡಲು ಸಾಧ್ಯವಿಲ್ಲ.

MR. SPEAKER.—The Board may take steps but it must be in the manner provided and not outside that.

ಶ್ರೀ ಡಿ. ದೇವರಾಜ ಅರಸ್.—ಹಾಗಿರುವುದರಿಂದ ಈಗ ವ್ಯಕ್ತಪಡಿಸಿರುವ ಅನುಮಾನ ಬರುವುದಿಲ್ಲ. Rule making power ಇಲ್ಲಿ ಸೇರಿಸಬಹುದೆಂದು ತೆಗೆದು ಹಾಕಿ ಟ್ರಿಬ್ಯೂನಲ್‌ಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ತಿಮ್ಮಪ್ಪಗೌಡರು ಮಾತನಾಡುವಾಗ betterment charge ವಿಷಯ ಹೇಳಿದ್ದಾರೆ. ಅವರು ವ್ಯಕ್ತಪಡಿಸಿರುವ ಶಂಕೆಗೆ ಸ್ವಲ್ಪಮಟ್ಟಿಗೆ ಆಧಾರವಿರಬಹುದು. ಆದಕಾರಣ ನಾನೊಂದು ತಿದ್ದುಪಡಿಯನ್ನು ಮಂಡಿಸಬೇಕೆಂದಿದ್ದೇನೆ. ಎಲ್ಲಿಯಾದರೂ ಒಂದು ಯೋಜನೆಯನ್ನು ಜಾರಿಗೆ ತಂದರೆ, ಅಕ್ಕ ಪಕ್ಕದ ಜಮೀನಿನಲ್ಲಿ ವ್ಯವಸಾಯ ಮಾಡಿದರೂ ಅದಕ್ಕೂ ಕೊಡಬೇಕೆ ಎಂದು ಅವರು ಕೇಳಿದರು. ವ್ಯವಸಾಯದ ಜಮೀನಿಗೆ ಕೊಡಬೇಕಾದದು ನ್ಯಾಯವಲ್ಲ, ನಿಜ. ಆ ವ್ಯವಸಾಯದ ಭೂಮಿಯಲ್ಲಿ ಉತ್ಪತ್ತಿ ಜಾಸ್ತಿಯಾಗುವುದಿಲ್ಲ. ಆದರೆ ಭೂಮಿಯ ಬೆಲೆ ಜಾಸ್ತಿಯಾಗುತ್ತದೆ. ಆ ಭೂಮಿಯನ್ನು ವ್ಯವಸಾಯವಲ್ಲದೆ ಇತರ ಕೆಲಸಗಳಿಗೆ ಪರಿವರ್ತನೆಮಾಡಲು ನಿವೇಶನಗಳಾಗಿ ಮಾಡಿ ಮಾರಾಟ ಮಾಡಿದಾಗ ಬೆಲೆ ಜಾಸ್ತಿಯಾಗುತ್ತದೆ. ಆದುದರಿಂದ ಆ ಭೂಮಿಯ ಮಾಲೀಕನ ಶ್ರಮವೇ ಇಲ್ಲದೆ ಭೂಮಿಗೆ ಜಾಸ್ತಿ ಬೆಲೆ ಬಂದರೆ, ಅದರಲ್ಲಿ ಒಂದು ಭಾಗವನ್ನು ಸರ್ಕಾರಕ್ಕೆ ಕೊಡಬೇಕೆಂದು ಇದರ ಉದ್ದೇಶ. ಬೆಂಗಳೂರು ಮತ್ತು ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡುಗಳ ಕಾನೂನುಗಳಲ್ಲಿ ಇದಕ್ಕೆ ಅವಕಾಶ ಮಾಡಿದೆ. ಇದನ್ನು ಬೊಂಬಾಯಿನ ಕಾನೂನಿನ ಪ್ರಕಾರ ತಂದಿರುವುದು. ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಶಂಕೆಗೆ ಅವಕಾಶವಿದೆ. ಆದಕಾರಣ ವ್ಯವಸಾಯದ ಭೂಮಿಗೆ, ಅದು ಹಾಗೆಯೇ ಇದ್ದರೆ ಅದ್ದಕ್ಕೆ ಅನ್ವಯಿಸಬಾರದೆಂಬುದನ್ನು ನಾನು ಒಪ್ಪುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದನ್ನು ಸರಿಯಾಗಿ ವಿಶದೀಕರಿಸಬೇಕು. ಯಾವುದೋಕಾರಣದಿಂದ bullion market ಹೆಚ್ಚಿದರೆ ಬಂಗಾರ ಮಾರುವವನಿಗೆ ಹೆಚ್ಚು ಕಂದಾಯ ಹಾಕುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಭೂಮಿಯ ಮಾಲೀಕನಿಗೆ ಖರ್ಚೇನೂ ಆಗಿರುವುದಿಲ್ಲ, ಅವನು ಶ್ರಮ ಪಟ್ಟಿರುವುದಿಲ್ಲ, ಹಾಗಿರುವಾಗ ಬೋರ್ಡಿನಿಂದ ಪಕ್ಕದಲ್ಲಿ ಲೇಔಟ್ ಆಗಿ ಅಲ್ಲಿಗೆ ವಿದ್ಯುಚ್ಛಕ್ತಿದೀಪ, ಚರಂಡಿ, ರಸ್ತೆ ಮುಂತಾದುವುಬಂದು, ಮನೆಗಳೂ ಆಗಿ ಜನವಸತಿಹೆಚ್ಚಿ ನೂರಾರುರೂಪಾಯಿ ಬಾಳುವ ಭೂಮಿಗೆ ಎರಡುಸಾವಿರ ಮೂರುಸಾವಿರ ರೂಪಾಯಿ ಬಂದರೆ ಆಗ ಆ ಭೂ ಮಾಲೀಕ betterment censs ಕೊಡಲೇ ಬೇಕು.

ಶ್ರೀ ಸಿ. ಜೆ. ಮುಕ್ಕಣಪ್ಪ.—ಯಾವುದೋಕಾರಣದಿಂದ ಮಾರಾಟದ ಬೆಲೆ ಜಾಸ್ತಿಯಾದರೆ ಅವನೇಕೆ ಕೊಡಬೇಕು?

MR. SPEAKER.—Betterment is always attributable to the scheme undertaken by the Government. It would not be there but for the scheme.

ಶ್ರೀ ಡಿ. ದೇವರಾಜ ಅರಸ್.—ಕೆಲವರು ಮಾನ್ಯ ಸದಸ್ಯರು ಸರ್ಕಾರಕ್ಕೆ ಬಹಳ ಹೆಚ್ಚಿನ ಅಧಿಕಾರವಿದೆ, ಬೋರ್ಡಿಗೆ ಇನ್ನೂ ಕೆಲವು ಅಧಿಕಾರಗಳಿರಬೇಕಾದುದು ಸಾಧು, ಅದರ ಕಾರ್ಯಚಟುವಟಿಕೆ ಹೆಚ್ಚಿನ ಕೆಲವು ಅಧಿಕಾರಗಳಿಲ್ಲದೆ ಸರಾಗವಾಗಿ ಸಾಗಲಾರದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹಿಂದೆ 1955ನೇಯ ಇಸವಿಯ ಕಾನೂನಿನಲ್ಲಿಯೂ ಇವೆಲ್ಲವೂ ಹೀಗೆಯೇ ಅಡಕವಾಗಿದ್ದುವು, ಈಗ ನಮ್ಮ ಅನುಭವಕ್ಕೆ ಬಂದಿರುವ ಪ್ರಕಾರ ಯಾವುದೇ ಯೋಜನೆಯನ್ನು ಬೋರ್ಡು ತಯಾರುಮಾಡಿದರೂ ಅದು ಸರ್ಕಾರದ ಒಪ್ಪಿಗೆಗೆ ಬರಬೇಕು. ಹಿಂದಿನಿಂದ ಇದು ನಡೆದುಕೊಂಡು ಬಂದಿದೆ, ಇದರಿಂದೇನೂ ತೊಂದರೆಯುಂಟಾಗಿಲ್ಲ. ಯಾವುದೇಯೋಜನೆ ನಿಧಾನವಾಗಿ ಬೋರ್ಡಿಗೆ ಅನಾನುಕೂಲವಾಗಿರುವುದಿಲ್ಲ. ಹಿಂದಿನ ಅನುಭವದ ಮೇಲೆ ಹಾಗೆಯೇ ಮುಂದುವರಿಸಬೇಕೆಂದು ಮಾಡಿದ್ದೇವೆ. ಒಂದು ವೇಳೆ ಹೆಚ್ಚಿನ ಅಧಿಕಾರವನ್ನು ಬೋರ್ಡಿಗೆ ಕೊಡಬೇಕೆಂದು ಕಂಡು ಬಂದರೆ ಆಗ ಆಲೋಚನೆಮಾಡೋಣ. ಸಧ್ಯದಲ್ಲಿ ಹತ್ತಾರುವರ್ಷಗಳಿಂದ ನಡೆದುಕೊಂಡು ಬಂದಿರುವ ಈ ಕಾನೂನಿನಲ್ಲಿ ತೊಂದರೆ ಕಂಡು ಬಾರದೇಯಿರುವುದರಿಂದ ಹಿಂದಿನ ರೂಪದಲ್ಲೇ ಮುಂದವರಿಸಿಕೊಂಡು ಬಂದಿದ್ದೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಇದರಿಂದ ಅವರು ತೃಪ್ತಿ ಪಟ್ಟುಕೊಳ್ಳಬಹುದೆಂದು ನಂಬಿದ್ದೇನೆ.

Sri SANJEEVANATHA IKALA (SURATKAL).—What is the necessity of having a Housing Corporation in between the Housing Board and the person who builds houses?

ಶ್ರೀ ಡಿ. ದೇವರಾಜ ಅರಸ್.—ನಾನು ಮೊದಲೇ ಅರಿಕೆ ಮಾಡಿದ್ದೇನೆ. ಹೌಸಿಂಗ್ ಕಾರ್ಪೋರೇಷನ್ ಎನ್ನುವುದರ ವಿಚಾರವನ್ನು ಶ್ರೀಮಾನ್ ಗೋಪಾಲ ಗೌಡರು ಸ್ಪಷ್ಟವಾಗಿ ಹೇಳಿದ್ದಾರೆ. ಸಹಕಾರ ಸಂಘಗಳ ಕಾನೂನೇನಿದಿಯೋ ಅದರ ಪ್ರಕಾರ ಆ ಕಾರ್ಪೋರೇಷನ್ ಪ್ರತಿಷ್ಠಿತವಾಗಿದೆ. 1950 ರಿಂದಲೂ ಇದೆ. ಈಗ ಅದು ಬೇಡವೆಂದು ಹೇಳುವ ಅಗತ್ಯವಿಲ್ಲ. ಒಂದು ವೇಳೆ ಅದರ ಕಾರ್ಯಚಟುವಟಿಕೆ ಸರಿಯಾಗಿಲ್ಲದಿದ್ದರೆ ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವರು ಅದನ್ನು ರದ್ದು ಮಾಡಬಹುದು. ಸರ್ಕಾರ ಅದಕ್ಕೆ ಹಣ ಕೊಡದೇಯಿರಬಹುದು. ಆದರೆ ಕಾನೂನಿನ ರೀತಿ ನಾವು ನೇರವಾಗಿ ಅದನ್ನು ರದ್ದು ಮಾಡುವ ಹಾಗಿಲ್ಲ. 1950ನೆಯ ಇಸವಿಯಲ್ಲಿ ಸ್ಥಾಪನೆಯಾದುದು ಕಾರ್ಪೋರೇಷನ್. 1955ರಲ್ಲಿ ಹೌಸಿಂಗ್ ಬೋರ್ಡ್ ಬಂದಿದೆ. ಈಗ ಮೈಸೂರು ಸರ್ಕಾರದವರು ಹೌಸಿಂಗ್ ಕಾರ್ಪೋರೇಷನ್ನಿಗೆ ನೇರವಾಗಿ ಹಣವನ್ನಾಗಲೀ ಸಿಬ್ಬಂದಿಯ ಖರ್ಚನ್ನಾಗಲೀ ಕೊಡುತ್ತಿಲ್ಲ. ಇಂಡಿಯಾ ಸರ್ಕಾರದಿಂದ ಬರುವ ಹಣದಲ್ಲಿ ಒಂದು ಭಾಗವನ್ನು ಆ ಕಾರ್ಪೋರೇಷನ್ನಿಗೆ ಕೊಡುತ್ತಿದ್ದೇವೆ. ಆ ಕಾರ್ಪೋರೇಷನ್‌ನವರು ಪ್ರೈಮರಿ ಸೊಸೈಟಿಗಳಿಗೆ ಹಣವನ್ನು ಕೊಡುತ್ತಿದ್ದಾರೆ. ಎರಡು ಮೂರು ಏಜೆನ್ಸಿಗಳಾಗುತ್ತವೆ, ಒಂದು ಕೈಯಿಂದ ಇನ್ನೊಂದು ಕೈಗೆ ಹಣ ಹೋದಾಗ ಬಡ್ಡಿ ಸೇಕಡ ನಾಲ್ಕನೆಯ ಒಂದು, ಅರ್ಧ ಹೀಗೆ ಹೆಚ್ಚಾಗುತ್ತದೆಂದು ಕೆಲವು ಕಡೆಯಿಂದ ಆಕ್ಷೇಪಣೆಗಳು ಬರುತ್ತಿವೆ. ನೇರವಾಗಿ ಪ್ರೈಮರಿ ಸೊಸೈಟಿಗಳಿಗೇಕೆ ಹಣ ಕೊಡಬಾರದೆಂದು ಕೇಳುತ್ತಿದ್ದಾರೆ. ಎಷ್ಟು ಮಟ್ಟಿಗೆ ಹೌಸಿಂಗ್ ಬೋರ್ಡು ನೇರವಾಗಿ ಕೊಡಬಹುದು, ಅಥವಾ ಸರ್ಕಾರದಿಂದ ಕೊಡಬಹುದು, ಎಷ್ಟುಮಟ್ಟಿಗೆ ಕಾರ್ಪೋರೇಷನ್ ಕೊಡಬಹುದು ಎಂಬುದನ್ನು ಯೋಚನೆ ಮಾಡಬಹುದು. ಒಂದು ವೇಳೆ ಯಾವುದಾದರೂ ಸೊಸೈಟಿ ನೇರವಾಗಿ ಸರ್ಕಾರದಿಂದ ಅಥವಾ ಹೌಸಿಂಗ್ ಬೋರ್ಡಿನಿಂದ ಸಾಲ ಪಡೆಯಬೇಕೆಂದು ಇಷ್ಟಪಟ್ಟರೆ ಆಗ ಯೋಚನೆ ಮಾಡಬಹುದು. ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡಿ, ಸಾಧ್ಯವಾದಷ್ಟು ಮಧ್ಯವರ್ತಿಗಳಿಂದ ಸಾಲದ ಹೊರೆ ಹೆಚ್ಚುವುದನ್ನು ತಪ್ಪಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಸರ್ಕಾರದವರೂ ದುಡ್ಡು ಕೊಡುತ್ತಾರೆ, ಹೌಸಿಂಗ್ ಕಾರ್ಪೋರೇಷನ್ನಿಗೂ ಹೌಸಿಂಗ್ ಬೋರ್ಡಿನವರು ದುಡ್ಡು ಕೊಡುತ್ತಾರೆ. ಈ ಡೂಪ್ಲಿಕೇಷನ್ ಏಕೆ? ಈ ಕಾರ್ಪೋರೇಷನ್ನಿಗೆ ಸರ್ಕಾರದವರು ದುಡ್ಡು ಕೊಟ್ಟು ಮತ್ತೆ ಇವರು ಏಕೆ ಕೊಡಬೇಕು? ಒಂದೇ ಏಜೆನ್ಸಿ ಇರಲಿ. ಇಲ್ಲವೇ ಕಾರ್ಪೋರೇಷನ್ ಇರಬೇಕು ಅಥವಾ ಹೌಸಿಂಗ್ ಬೋರ್ಡ್ ಇರಬೇಕು. ಕಾರ್ಪೋರೇಷನ್ 100 ಮನೆಗಳನ್ನು ಕಟ್ಟಿದರೆ ಇನ್ನೊಂದು ಕಾನೂನನ್ನು ಸಹಕಾರ ಶಾಖಾ ಮಂತ್ರಿಗಳು ಆ ಬಗ್ಗೆ ತರುವುದು ಸರಿಯಲ್ಲ. ಈ ಕಾರ್ಪೋರೇಷನ್ ಇರುತ್ತದೋ ಹೋಗುತ್ತದೋ ಗೊತ್ತಿಲ್ಲ. ಈ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟಿನೊಳಗೆ ಎರಡು ಏಜೆನ್ಸಿಗಳನ್ನು ಇಡುವುದು ಖಂಡಿತವಾಗಿ ಸರಿಯಲ್ಲವೆಂದು ನಾನು ಹೇಳುತ್ತೇನೆ. ಶ್ರೀಮತಿ ರತ್ನಮ್ಮ ಮಾಧವರಾವ್ ಅವರೂ ಸಹ ಈ ಮನೆಗಳನ್ನು ಕಟ್ಟುವ ಬಗ್ಗೆ ಏನೇನೋ ಅವತಾರಗಳು ಆಗಿ ಹೋಯಿತು ಎಂದು ಹೇಳಿದರು. ಆದ್ದರಿಂದ ಇದರಲ್ಲಿರತಕ್ಕ ಲೋಪದೋಷಗಳನ್ನು ಸರಿಮಾಡಲು ಸರ್ಕಾರದವರು ಕೂಡಲೆ ನೆರವಾಗಬೇಕು ಮತ್ತು ನೇರವಾಗಿ ಸಹಾಯ ಮಾಡಬೇಕು.

ಶ್ರೀ ಜಿ. ವಿ. ಗೌಡ.—ಕಾರ್ಪೋರೇಷನ್ ನೇರವಾಗಿ ಮನೆ ಕಟ್ಟುವುದಿಲ್ಲ. ಸಾಲ ಕೊಡುತ್ತಾರೆ.

ಶ್ರೀ ಡಿ. ದೇವರಾಜ್ ಅರಸ್.—ನಾನು ಈಗಾಗಲೇ ತಿಳಿಸಿದ್ದೇನೆ. ಕಾರ್ಪೋರೇಷನ್ನನ್ನು ರದ್ದು ಮಾಡುವ ಪ್ರಶ್ನೆ ಇಲ್ಲ. ಸರ್ಕಾರದವರು ಅದಕ್ಕೆ ಸಾಲ ಕೊಟ್ಟು ಅದರ ಮುಖಾಂತರ ಮನೆಗಳನ್ನು ಕಟ್ಟಿಸಬೇಕೇ ಬಿಡಬೇಕೇ ಎಂಬ ವಿಚಾರದಲ್ಲಿ ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆಗಳನ್ನು ನಾವು ಪರಿಶೀಲನೆ ಮಾಡುತ್ತೇವೆ. ಹತ್ತಾರು ವರ್ಷಗಳಿಂದಲೂ ಕೊಡುತ್ತಿದ್ದೇವೆ. ಅವರ ಕಮಿಟ್‌ಮೆಂಟ್ಸ್ ಈಗ ಎಷ್ಟು ಇವೆ, ಇನ್ನು ಎಷ್ಟು ದೂರ ಅವರಿಗೆ ಸಹಾಯ ಮಾಡಬೇಕು ಎಂಬುದನ್ನು ಸರ್ಕಾರದವರು ಈಗ ಖಂಡಿತವಾಗಿ ಮನಗಾಣಬೇಕು. ನಾವು ಹೀಗೆ ಸಹಾಯಮಾಡುತ್ತೇವೆ, ಹೀಗೆ ಸಹಾಯಮಾಡುತ್ತಿಲ್ಲ ಎಂಬುದನ್ನು ನೇರವಾಗಿ ಮಾನ್ಯಸದಸ್ಯರಿಗೆ ಹೇಳುವುದು ಸ್ವಲ್ಪ ಕಷ್ಟವಾಗುತ್ತದೆ. ಆದ್ದರಿಂದ ತಮ್ಮ ಸಲಹೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸಾಧ್ಯವಿದ್ದರೆ ಮಧ್ಯವರ್ತಿ ಏಜೆನ್ಸಿಯಿಂದ ನೇರವಾಗಿ ಮನೆ ಕಟ್ಟುವುದಕ್ಕೆ ಯಾವ ಮನುಷ್ಯ ಸಾಲ ತೆಗೆದುಕೊಳ್ಳುತ್ತಾನೋ ಅವನಿಗೆ ಬಡ್ಡಿದರ ಜಾಸ್ತಿ ಬೀಳದಂತೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಹುಚ್ಚೇಗೌಡ. — ಈಗ ಮಂತ್ರಿಗಳು ಅಪ್ಪಣೆ ಕೊಡಿಸಿದರು. ಮೂರನೆಯ ಪಾಂಚವಾರ್ಷಿಕ ಯೋಜನೆಗೆ ಒದಗಿಸಲಾದ ಐದು ಕೋಟಿ ರೂಪಾಯಿಗಳಲ್ಲಿ ಒಂದು ಕೋಟಿ ರೂಪಾಯಿಗಳನ್ನು ಗ್ರಾಮಾಂತರ ಜನಗಳಿಗೆ ಮಾತ್ರವೆಂದು ಇಟ್ಟಿದ್ದೀರಿ. ಲೆಖ್ಖಾಚಾರದ ಪ್ರಕಾರ 52 ಲಕ್ಷ, ಅರ್ಬನ್ ಪಾಪುಲೇಷನ್‌ಗೆ ಒಂದುಲಕ್ಷ ಮನೆಗಳು, ರೂರಲ್ ಪಾಪುಲೇಷನ್ ಕಡೆ 5 ಲಕ್ಷ ಮನೆಗಳು ಬೇಕು. 5ಲಕ್ಷ ಮನೆಗಳಾಬೇಕಾದವರಿಗೆ ಒಂದು ಕೋಟಿ, ಒಂದು ಲಕ್ಷ ಮನೆಗಳು ಬೇಕಾದವರಿಗೆ 4ಕೋಟಿ, ಹೀಗೆ ಕೊಟ್ಟರೆ ಇದು ನಿಜವಾಗಿ ಸರ್ಕಾರದ ನೀತಿಯೇ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಗ್ರಾಮಾಂತರ ಜನಗಳನ್ನು ಸುಮ್ಮನೆ ಪಟ್ಟಣಕ್ಕೆ ಸೆಳೆಯುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದೀರೋ ಅಥವಾ ಗ್ರಾಮಾಂತರ ವಾಸಿಗಳ ಕಡೆ ನಿರ್ಲಕ್ಷ್ಯಮಾಡಿ ಬರೀ ಲೇಬರ್ ಮತ್ತು ಪಟ್ಟಣವಾಸಿಗಳ ಕ್ಷೇಮವೇ ದೊಡ್ಡದು ಎಂದು ಭಾವಿಸಿದ್ದೀರೋ?

ಇನ್ನೊಂದು ವಿಷಯ. 3ನೆಯ ಪಾಂಚವಾರ್ಷಿಕ ಯೋಜನೆಯ ಪ್ರಕಾರ ಮೊದಲನೆಯ ವರ್ಷದಲ್ಲಿ ಒದಗಿಸಿರುವ 5 ಕೋಟಿ ರೂಪಾಯಿಗಳಲ್ಲಿ ಕೇವಲ 12 ಲಕ್ಷ ರೂಪಾಯಿಗಳನ್ನು ಈ ಬಾಬಿಗೆ ಒದಗಿಸಿದ್ದೀರಿ. ಆಂದಮೇಲೆ ಅದರಂತೆ ಈ ಮಸೂದೆಯ ಪಂಚವಾರ್ಷಿಕ ಯೋಜನೆ ಪೂರ್ತಿ 60 ಲಕ್ಷ ರೂಪಾಯಿಗಳು ಆಯಿತು. ಹೋದ ವರ್ಷ 63 ಲಕ್ಷ ರೂಪಾಯಿ

(ಶ್ರೀ ಡಿ. ದೇವರಾಜ್ ಅರಸ್)

ಗಳನ್ನು ಕೊಟ್ಟಿದ್ದೀರಿ. ವರ್ಷ ವರ್ಷಕ್ಕೆ ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣವೇನು? ಈ ಫಿಗರ್ಸ್, ಇನ್‌ಫ್ಲೇಟೆಡ್ ಎಮರ್ಜೆನ್ಸಿ ಹಿಂದಿರಲಿಲ್ಲವೇ? ಈಗ ಎಮರ್ಜೆನ್ಸಿ ಬಂದಮೇಲೆ ಇನ್ನೂ ಕಡಿಮೆಯಾಗುತ್ತಿತ್ತೋ ಏನೋ?

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರ ಸಲಹೆಯನ್ನು ನಾನು ಒಪ್ಪುತ್ತೇನೆ. ರೂರಲ್ ಹೌಸಿಂಗಿಗೆ ಜಾಸ್ತಿಯಾಗಿ ಹಣವನ್ನು ಅಲಾಟ್ ಮಾಡುವುದು ನ್ಯಾಯ. ಈಗ ಒಂದುಕೋಟಿ ರೂಪಾಯಿಗಳನ್ನು ಈ ಬಾಬಿಗೆ ಒದಗಿಸಿದ್ದೇವೆ. ಈಗಿನ ತುರ್ತು ಪರಿಸ್ಥಿತಿಯೊಳಗೆತಾವೇಸಾಧ್ಯವಿಲ್ಲವೆಂಬುದಾಗಿ ಹೇಳುತ್ತಿದ್ದೀರಿ.

ಶ್ರೀ ಬಿ. ಹುಚ್ಚೇಗೌಡ.— ಸರ್ಕಾರದ ಪಾಲಿಸಿಯನ್ನು ನಾನು ಹೇಳಿದ್ದು. ಅವರ ಅಭಿಪ್ರಾಯದಲ್ಲಿ ನಗರದಲ್ಲಿ ವಾಸಮಾಡತಕ್ಕವರಿಗೆ ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕು. ಹಳ್ಳಿಯವರಿಗೆ ಕೊಡಕೂಡದು ಎಂಬುದಾಗಿರಬಹುದು. ಅವರ ಐಡಿಯ, ಪಾಲಿಸಿ ಆ ರೀತಿ ಇದೆ. ಅದನ್ನೇ ಇದುವರೆವಿಗೂ ಕಂಟಿನ್ಯೂ ಮಾಡುತ್ತಿದ್ದಾರೆ. ಹಳ್ಳಿಯವರನ್ನು ನೆಗ್‌ಲೆಕ್ಟ್ ಮಾಡದೇ ಇರುವುದಕ್ಕೆ ಅಸಾಧ್ಯವೆಂದು ಅವರಿಗೆ ಕಾಣುತ್ತಿರಬಹುದು. ಪಟ್ಟಣದವರನ್ನೇನೂ ಯಾವವಿಧದಿಂದಲೂ ನೆಗ್‌ಲೆಕ್ಟ್ ಮಾಡಬಾರದು ಎಂಬ ಅಭಿಪ್ರಾಯ ಅವರಿಗಿದೆಯೆಂದು ನನಗೆ ತಿಳಿದು ಬರುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಹಳ್ಳಿಯವರನ್ನು ನೆಗ್‌ಲೆಕ್ಟ್ ಮಾಡುವುದಕ್ಕೂ ಪಟ್ಟಣವಾಸಿಗಳಿಗೆ ಒಂದು ಪ್ರೈಯಾರಿಟಿ ಕೊಡುವುಪಕ್ಕೂ ಈ ಸರ್ಕಾರ ಉದ್ದೇಶ ಪಟ್ಟಿಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹೇಗಾದರೂ ಮಾಡಿ ಜಗಲಿಗಳ ಮೇಲೆ ವಾಸಮಾಡಬಹುದು. ಕೆಲವು ಪಟ್ಟಣಗಳಲ್ಲಿ ಬೀದಿಗಳಲ್ಲಿಯೇ ಮಲಗುವ ಪರಿಸ್ಥಿತಿಯನ್ನು ನಾನು ನೋಡಿದ್ದೇನೆ.

(ಅದರಲ್ಲಿಯೂ ಕಡಿಮೆ ಆದಾಯ) ಬರುವವರು, ಸಣ್ಣಪುಟ್ಟ ನೌಕರರೇ ಆದಾಗಿಯೂ ಕೆಲವು ಕಾರ್ಖಾನೆಗಳಲ್ಲಿ ಬಡ ನೌಕರರಾಗಿರತಕ್ಕವರು ಅದರಲ್ಲಿಯೂ ಕಾರ್ಮಿಕವರ್ಗದವರು ಎಂದೇನಿದ್ದಾರೋ ಅವರು ನಿಜವಾಗಿ ಮಲಗುವುದಕ್ಕೆ ಸ್ಥಳವಿಲ್ಲದೆ ಬೀದಿಗಳಲ್ಲಿ, ಜಗುಲಿಗಳ ಮೇಲೆ ಮಲಗುತ್ತಿದ್ದಾರೆ. ಈ ಬೆಂಗಳೂರು ಪಟ್ಟಣದಲ್ಲಿ ಕೆಲವು ಸ್ಲಂ ಏರಿಯಾಗಳನ್ನು ನೋಡಿದರೆ ಸಾಕು. ಎಷ್ಟುಬೇಗ ಸಾಧ್ಯವೋ ಅಷ್ಟು ಅವರಿಗೆ ಆ ಜಾಗದಿಂದ ಬಿಡಿಸಿ ಒಳ್ಳೆಯ ಮನೆಗಳನ್ನು ಕಟ್ಟಿಸಿಕೊಡುವುದು ಸರ್ಕಾರದ ಪ್ರಥಮ ಕರ್ತವ್ಯವಾಗಿದೆ. ಇದನ್ನು ಬರೀ ಪಟ್ಟಣಗಳಲ್ಲಿಯೇ ಮಾಡುವುದಲ್ಲ. ಪಟ್ಟಣಗಳಲ್ಲಿರುವವರೇ ಜನರು, ಹಳ್ಳಿಗಳಲ್ಲಿರುವವರು ಜನರಲ್ಲ ಎಂಬ ಭಾವನೆ ಸರ್ಕಾರಕ್ಕೆ ಎಂದಿಗೂ ಇಲ್ಲ. ಈಗಿನ ತುರ್ತು ಪರಿಸ್ಥಿತಿಯಲ್ಲಿ ಕೊನೆಯಪಕ್ಷ ಪ್ರಾಣಿಗಳೂ ಸಹ ಮಲಗುವುದಕ್ಕೆ ಸಾಕಷ್ಟು ಸ್ಥಳವಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಇದೆಲ್ಲಾ ಹಳ್ಳಿಯವರನ್ನು ಆಕರ್ಷಣೆ ಮಾಡುವುದಕ್ಕೆಂದು ಕಾಣುತ್ತದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸೆಕ್ಷನ್ 4ರಲ್ಲಿ ಚೇರ್‌ಮನ್ನರನ್ನು ನೇಮಕ ಮಾಡುವ ವಿಷಯವನ್ನು ಹೇಳಿದ್ದೀರಿ. Leave of absence of chairman ಎಂಬ ಹೆಡ್ಡಿಂಗ್‌ನಲ್ಲಿ "any person whom the state Government appoints to act for the Chairman" ಎಂದು ಹೇಳಿದೆ. ಉಳಿದ ಸದಸ್ಯರಲ್ಲಿ ಒಬ್ಬರನ್ನು ಚೇರಮನ್ನರನ್ನಾಗಿ ಮಾಡುವುದು ಸರಿಯಲ್ಲವೇ?

ಇನ್ನು ಸೆಕ್ಷನ್ 13ರಲ್ಲಿ Meetings of the Board ಐಟಂನಲ್ಲಿ 13 ಜನ ಒಟ್ಟು ಸದಸ್ಯರಲ್ಲಿ ಕೋರಂಗೆ 8 ಜನರಿರಬೇಕೆಂದು ಹೇಳಿದರೆ ಅದು ತುಂಬಾ ಜಾಸ್ತಿಯಾಗುತ್ತದೆ. ಒಂದು ವೇಳೆ ಅದರ ಮೀಟಿಂಗ್, ಚೇರ್‌ಮನ್ ಪ್ರಿಸೈಡ್ ಆಗುವವರು ಇಲ್ಲದೇ ಹೋದರೆ ಎಲೆಕ್ಷನ್ ಆಗಬೇಕು ಎಂದು ಹೇಳಿದ್ದೀರಿ. ಅದಕ್ಕಿಂತ ಈ ಎರಡು ಸೆಕ್ಷನ್ನುಗಳನ್ನು ಸೇರುವ ಹಾಗೆ ಒಬ್ಬ ಡೆಪ್ಯುಟಿ ಚೇರ್‌ಮನ್ನರನ್ನು ನೇಮಕ ಮಾಡಿದರೆ ಇದು ಡಬ್ಬಲ್‌ಸಾಲ್ವ್ ಆಗುವುದಿಲ್ಲವೇ?

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರ ಸಲಹೆಯನ್ನು ವಿಚಾರ ಮಾಡೋಣ.

ಶ್ರೀ ಎಸ್. ಗೋಪಾಲ ಗೌಡ.—ಈ ಯೋಜನೆಯ ಪ್ರಕಾರ ಮೊದಲನೆ ಯೋಜನೆಯಲ್ಲಿ ಸುಮಾರು 2 ಸಾವಿರ, ಎರಡನೇ ಯೋಜನೆಯಲ್ಲಿ ಸುಮಾರು 2 ಸಾವಿರ, 3ನೇ ಯೋಜನೆಯಲ್ಲಿ 2 ಸಾವಿರ ಮನೆಗಳನ್ನು ಕಟ್ಟಲು ಸಾಧ್ಯವಿದೆಯೆಂದು ಹೇಳಿದರು. ಮತ್ತೊಂದು ಸ್ಕೀಂನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಲಕ್ಷ ಮನೆಗಳನ್ನು ಕಟ್ಟಿಸಬೇಕು ಅದಕ್ಕೆ 180 ಕೋಟಿ ರೂಪಾಯಿಗಳು ಬೇಕಾಗಿದೆಯೆಂದು ಹೇಳಿದರು. ಇಂತಹ ಸ್ಕೀಮನ್ನು ಕಾರ್ಯಗತ ಮಾಡುವ ಉದ್ದೇಶ ನಿಜವಾಗಿ ಈ ಸರ್ಕಾರಕ್ಕಿದೆಯೇ? ಅಂತಹ ಸ್ಕೀಮನ್ನು ತಯಾರು ಮಾಡಿ ಕಾರ್ಯಗತ ಮಾಡುವುವಕ್ಕೆ ಈಗಾಗಲೇ ನಮ್ಮ ಹತ್ತಿರ ಎಷ್ಟೋ ಜನ ಇಂಜನಿಯರ್ಸ್ ಇದ್ದಾರೆಂದು ಹೇಳಿದರು. ಆ ಇಂಜನಿಯರುಗಳ ಜೊತೆಗೆ ಹೆಂಚುಗಳನ್ನು ಮಾಡುವುದು, ಕಾರ್ಪೆಂಟರಿ ಕೆಲಸ, ಮನೆಗೆ ಬೇಕಾದ ಎಲ್ಲ ಸಾಮಾನುಗಳನ್ನು ಸರ್ಕಾರದವರು ಈ ಬೋರ್ಡ್ ಮೂಲಕ ಸಿದ್ಧ ಮಾಡಿಸಿ ಜನರ ಅಗತ್ಯತೆಗಳನ್ನು ಪೂರೈಕೆ ಮಾಡುವುದಕ್ಕೆ ಈಗ ಸುಮಾರು 8 ಸಾವಿರ ರೂಪಾಯಿಗಳು ಬೇಕಾಗಿದೆ. ಅಂತಹ ಸ್ಕೀಮನ್ನು ಸರ್ಕಾರದವರು ಈಗ ಯೋಚನೆ ಮಾಡುವುದಕ್ಕೆ ಸಾಧ್ಯವೇ?

ನಾವು ನೂರು ಕೋಟಿ ರೂಪಾಯಿನ ಯೋಜನೆಯನ್ನೂ ಹಾಕುವುದಕ್ಕೆ ಬರುತ್ತದೆ. ಆದರೆ ಇದರಲ್ಲಿ ಸ್ವಲ್ಪ ದುಡ್ಡಿನ ವಿಚಾರವಿದೆ. ನಮ್ಮಲ್ಲಿರತಕ್ಕ ಒಟ್ಟು ಮೊತ್ತವೆಷ್ಟು ಎಂಬುದನ್ನು ನೋಡಿಕೊಂಡು ಮಾಡಬೇಕಾದ್ದು ಉಚಿತ. ಶ್ರೀ ಮುಕ್ಕಣ್ಣಪ್ಪನವರು ಏನೋ ಒಂದು ಅಂದಾಜಿನ ಮೇಲೆ ಇಷ್ಟಾಗಬಹುದು ಎಂತ ಹೇಳುತ್ತಿದ್ದೀರೆಂದು ಹೇಳಿದರು. ಆದರೆ ನಾವು ಈ ಯೋಜನೆಗಳನ್ನು ಎಲ್ಲಿಯ ವರೆಗೆ ಬೆಳೆಸಬೇಕೆಂಬ

(ಶ್ರೀ ಎಸ್. ಗೋಪಾಲ ಗೌಡ)

ಮಾತು ಅದೇ ಬೇರೆ ಆಯಿತು. ಆದರೆ ಈಗ ಇರತಕ್ಕ ನಮ್ಮ ಟಾರ್ಜೆಟ್ಟಿನ ಪ್ರಕಾರ ಕೆಲಸ ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೇ ಎನ್ನುವ ಪರಿಸ್ಥಿತಿ ಇದೆ. ನಮ್ಮ ಈ ಇಂದಿನ ಪರಿಸ್ಥಿತಿ ಬದಲಾವಣೆಯಾದರೆ ನಾವು ಈ ಬಗ್ಗೆ ಇನ್ನೂ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಿದೆ. ಆದರೆ ಮನುಷ್ಯನಿಗೆ ಮುಖ್ಯವಾಗಿ ಮೊದಲು ಬೇಕಾದುದು ಅನ್ನ, ಅನಂತರ ಬಟ್ಟೆ, ಕಡೆಗೆ ವಾಸಕ್ಕೊಂದು ಸ್ಥಾನ. ಈಗಾಗಲೇ ನಾವು ಮೊದಲನೆಯದಕ್ಕೆ ಬೇಕಾದಷ್ಟು ಪ್ರಯತ್ನಗಳನ್ನು ನಡೆಸಿದ್ದೇವೆ. ಈಗ ಈ ಮೂರನೆಯ ಬಾಬಿಗೆ ಕೈ ಹಾಕಿದ್ದೇವೆ. ಆದರೆ ಇಂದಿನ ಪರಿಸ್ಥಿತಿಯನ್ನು ನಾವು ಈ ಬಾಬಿನಲ್ಲಿ ಎಷ್ಟು ದುಡ್ಡನ್ನು ಖರ್ಚು ಮಾಡಲು ಸಾಧ್ಯವಿದೆ ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ಇದು ಮುಖ್ಯವಾದ ವಿಚಾರ. ಈಗ ಪ್ರಾರಂಭದಲ್ಲಿ ಮನಗಳನ್ನು ಕಟ್ಟಿಸತಕ್ಕ ಯೋಜನೆಯನ್ನು ಪ್ರಾರಂಭಿಸಿದ್ದೇವೆ. ಆದರೆ ಈ ಗೃಹ ನಿರ್ಮಾಣಕ್ಕೆ ಬೇಕಾದ ಸಾಮಾನುಗಳ ಉತ್ಪತ್ತಿ ಮತ್ತು ಅವುಗಳ cost of production ತಗ್ಗಿಸತಕ್ಕ ವಿಚಾರವಾಗಿ ಕೆಲವು ಒಳ್ಳೆಯ ಸಲಹೆಗಳು ಈ ಮಸೂದೆಯ 30ನೇ ಕ್ಲಾಜಿನಲ್ಲಿ ಅಡಕವಾಗಿವೆ. ಈ ವಿಚಾರದಲ್ಲಿ ಹೌಸಿಂಗ್ ಬೋರ್ಡಿನವರೇನೂ ಪರಿಶೋಧನೆ ಮಾಡಲಿಲ್ಲ ಎಂತ ಹೇಳಿದರು. ಅದು ಸರಿಯಲ್ಲ. ಆದರೆ ಈ ವಿಚಾರದಲ್ಲಿ ಮೈಸೂರು ಇಂಜಿನಿಯರಿಂಗ್ ಕಾಲೇಜಿನಲ್ಲಿ ಪರಿಣತರು ಕೆಲವು ಪರಿಶೋಧನೆಗಳನ್ನೂ ಕೂಡ ಮಾಡಿದ್ದಾರೆ. ಈಗ ನಮಗೆ ಸ್ಥಳದಲ್ಲೇ ಒದಗತಕ್ಕ ಕಲ್ಲು, ಮಣ್ಣು ಮತ್ತು ಸುಣ್ಣ ಕಲ್ಲು ವಿಚಾರದಲ್ಲಿ ಅವು ಸುಲಭದರಲ್ಲಿ ದೊರೆಯುವಂತೆ ಮಾಡಿ ಹಳ್ಳಿಯ ಜನಗಳಿಗೆ ಕಡಿಮೆ ಖರ್ಚಿನಲ್ಲಿ ಮನೆಗಳನ್ನು ಮಾಡುತ್ತಿದ್ದೇವೆ. ಆದರೆ ಈ ವಿಚಾರದಲ್ಲಿ ಅನೇಕರು ಉತ್ತಮ ಸಲಹೆಯನ್ನು ನೀಡಿದ್ದಾರೆ. ಇದಕ್ಕೆಲ್ಲ ಅವಕಾಶ ಕಲ್ಪಿಸಲು ಕಾನೂನಿನಲ್ಲಿ ಅವಕಾಶ ಮಾಡಲಾಗಿದೆ.

MR. SPEAKER.—The question is:

"That the Mysore Housing Board Bill, 1962 be taken into consideration."

The motion was adopted.

SRI D. DEVARAJ URS.—Sir, I beg to move the following amendments to clause 2:

"1. That for item (g), the following item shall be substituted, namely :—

"(g) 'Corporation' means a Municipal corporation established under any law for the time being in force in the State ;"

"(2) That after item (o). the following item shall be inserted, namely :—

"(p) 'rent' means the amount payable to the Board in respect of the occupation of a Board premises and includes the charges for water and electricity payable in respect of water and electricity used or consumed in the premises."

"3. That items (p), (q), (r) and (s) shall be re-lettered as items (q), (r), (s and (t) respectively."

The third one is merely consequential.

MR. SPEAKER.—Amendments moved :—

"1. That for item (g), the following item shall be substituted, namely :—

"(g) 'Corporation' means a Municipal corporation established under any law for the time being in force in the State ;"

"2. That after item (o), the following item shall be inserted, namely :—

"(p) 'rent' means the amount payable to the Board in respect of the occupation of a Board premises and includes the charges for water and electricity payable in respect of water and electricity used or consumed in the premises."

"3. That Clauses (p), (q), (r) and (s) shall be relettered as clauses (q), (r), (s) and (t) respectively."

SRI D. DEVARAJ URS :—Sir, in the Bill, 'Corporation' was defined to mean the Municipal Corporation of Bangalore only. So, to enable inclusion of other Corporations, I have moved this first amendment giving clarification that:

"Corporation shall mean a Municipal corporation established under any law for the time being in force in the State."

The second amendment is with regard to the rent. Sir, it has been found by experience that sometimes in the case of Labour Housing Schemes, if a labourer does not choose to pay the rent nor the water charges, nor the electricity charges and leaves the house and goes away, then under the existing Bill provision is made to recover only the rent in section 59. So, only the rent has to be recovered from the employer who employs the labour as per this section. This rent, if it is left without proper definition, does not include the water charges and electricity charges which the labourer owes and these charges cannot be recovered from the employer on behalf of the labourer by the Board. In order to enable the Board, in any such eventuality to recover water and electricity, charges from the employer, this rent is defined and a separate clause is introduced, and consequentially the figures have been re-lettered.

Sri V. S. PATIL, Belgaum. I—Sir, I should like to oppose the second amendment moved by the Hon'ble Minister. As expained by him, this is meant for benefit of the employer as against the employee. Our exprience, so far as the industrial Towns and Cities is concerned, in Maharashtra, in Bombay, as well as in Sholapur, we have found that it is difficult to pay even the rent of these bulidings by the employees, *viz.*, labourers as their pay is very meagre and the rent that has to be paid by them is very high compared to their capacity to pay. On what basis the rent is to be fixed; whether it is on the basis of the expenses incurred in construction or the value of the land or the amenities supplied, is not stated in the Act. If the rent is high, then the whole intention of the Government in having this clause will be defeated. That is the actual experience in the Maharshtra State and so, I should like to say Sir, the definition is very vague.

Besides that, it has included the charges of water and electricity. So far as these items are concerned, unless there are separate meters for electricity and for water, how is the Board going to charge or assess separate levy for electricity as well as water ? It depends on the consumption of the persons concerned. Unless separate meters are fixed for every room which will be supplied to these labourers—because the Hon'ble Minister referred to only labourers and I am restricting to them only and it is not possible or feasible to fix meters for every room, which are one-room tenements, it is not possible fo assess their consumption. So, I submit that by keeping these things vague, the very purpose for which we are passing this law will be defeated. I should like the Hon'ble Minister to make this definition more clear and specific in order to avoid further trouble at the time of fixing the rate.

6·00 P.M.

Sri D. DEVARAJ URS.—I wish my Honourable friend had looked into sub-section (4) of section 59, wherein it is definitely stated that the rent shall be fixed "at such rate as may be prescribed taking into consideration the cost of construction of the accommodation, and the cost of maintenance of the accommodation." It is not as though the rent will be fixed arbitrarily. Moreover, this Labour Housing scheme is a Government of India sponsored scheme, where, the Government of India lends money and a portion of it is subsidised. Even under the existing practice, the water rate and electricity charges are to be paid by the worker who occupied the tenement. It is not as though by moving this amendment, we are levying this afresh on the worker. Even now, it is he who has got to pay this. Why I have moved the

(Sri D. DEVARAJ URS)

amendment is in the event of the occupier not paying the rent, from whom should the Board recover the rent ? sub-clause (ii) of 59 (5) says.

" Notwithstanding anything contained in any other enactment but subject to the provisions of any regulations, if any, under this Act, the emyloyer shall be entitled to recover the rent aid by him under clause (i) by deductions from the wages of the employee concerned, and not otherwise."

This clause gives power to the employer to recover the rent in the event of default. Then as regards the question of electricity charges and water rate, which should have been legitimately paid by the occupier of the House, if it is not paid, should we not enable the employer to recover that ? That is the question. So the " rent " is defined to include these two charges so that the employer is enabled to rocover.

MR. SPEAKER.—The suggestion of the Hon'ble Member is more on the practical side than the provisions.

I will put the amendments to the vote of the House.

The question is :

" That in clause 2, for item (g), the following item shall be substituted, namely :

' (g) ' Corporation ' means a Municipal corporation established under any law for the time being in force in the State ;"

The motion was adopted.

MR. SPEAKER—I will put the second amendment to vote.

The question is :

That in clause 2, after item (o), the following item shall be inserted, namely :—

' (p) ' rent ' means the amount payable to the Board in respect of the occupation of a Board premises and includes the charges for water and electricity payable in respect of water and electricity used or consumed in the premises."

The motion was adopted.

MR. SPEAKER.—I will put the third amendment.

The question is :

" That in clause 2, items (p), (q), (r) and (s) shall be relettered as items (q), (r), (s) and (t) respectively."

The motion was adopted.

MR. SPEAKER.—I will put the amended clause to the vote of the House. The question is :

" That clause 2 as amended stand part of the Bill."

The motion was adopted.

" Clause 2 as amended was added to the Bill."

MR. SPEAKER.—There are no amendments to clauses 3 to 9 and I will put them to the vote of the House.

Sri V. S. PATIL.—I wish to speak on clause 3 Sir, before it is voted. We will take these up tomorrow.

MR. SPEAKER—The time is over. I cannot possibly accept the request. I am sitting now to facilitate the passing of the Bill at the request of the Hon'ble House. Otherwise, it would have been guillotined.

Sri C. J. MUCKANNAPPA.—The Hon'ble Speaker had extended the time by half-an-hour and it is at the discretion of the Speaker it is extended for one hour.

MR. SPEAKER.—If the Hon'ble Members want me to stick to the time schedule, I have no objection. After all we will be sitting for five minutes more............

Sri C. J. MUCKANNAPPA.—Mr. Hutche Gowda wants to speak. Mr. Patil wants to speak.

MR. SPEAKER.—(Addresing Sri Patil,) What time will you require?

Sri V. S. PATIL.—I want at least half-an-hour to speak on all these clauses.

MR. SPEAKER.—Then you should have intimated to me much earlier. In fact, I called you and you were not here.

Sri V. S. PATIL.—Then I would have been given only five minutes which would not have been sufficient.

MR. SPEAKER.—It is the sense of the House to continue it tomorrow?

Sri D. DEVARAJ URS.—I have no objection, Sir.

MR. SPEAKER.—We should not weary the House too much. We will take it up tomorrow.

The House will rise and meet tomorrow at one O'clock.

The house adjourned at Ten minutes post Six of the Clock to meet again at One of the Clock on Friday the 14th December 1962.

WD177—GBPC—900—8-8-63